# ಕರ್ನಾಟಕ ವಿಧಾನ ಪರಿಷತ್ತು

9ನೇ ಜೂನ್ 2017
ಶುಕ್ರವಾರ

## ವಿಷಯಾನುಕ್ರಮಣಿಕೆ

**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**2618 – ವಿಶ್ವವಿದ್ಯಾಲಯಗಳಲ್ಲಿ ಲೋಕಲ್ ಇನ್‌ಸ್ಪೆಕ್ಷನ್ ಕಮಿಟಿಗಳಿಗೆ ಸದಸ್ಯರನ್ನು ನೇಮಿಸುವ ಬಗ್ಗೆ.**
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)

**2485 – ಕಾಲ್ಪನಿಕ ವೇತನ ಸಮಸ್ಯೆ ಬಗ್ಗೆ.**
- ಶ್ರೀ ಅರುಣ ಶಹಾಪೂರ
- ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)

**2522 – ಗೊಲ್ಲರ ಹಟ್ಟಿಗಳಿಗೆ ವಸತಿ ಕಲ್ಪಿಸುವ ಬಗ್ಗೆ.**
- ಶ್ರೀಮತಿ ಜಯಮ್ಮ
- ಶ್ರೀ ಎಂ.ಕೃಷ್ಣಪ್ಪ(ವಸತಿ ಸಚಿವರು)

**2479 – ವಾಜಪೇಯಿ ನಗರ ವಸತಿ ಯೋಜನೆ ಬಗ್ಗೆ.**
- ಶ್ರೀ ಕಾಂತರಾಜು(ಬಿಎಂಎಲ್)
- ಶ್ರೀ ಎಂ.ಕೃಷ್ಣಪ್ಪ(ವಸತಿ ಸಚಿವರು)

**2584 – ಮಕ್ಕಳ ಹಕ್ಕುಗಳ ಗ್ರಾಮಸಭೆ ಬಗ್ಗೆ.**
- ಡಾ:ಜಯಮಾಲ
- ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**2574 – ಸರ್ಕಾರಿ ಶಾಲೆಗಳ ದುರಸ್ತಿ ಬಗ್ಗೆ**
- ಶ್ರೀ ಟಿ.ಎ.ಶರವಣ
- ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಔಕಾಫ್ ಸಚಿವರು)

**2588 – ಬಳ್ಳಾರಿ ಜಿಲ್ಲೆಯಲ್ಲಿ ಬರುವ ಹೂವಿನ ಗಡಗಲಿ ತಾಲ್ಲೂಕನ್ನು ಶೈಕ್ಷಣಿಕ ಜಿಲ್ಲೆಯನ್ನಾಗಿ ಘೋಷಿಸುವ ಬಗ್ಗೆ.**
- ಶ್ರೀ ಅಮರನಾಥ ಪಾಟೀಲ್
- ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಔಕಾಫ್ ಸಚಿವರು)

**2462 – ಕೊಡಗು ಜಿಲ್ಲೆಯ ಶಿಥಿಲಾವಸ್ಥೆಯಲ್ಲಿರುವ ಶಾಲೆಗಳ ದುರಸ್ತಿ ಮಾಡದಿರುವ ಬಗ್ಗೆ.**
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿಯವರ ಪರವಾಗಿ)
- ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಔಕಾಫ್ ಸಚಿವರು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2640 – ಶಿಕ್ಷಕರ ಹುದ್ದೆಗಳನ್ನು ಸಿ.ಇ.ಟಿ.ಮೂಲಕವೇ ತುಂಬುವ ಬಗ್ಗೆ.**
– ಶ್ರೀಮತಿ ತಾರಾಅನೂರಾಧ
– ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಔಕಾಫ್ ಸಚಿವರು)

**2617 – ಮಂಗಳೂರು ವಿಮಾನ ನಿಲ್ದಾಣದ ರನ್‌ವೇ ಅನ್ನು ವಿಸ್ತರಿಸುವ ಯೋಜನೆಯ ಬಗ್ಗೆ**
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**2569 – ಅಕ್ರಮ ಮರಳು ಸಾಗಾಣಿಕೆ ಬಗ್ಗೆ**
– ಶ್ರೀ ಭಾನುಪ್ರಕಾಶ್
– ಶ್ರೀ ವಿನಯ ಕುಲಕರ್ಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು)

**2641 – ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ತೆರವಾದ ಹುದ್ದೆಗಳನ್ನು ತುಂಬಿಕೊಳ್ಳುವ ಬಗ್ಗೆ.**
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಔಕಾಫ್ ಸಚಿವರು)

**2467 – ಕುಡಿಯುವ ನೀರಿನ ಬಿಲ್ಲುಗಳು ಪಾವತಿಯಾಗದೇ ಬಾಕಿಯಿರುವ ಬಗ್ಗೆ**
– ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)
– ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

2. **ಸಭಾಪತಿಯವರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

**ಅ) ಹೊಸ ಮರಳು ಹರಾಜು ನಿಯಮಗಳನ್ವಯ ಕ್ರಮ ಕೈಗೊಳ್ಳದಿರುವ ಬಗ್ಗೆ.**

ಶ್ರೀ ಪ್ರದೀಪ ಶೆಟ್ಟರ್
ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

**ಆ) ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಬಿ.ಸಿ.ಎಂ ಮಹಿಳಾ ಹಾಸ್ಟೆಲ್‌ಗಳಲ್ಲಿ ಪುರುಷ ವಾರ್ಡನ್‌ಗಳಿರುವ ಬಗ್ಗೆ**

ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

**ಇ) ಎಂಡೋಸಲ್ಫಾನ್ ಕ್ರಿಮಿ ನಾಶಕ ಔಷಧದಿಂದ ಉಂಟಾಗಿರುವ ದುಷ್ಪರಿಣಾಮದ ಬಗ್ಗೆ**

ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಈ) ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಪಟ್ಟಣದಲ್ಲಿ ಬಾಲಕರ ಜೂನಿಯರ್ ಕಾಲೇಜ್ ಕಟ್ಟಡವು ಶಿಥಿಲಗೊಂಡಿರುವ ಬಗ್ಗೆ.**

ಶ್ರೀಮತಿ ಮೋಟಮ್ಮ
ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

**೩. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

**ಅ) ವಿಜಯಪುರ ಜಿಲ್ಲೆಯಲ್ಲಿ ಅಕ್ರಮವಾಗಿ ಮರಗಳನ್ನು ಕಡಿದು ಸಾಗಿಸುತ್ತಿರುವ ಬಗ್ಗೆ ಶ್ರೀ ಬಸವನಗೌಡ ಆರ್.ಪಾಟೀಲ್(ಯತ್ನಾಳ್)ರವರ ಪ್ರಸ್ತಾವ**

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)(ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರ ಪರವಾಗಿ)

**ಆ) ರಾಜ್ಯದ ಹಲವಾರು ನಗರ ಪ್ರದೇಶಗಳಲ್ಲಿ ಬಡ್ಡಿ ಅಭಿಷಕ್ಕೋಳಗಾಗಿ ಹಣ ಕಳೆದುಕೊಂಡಿರುವ ಪ್ರಕರಣಗಳ ಬಗ್ಗೆ ಶ್ರೀ ಶ್ರೀನಿವಾಸ ಮಾನೆಯವರ ಪ್ರಸ್ತಾವ**

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)(ಗೃಹ ಸಚಿವರ ಪರವಾಗಿ)

**ಇ) ಶ್ರೀ ರಮೇಶ್, ಮರಾಠ ಭಾಷಾ ಉಪನ್ಯಾಸಕರು, ಜನತಾ ಪದವಿ ಪೂರ್ವ ಕಾಲೇಜು, ಬೀದರ್ ಇವರ ವೇತನ ತಡೆ ಹಿಡಿದಿರುವ ಬಗ್ಗೆ ಶ್ರೀ ಕೆ.ಟಿ.ಶ್ರೀಕಂಠೇಗೌಡ ಮತ್ತು ಶ್ರೀ ಅಮರನಾಥ್ ಪಾಟೀಲರವರುಗಳ ಪ್ರಸ್ತಾವ**

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

**4. ಗಮನಸೆಳೆಯುವ ಸೂಚನೆ**

**ರಾಜ್ಯದಲ್ಲಿ ಹೆಚ್ಚುತ್ತಿರುವ ರೋಗಿಗಳ ಪ್ರಮಾಣದಿಂದಾಗಿ “ಕರ್ನಾಟಕ ರಾಜ್ಯ ಮಧುಮೇಹ ಸಂಸ್ಥೆಗೆ” ಸೂಕ್ತ ಜಾಗದ ವ್ಯವಸ್ಥೆ, ಸಿಬ್ಬಂದಿ ಹಾಗೂ ವೈದ್ಯರ ಕೊರತೆ ನೀಗಿಸಿ ಸದರಿ ಸಂಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ**

ಶ್ರೀ ರಾಮಚಂದ್ರಗೌಡ
ಶ್ರೀ ವಿ.ಎಸ್.ಉಗ್ರಪ್ಪ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶ್ರೀ ರಮೇಶ್ ಬಾಬು
ಡಾ: ಶರಣಪ್ರಕಾಶ್ ಆರ್.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು)

*********

# <u>ಕರ್ನಾಟಕ ವಿಧಾನ ಪರಿಷತ್ತು</u>

ಶುಕ್ರವಾರ, 9ನೇ ಜೂನ್ 2017 ರಂದು

ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 05 ನಿಮಿಷಕ್ಕೆ

ಸಮಾವೇಶಗೊಂಡಿತು

ಸಭಾಪತಿಯವರಾದ

**(ಶ್ರೀ ಡಿ.ಹೆಚ್.ಶಂಕರಮೂರ್ತಿ)** ಅವರು

ಪೀಠದಲ್ಲಿ ಉಪಸ್ಥಿತರಿದ್ದರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 2618**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಒಂದು LIC (Local Inspection Committee) ಒಂದು ತಾಂತ್ರಿಕ ಕಾಲೇಜಿಗೆ ಭೇಟಿ ನೀಡಿ ಅದರ ಬಗ್ಗೆ ಸವಿಸ್ತರವಾಗಿ, ಪೇಪರ್‌ಗಳಲ್ಲಿ ಬಂದಿರುವುದನ್ನು ತಾವೆಲ್ಲರೂ ನೋಡಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಇದಕ್ಕೆ ಪೂರಕ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯಗಳಲ್ಲಿ ಸ್ಥಳೀಯ ತನಿಖಾ ಸಮಿತಿ ವತಿಯಿಂದ ಕಾಲೇಜುಗಳಿಗೆ ಭೇಟಿ ನೀಡಿದಾಗ ಕಾರ್ಯಕಾರಿಣಿ ಸದಸ್ಯರ ಜವಾಬ್ದಾರಿಗಳೇನು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಅಧಿಕಾರಿಗಳಿಂದ ಬಹಳ ಬುದ್ಧಿವಂತಿಕೆಯಿಂದ ಉತ್ತರವನ್ನು ಕೊಡಿಸಿದ್ದಾರೆ. ನಾನು ಕಾರ್ಯಕಾರಣಿ ಸದಸ್ಯರ ಜವಾಬ್ದಾರಿ ಏನೆಂದು ಕೇಳಿದ್ದೆ. ಅದಕ್ಕೆ ಅವರು ಸವಿಸ್ತಾರವಾಗಿ ವಿಶ್ವವಿದ್ಯಾಲಯಗಳ ಕಾಯಿದೆ ಪ್ರಕರಣ 59(6) ಪ್ರಕಾರ ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ವತಿಯಿಂದ ಸ್ಥಳೀಯ ತನಿಖಾ ಸಮಿತಿಯನ್ನು ರಚನೆ ಮಾಡಲಾಗುತ್ತದೆ. ಇದರ ಮೂಲ ಉದ್ದೇಶ ಇದೆಲ್ಲದರ ಬಗ್ಗೆ ಹೇಳಿದ್ದಾರೆ.

ನನ್ನ ಮೂಲಭೂತ ಪ್ರಶ್ನೆ ಏನೆಂದರೆ, ಕಾರ್ಯಕಾರಣಿ ಸದಸ್ಯರುಗಳ ಕರ್ತವ್ಯ ಏನು ಎನ್ನುವುದಾಗಿದೆ. ಅದರ ಜೊತೆಗೆ 2013 ರಲ್ಲಿ ಮಾನ್ಯ ಶ್ರೀ ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರು ಆಗಿದ್ದಂತಹ ಸಮಯದಲ್ಲಿ ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಸದಸ್ಯರನ್ನು ಕಾಲೇಜುಗಳ ಸಂಯೋಜನೆಯ ಸಂಬಂಧ ಸ್ಥಳೀಯ ಪರಿವೀಕ್ಷಣಾ ಸಮಿತಿಗೆ ಶಿಕ್ಷಣ ಕ್ಷೇತ್ರದ ಪರಿಣಿತ ಸದಸ್ಯರುಗಳನ್ನು ಮತ್ತು ಅವರ ಅಧ್ಯಕ್ಷತೆಯನ್ನು ನೇಮಿಸುವುದು ಮತ್ತು ಪರಿವೀಕ್ಷಣಾ ಸಮಿತಿಯ ವರದಿಯಲ್ಲಿ ಛಾಯಾಚಿತ್ರಗಳ ದಾಖಲೆಗಳನ್ನು ಅಳಡವಡಿಸುವುದು ಹಾಗೂ ಸಮಿತಿಯ ನಡವಳಿಕೆಗಳು ಮತ್ತು ವರದಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್‌ನಲ್ಲಿ ಹಾಕುವ ಬಗ್ಗೆ ಸೂಚನೆಗಳು ಎಂದು ಹೇಳಿ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 3–6–2013 ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ:-** ತಾವು ಏನು ಪ್ರಶ್ನೆಯನ್ನು ಕೇಳುತ್ತಿದ್ದೇವೆಂದು ಹೇಳಿದರೆ . .

**ಶ್ರೀ ಎನ್.ಅಪ್ಪಾಜಿಗೌಡ:-** ಇನ್ನು ನಾನು ಪೂರಕವಾಗಿ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಸಚಿವರು ತಮ್ಮ ಪ್ರಶ್ನೆ ಏನೆಂದು ಕೇಳುತ್ತಿದ್ದಾರೆ. Kindly ask him what do you want.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಸರ್ಕಾರದ ವತಿಯಿಂದ ನೀವು ಏನು ಸ್ಪಷ್ಟೀಕರಣ ಕೇಳುತ್ತಿದ್ದೀರಿ?

**ಶ್ರೀ ಎನ್.ಅಪ್ಪಾಜಿಗೌಡ:-** 2013 ರಲ್ಲಿ ಏನಾಗಿದೆ, ಕಾರ್ಯಕಾರಿ ಮಂಡಳಿಯ ಮತ್ತು ಸಿಂಡಿಕೇಟ್ ಸದಸ್ಯರುಗಳನ್ನು Local Inspection Committee ಗೆ ಹಾಕಬಾರದು ಎಂದು ಸರ್ಕಾರ ಬಂದಂತಹ ಹೊಸದರಲ್ಲಿ ತಾವೇ ಒಂದು ಆದೇಶ ಮಾಡಿದ್ದೀರಿ. ಮತ್ತೆ, ಅವರನ್ನು ನೀವು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೀರಿ. ಈ contradiction ಏತಕ್ಕೆ? ನೇಮಕ ಮಾಡದೇ ಅಲ್ಲಿಗೆ ಎಕ್ಸ್‌ಪರ್ಟ್ಸ್ ಕಳುಹಿಸಿದ್ದರೆ ಬಹುಶಃ ಒಂದು ಸಮಸ್ಯೆ ಬರುತ್ತಿರಲಿಲ್ಲ ಎನ್ನುವುದು ನನ್ನ ಉದ್ದೇಶ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆ ಅರ್ಥವಾಗಿಬಹುದು. ನೀವು ರದ್ದು ಮಾಡಿದ ಸದಸ್ಯರನ್ನೇ ಮತ್ತೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ ಎಂದು ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದ್ದು, ಅದಕ್ಕೆ ಸಚಿವರು ಉತ್ತರ ಹೇಳಬೇಕು.

**ಶ್ರೀ ಎನ್.ಅಪ್ಪಾಜಿಗೌಡ:-** ಇದರ ಜೊತೆಗೆ ಈ ಕಾರ್ಯಕಾರಿಣಿ ಸದಸ್ಯರನ್ನು ವಿಶ್ವವಿದ್ಯಾಲಯಗಳಿಗೆ ನೇಮಿಸುವಾಗ ಪಾಲಿಸಬೇಕಾದ ಮಾನದಂಡಗಳೇನು ಎನ್ನುವ ಪ್ರಶ್ನೆಗೆ ಉತ್ತರವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000 ರನ್ವಯ ವಿಶ್ವವಿದ್ಯಾಲಯವು ರಚಿಸಿರುವ ಪರಿನಿಯಮಾವಳಿ ನಿಗದಿಪಡಿಸಿರುವ ಮಾನದಂಡಗಳನ್ನು ಶಿಕ್ಷಣ ತಜ್ಞರನ್ನು ಸಿಂಡಿಕೇಟ್ ಸದಸ್ಯರನ್ನಾಗಿ ನೇಮಿಸಲಾಗುತ್ತದೆ ಎಂದು ಹೇಳಲಾಗಿದೆ. ಅದಕ್ಕೆ ನಮ್ಮ ಹೈಕೋರ್ಟ್ ಏನು ಹೇಳಿದೆ ಎಂದರೆ. . . ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನೇಮಕ ಮಾಡಿರುವುದರ ಬಗ್ಗೆ ನೀವು ಮತ್ತು ನಾವು ಪ್ರತಿದಿವಸವೂ ಚರ್ಚೆಯಲ್ಲಿದ್ದೇವೆ. ಅದಕ್ಕೆ ತಾವು ಉತ್ತರವನ್ನು ಕೊಟ್ಟಿದ್ದೀರಿ. ಜೊತೆಗೆ 2000 ಆಕ್ಟ್ ಪ್ರಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಒಂದು ವಿಶ್ವವಿದ್ಯಾಲಯಕ್ಕೆ ರಿಜಿಸ್ಟ್ರಾರ್ ನೇಮಕ ಮಾಡಬೇಕಾದರೆ. . . ಮೈಸೂರು ವಿಶ್ವವಿದ್ಯಾಲಯಕ್ಕೆ ನೀವು ರಿಜಿಸ್ಟ್ರಾರ್ ಆಯ್ಕೆ ಮಾಡಿದ್ದೀರಿ.

**ಸಭಾಪತಿಯವರು:-** ಇದು ಬೇರೆ ಪ್ರಶ್ನೆಯಾಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಇದು ಸಹ ಅದಕ್ಕೆ ಸಂಬಂಧಪಟ್ಟಿದ್ದೇ ಆಗಿರುತ್ತದೆ. ಇದು ಸಹ ಅದಕ್ಕೆ ಪೂರಕವಾಗಿ ಬರುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಒಪ್ಪಿಕೊಳ್ಳುತ್ತೇನೆ. ನೀವು ಕೇಳಿದ್ದು ಸರಿಯಿಲ್ಲವೆಂದು ನಾನು ಹೇಳುತ್ತಿಲ್ಲ. ಸಿಂಡಿಕೇಟ್ ಸದಸ್ಯರು ಮತ್ತು ಕಾರ್ಯಕಾರಣಿ ಸಮಿತಿ ಸದಸ್ಯರ ಬಗ್ಗೆ ತಾವು ಏನು ಕೇಳಿದ್ದಿರಿ, ಅದರ ಬಗ್ಗೆ ನಾನು ಹೇಳುತ್ತೇನೆ. ರಿಜಿಸ್ಟ್ರಾರ್ ರವರ ವಿಚಾರವಾಗಿ ನಾನು ಈಗಾಗಲೇ ನಾವು ಹೊಸ ಆಕ್ಟ್ ಪರಿಚಯಿಸುತ್ತಿದ್ದೇವೆ. ಆ ಸಂದರ್ಭದಲ್ಲಿ ತಾವು ಸಲಹೆಗಳನ್ನು ಕೊಡಬಹುದು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಈ ಸಿಂಡಿಕೇಟ್ ಮತ್ತು ಕಾರ್ಯಕಾರಿಣಿ ಸದಸ್ಯರ ಬಗ್ಗೆ ತಮಗೆ ಏನು ಮಾಹಿತಿ ಬೇಕು, ಅದರ ಬಗ್ಗೆ ನಾನು ಹೇಳುತ್ತೇನೆ. ಹೀಗಾಗಿ, ಈ ರಿಜಿಸ್ಟ್ರಾರ್ . . .

**ಸಭಾಪತಿಯವರು:-** ರಿಜಿಸ್ಟ್ರಾರ್ ರವರ ವಿಚಾರ ಈ ಪ್ರಶ್ನೆಯಲ್ಲಿ ಬರುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಅವರದ್ದು ಎರಡನೇ ಕ್ಲಾರಿಫಿಕೇಷನ್ ಇಷ್ಟೆ. ಈಗ ನೀವು ರಿಜಿಸ್ಟ್ರಾರ್‌ರವರನ್ನು ನೇಮಕ ಮಾಡುವಲ್ಲಿ ಕೇಂದ್ರ ಸರ್ಕಾರಿ ನೌಕರರನ್ನು . . . .

**ಸಭಾಪತಿಯವರು:-** ಶ್ರೀಕಂಠೇಗೌಡರೆ, ಅವರು ರಿಜಿಸ್ಟ್ರಾರ್ ಪ್ರಶ್ನೆಯನ್ನೇ ಎತ್ತಿರುವುದಿಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಅದು ಪೂರಕವಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ ಇದೆ. ಈಗ ನೀವು ಐಎಫ್ಎಸ್ ರವರನ್ನು ಹಾಕುತ್ತಿದ್ದೀರಿ. ಈಗ ಕೆ.ಎ.ಎಸ್. ಅಧಿಕಾರಿಗಳನ್ನು ಹಾಕಲು ಹೊರಟಿದ್ದೀರಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಅದರಲ್ಲಿ ತಪ್ಪೇನಿದೆ?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, 2000 ಇಸವಿಯ ಕಾನೂನು ಏನು ಹೇಳುತ್ತದೆ? ಅದರಲ್ಲಿ ಐಎಎಸ್ ಅಧಿಕಾರಿಗಳು, ಅದರಲ್ಲೂ ಕಾರ್ಯದರ್ಶಿ ಗ್ರೇಡ್‌ನವರನ್ನು ಹಾಕಬೇಕೆಂದು ಹೇಳಲಾಗಿದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, IAS Officers working in super time scale.

(642) 09.06.2017 ಎಸ್‌ಪಿಆರ್/ಜಿಆರ್ 11.10

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೆ.ಎ.ಎಸ್. ವೃಂದದ ಅಧಿಕಾರಿಯನ್ನು ನೇಮಿಸಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಈ ಹಿಂದೆ ಐ.ಎ.ಎಸ್. ವೃಂದದ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ವಿಷಯದ ಬಗ್ಗೆ ಬೇರೆ ರೂಪದಲ್ಲಿ ಚರ್ಚೆಯನ್ನು ಮಾಡೋಣ. ಪ್ರಸ್ತುತ ಪ್ರಶ್ನೆಗೆ ಸಂಬಂಧಪಟ್ಟ ವಿಚಾರಗಳನ್ನು ಮಾತ್ರವೇ ಚರ್ಚೆ ಮಾಡೋಣ. ಸಿಂಡಿಕೇಟ್ ಸದಸ್ಯರು, ಕಾರ್ಯಕಾರಿಣಿ ಕೌನ್ಸಿಲ್ ಸದಸ್ಯರ ಕಾರ್ಯಭಾರ ಮತ್ತು ಅವರುಗಳ ವಿರುದ್ಧ ಸ್ವೀಕೃತಗೊಂಡ ದೂರುಗಳ ವಿಷಯವು ಪ್ರಸ್ತಾಪವಾಗಿದೆ. ಇದರ ಪರಿಮಿತಿಯಲ್ಲಿ ತಾವು ಪ್ರಶ್ನೆಗಳನ್ನು ಕೇಳಿದರೆ ಸೂಕ್ತವಾಗಿರುತ್ತದೆ.

**ಸಭಾಪತಿಯವರು:-** ಶ್ರೀ ಕೆ.ಟಿ.ಶ್ರೀಕಂಠೇಗೌಡರೇ ತಾವು ಪ್ರಶ್ನೆಯನ್ನು ಓದಿ. ಸದಸ್ಯರು ಪರಿಶೀಲನಾ ಸಮಿತಿಯ ಬಗ್ಗೆ ಮಾತ್ರವೇ ಪ್ರಶ್ನೆಗಳನ್ನು ಕೇಳಿದ್ದಾರೆ. ರಿಜಿಸ್ಟ್ರಾರ್‌ರವರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. ನೀವು ಇಡೀ ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುತ್ತೀರೇನು?

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಡಿಯಲ್ಲಿ ಬರುವ ಎ.ಎಂ.ಸಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಾರ್ಯಕಾರಿಣಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರು ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಗೆ (ಎಲ್.ಐ.ಸಿ.) ಭೇಟಿ ನೀಡಿದ ಸಮಯದಲ್ಲಿ ನಡೆದ ಘಟನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಬಗ್ಗೆ ಕೇಳಿರುವ ಪ್ರಶ್ನೆಗೆ ಸರ್ಕಾರವು ಹೌದು ಎಂಬುದಾಗಿ ಉತ್ತರವನ್ನು ನೀಡಿದೆ. ಮುಂದುವರೆದು, ಸದರಿ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು? ಅದರ ಪೂರ್ಣ ವಿವರ ನೀಡಿ ಎಂಬುದಾಗಿಯೂ ಸಹ ಪ್ರಶ್ನೆಯನ್ನು ಕೇಳಲಾಗಿದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಸ್.ಅಪ್ಪಾಜಿ ಗೌಡರವರು ಸಿಂಡಿಕೇಟ್ ಸದಸ್ಯರು ಮತ್ತು ಕಾರ್ಯಕಾರಿಣಿ ಕೌನ್ಸಿಲ್ ಸದಸ್ಯರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ 2000ರ ನಿಯಮಾವಳಿಗಳನ್ವಯ ಸಿಂಡಿಕೇಟ್ ಸದಸ್ಯರಿಗೆ ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಯಲ್ಲಿ ಹೋಗಿ ಕಾಲೇಜುಗಳ ಸ್ಥಳ ಪರಿಶೀಲನೆ ಮಾಡಿ, ವರದಿಗಳನ್ನು ನೀಡುವುದಕ್ಕಾಗಿ ಖಂಡಿತವಾಗಿಯೂ ಅನುವು ಮಾಡಿಕೊಡಲಾಗಿದೆ. ತಾವು ಈ ಮೊದಲೇ ಹೇಳಿದಂತೆ 2013 ನೇ ಸಾಲಿನಲ್ಲಿ ಶ್ರೀ ದೇಶಪಾಂಡೆ ರವರು ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇದಕ್ಕೆ ಅವಕಾಶವನ್ನು ನೀಡಿರಲಿಲ್ಲ; ನಂತರದಲ್ಲಿ ನಿಯಮಾವಳಿಗಳನ್ನು ಮಾರ್ಪಡಿಸಿ ಅನುವು ಮಾಡಿಕೊಡಲಾಗಿದೆ ಎನ್ನುವ ಮಾತನ್ನು ಹೇಳಿದ್ದಿರಿ. ಹೌದು ಮಾನ್ಯ ಸದಸ್ಯರು ಹೇಳುತ್ತಿರುವ ಅಂಶವು ನಿಜವಾಗಿದೆ. ಏಕೆಂದರೆ ಕೆಲವು ಸಿಂಡಿಕೇಟ್ ಸದಸ್ಯರು ಉಚ್ಚ ನ್ಯಾಯಾಲಯದಲ್ಲಿ ಈ ವಿಚಾರದಲ್ಲಿ ಬಗ್ಗೆ ತಮಗೆ ಯಾವ ಅಧಿಕಾರವನ್ನೂ ನೀಡಿಲ್ಲ ಎಂಬುದಾಗಿ ಪ್ರಶ್ನೆಯನ್ನು ಮಾಡಿದ್ದಾರೆ. ಇದರ ಆಧಾರದ ಮೇಲೆ ನನ್ನ ಹಿಂದಿನ ಉನ್ನತ ಶಿಕ್ಷಣ ಮಂತ್ರಿಗಳು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ನಿಯಮಾವಳಿಗಳನ್ನು ಬದಲಾಯಿಸಿ, ಸಿಂಡಿಕೇಟ್ ಸದಸ್ಯರಿಗೆ ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಯಲ್ಲಿ ಹೋಗಿ, ವಿಚಾರಣೆ ಮಾಡಿ ವರದಿಯನ್ನು ನೀಡುವುದಕ್ಕೆ ಅನುವು ಮಾಡಿ ಕೊಟ್ಟಿದ್ದಾರೆ. ಹೀಗಾಗಿ ನಮ್ಮ ಆದೇಶದಲ್ಲಿ ಸ್ಪಷ್ಟತೆ ಇಲ್ಲ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಮ್ಮೆ ಸಿಂಡಿಕೇಟ್ ಸದಸ್ಯರಿಗೆ ಅಧಿಕಾರ ಕೊಟ್ಟಿಲ್ಲ ಹಾಗೂ ಇನ್ನೊಮ್ಮೆ ಕೊಟ್ಟಿದ್ದೇವೆ. ಹೀಗಾಗಿ ಹೊಸ ಕಾಯ್ದೆಯನ್ನು ಜಾರಿಗೆ ತರಲು ನಮ್ಮ ಸಚಿವ ಸಂಪುಟವು ಅನುಮೋದನೆಯನ್ನು ನೀಡಿದೆ. ಮುಂಬರುವ ಸೋಮವಾರದಂದು ಈ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಲಾಗುತ್ತಿದೆ. ಹೊಸ ಕಾಯ್ದೆಯಲ್ಲಿ ಎಲ್ಲಾ ಅಂಶಗಳ ಬಗ್ಗೆ ಸ್ಪಷ್ಟತೆಯನ್ನು ನಾನು ತಂದಿದ್ದೇವೆ. ತಾವೂ ಸಹ ಈ ಹಿಂದೆ ಉನ್ನತ ಶಿಕ್ಷಣ ಮಂತ್ರಿಗಳಾಗಿ ಕರ್ತವ್ಯವನ್ನು ನಿರ್ವಹಿಸಿದ್ದೀರಿ. ಹೀಗಾಗಿ ಎಲ್ಲಾ ವಿಚಾರಗಳು ತಮಗೆ ಗೊತ್ತಿವೆ. ಪ್ರಸ್ತುತ ಜಾರಿಯಲ್ಲಿರುವ ವಿಶ್ವವಿದ್ಯಾನಿಲಯ ಕಾಯ್ದೆಯಲ್ಲಿ ಕೆಲವು ಅಧಿಕಾರಗಳು ಸರ್ಕಾರಕ್ಕಿದೆ, ಕೆಲವು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಪಾಲರಿಗಿದೆ ಹಾಗೂ ಇನ್ನುಳಿದಂತೆ ಕೆಲವು ಸಿಂಡಿಕೇಟ್‌ಗೆ ಇದೆ. ಈ ಬಗ್ಗೆ ನಾವು ತಂದಿರುವ ಹೊಸ ಕಾಯ್ದೆಯಲ್ಲಿ ತುಂಬಾ ಸ್ಪಷ್ಟವಾಗಿ ಹೇಳಿದ್ದೇವೆ. ನಿಮ್ಮ ಭಾವನೆಯು ಸರಿಯಿದೆ ಹಾಗೂ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಎರಡನೆಯ ವಿಚಾರವೇನೆಂದರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಸದಸ್ಯರು ಎಂಬುದಾಗಿ ನಾವು ಅವರುಗಳನ್ನು ಸಂಭೋದಿಸುವುದಿಲ್ಲ. ಬದಲಾಗಿ ಅವರುಗಳನ್ನು ಕಾರ್ಯಕಾರಿಣಿ ಕೌನ್ಸಿಲ್ ಸದಸ್ಯರು ಎಂದು ಕರೆಯುತ್ತೇವೆ. ಒಂದೊಂದು ವಿಶ್ವವಿದ್ಯಾಲಯದಲ್ಲಿ ಒಂದೊಂದು ರೀತಿಯಲ್ಲಿ ಕರೆಯುತ್ತಾರೆ. ಕಾರ್ಯಕಾರಿಣಿ ಕೌನ್ಸಿಲ್ ಸದಸ್ಯರು ಎಂಬುದಾಗಿ ಯಾರನ್ನು ಕರೆಯುತ್ತೇವೆ ಆ ಪೈಕಿ ಒಬ್ಬ ಸದಸ್ಯರು ಲೋಕಲ್ ಇನ್ಸ್‌ಪೆಕ್ಷನ್ ಸಮಿತಿಯ ವಿಚಾರಣೆಗೆ ಹೋದಂತಹ ಸಂದರ್ಭದಲ್ಲಿ ಅವರ ವಿರುದ್ಧ ಭ್ರಷ್ಟಾಚಾರ ಹಾಗೂ ಇನ್ನಿತರೆ ಆರೋಪಗಳು ಕೇಳಲ್ಪಟ್ಟಿದ್ದು, ಅವುಗಳು ನನ್ನ ಗಮನಕ್ಕೆ ಬಂದಿದೆ. ಈ ಅಂಶವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳು ನನ್ನ ಗಮನಕ್ಕೆ ತಂದಿದ್ದಾರೆ. ನಿಯಮಾವಳಿಗಳ ಪ್ರಕಾರ ನಾವು ಆರೋಪಿತರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಬೇಕಾದರೆ ಮೊದಲು ನಾವು ಅವರಿಗೆ ನೋಟೀಸ್‌ನ್ನು ನೀಡಬೇಕಾಗುತ್ತದೆ. ದೂರು ಸ್ವೀಕೃತಗೊಂಡಿರುವುದರಿಂದ ಆರೋಪಿತರ ವಿರುದ್ಧ ವಿಶ್ವವಿದ್ಯಾಲಯದ ಉಪಕುಲಪತಿಗಳು ಈಗಾಗಲೇ ನೋಟೀಸ್‌ನ್ನು ಕೊಟ್ಟಿದ್ದಾರೆ ಹಾಗೆಯೇ ವಿಚಾರಣೆಯ ದಿನಾಂಕವನ್ನೂ ಸಹ ನಿಗದಿಪಡಿಸಿದ್ದಾರೆ. ಆರೋಪಿತರ ಹಾಗೂ ದೂರು ನೀಡಿರುವವರ ವಿಚಾರಗಳನ್ನು ತಿಳಿದುಕೊಂಡು, ಇದರ ಆಧಾರದ ಮೇಲೆ ಆರೋಪಗಳಲ್ಲಿ ಸತ್ಯಾಂಶಗಳಿದ್ದರೆ ಯಾವುದೇ ಮುಲಾಜು ಇಲ್ಲದೇ ಸದಸ್ಯರ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸದರಿ ಸದಸ್ಯರ ವಿರುದ್ಧ ಇನ್ನೂ ಹೆಚ್ಚಿನ ಆಪಾದನೆಗಳು ಸ್ವೀಕೃತವಾಗಿವೆ. This Government is very serious. ಅದೇ ಸದಸ್ಯರನ್ನು ಅಲ್ಲಿಯೇ ಮುಂದುವರೆಸಬೇಕೆಂಬ ಉದ್ದೇಶವು ಸರ್ಕಾರಕ್ಕಿಲ್ಲ. ಖಂಡಿತವಾಗಿಯೂ ವಿಚಾರಣೆಯನ್ನು ನಡೆಸಿ ಈ ವಾರದಲ್ಲಿ ಪ್ರಶ್ನಿತ ವಿಚಾರದಲ್ಲಿ ಕ್ರಮ ಕೈಗೊಳ್ಳಲಾಗುವುದು.

**ಸಭಾಪತಿಯವರು:–** ಮಾನ್ಯ ಸಚಿವರಲ್ಲಿ ನನ್ನ ಒಂದು ಮನವಿ. ಅದೇನೆಂದರೆ ಈಗ ನೀವು ಹೇಳಿದಂತೆ ವಿಶ್ವವಿದ್ಯಾಲಯ ಕಾಯ್ದೆಯ ಬಗ್ಗೆ ತಿದ್ದುಪಡಿಯನ್ನು ಜಾರಿಗೆ ತರುತ್ತಿದ್ದೀರಿ. ಈ ಬಗ್ಗೆ ನನ್ನ ಒಂದು ವಿನಂತಿ ಏನೆಂದರೆ ಸದರಿ ವಿಷಯದ ಬಗೆಗಿನ ಚರ್ಚೆಯ ಬಗ್ಗೆ ನಿಮ್ಮ ಪಕ್ಕದಲ್ಲಿ ಕುಳಿತಿರುವ ಹಿರಿಯ ಸದಸ್ಯರಿಗೆ ಹಾಗೂ ನನಗೂ ಸಹ ಗೊತ್ತಿದೆ. ಅದೇ ವಿಷಯದ ಬಗ್ಗೆ ಈ ಸದನದಲ್ಲಾಗುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚರ್ಚೆಯು ಬಹಳ ಜಾಸ್ತಿಯಾಗುತ್ತದೆ. ಈ ಕಾರಣಕ್ಕಾಗಿ ಸೋಮವಾರದಂದು ಸದರಿ ವಿಧೇಯಕವನ್ನು ನಮ್ಮ ಸದನದಲ್ಲಿ ಮಂಡಿಸಿದರೆ ನಾವು ಚರ್ಚೆಯನ್ನು ಮಾಡುವುದಕ್ಕೆ ಸುಲಭವಾಗುತ್ತದೆ. ಅದರ ಬದಲು ನೀವು ಅಧಿವೇಶನದ ಕಡೆಯ ದಿನ ವಿಧೇಯಕವನ್ನು ನಮ್ಮ ಸದನಕ್ಕೆ ತಂದರೆ ಚರ್ಚೆಯನ್ನು ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಸೋಮವಾರದಂದು ವಿಧೇಯಕವನ್ನು ಇಲ್ಲಿ ಮೊದಲು ಮಂಡಿಸಿ. ಕೆಳಮನೆ ಸದನಕ್ಕೆ ಅಗೌರವ ತೋರಿಸುವಂತಹ ಮಾತು ಇದಲ್ಲ. ಆದ್ದರಿಂದ ಹೀಗೆ ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, except the Money Bill, any Bill can be moved in the Upper House. ಇಲ್ಲಿ ವಿಧೇಯಕವನ್ನು ಮೊದಲು ಮಂಡಿಸಿದ್ದಲ್ಲಿ ಅದಕ್ಕೆ ಪಾವಿತ್ರ್ಯತೆ ಬರುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ತಮ್ಮ ವಿಚಾರವನ್ನು ನಮ್ಮ ಸದನದ ನಾಯಕರು ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:-** ಈಗ ಆ ವಿಧೇಯಕದ ಬಗ್ಗೆ ಮಾಡುನಾಡುವುದಲ್ಲ. ಆದರೆ ಮಂಡಿಸಿ ಎಂದು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ತಾವು ಹೇಳಿದಂತೆ ಈ ಸದನದಲ್ಲಿ ಮೊದಲು ವಿಧೇಯಕವನ್ನು ಮಂಡಿಸಿದ್ದಲ್ಲಿ ಚರ್ಚೆಗೆ ಹೆಚ್ಚು ಅವಕಾಶ ಸಿಗುತ್ತದೆ.

**ಸಭಾಪತಿಯವರು:-** ಶಾಣಪ್ಪನವರೆ, ಈ ಬಗ್ಗೆ ತಮಗೆ ವಿರೋಧವಿದೆಯೇ. ಅವರು ವಿಧೇಯಕವನ್ನು ಮಂಡಿಸಲಿ ಬಿಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರವು ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿ ಗೌಡ ರವರ ಪ್ರಶ್ನೆಗೆ ಉತ್ತರವನ್ನು ನೀಡಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಪರಿಶೀಲನೆಗೆ ಹೋದಾಗ ಅಲ್ಲಿನ ಅಧ್ಯಕ್ಷರ ಮೇಲೆ ಮಾಡಿದ ದೂರಿನ ಬಗ್ಗೆ ಉತ್ತರವನ್ನು ನೀಡಿದ್ದಾರೆ. Whether they are running the institution properly or not ಎಂಬ ಬಗ್ಗೆ ತಂಡವು ಅಲ್ಲಿಗೆ ಹೋಗಿತ್ತು. ವಿಶ್ವವಿದ್ಯಾಲಯದ ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಯ ಬಗ್ಗೆ ಬಹಳ ದೊಡ್ಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯಿದೆ. ಈ ಅಂಶವು ನನ್ನ ಗಮನಕ್ಕೆ ಬಂದಿದೆ. ದಯಮಾಡಿ ತಾವು whether they are running the institution in a proper way or not ಎನ್ನುವುದನ್ನು ತಿಳಿಸಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಈ ಬಗ್ಗೆ ನಾವು ವಿಚಾರಣೆಯನ್ನು ಮಾಡುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ವಿಶ್ವವಿದ್ಯಾಲಯದವರು ಸಾಕಷ್ಟು ತಪ್ಪು ಮಾಡಿದ್ದಾರೆ ಎಂದು ಹೇಳಲಿಕ್ಕೆ ಹೋದಾಗ, ಸ್ಥಳ ಪರಿಶೀಲನೆ ಮಾಡಿದ ಸದಸ್ಯರು ಹಣಕ್ಕಾಗಿ ಒತ್ತಾಯ ಮಾಡಿದ್ದಾರೆ ಎಂಬುದಾಗಿ ಆ ಸದಸ್ಯರ ವಿರುದ್ಧ ಹಾಗೂ ಸಮಿತಿಯ ವಿರುದ್ಧ...

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಶಾಣಪ್ಪನವರೆ ನಾನು ಯಾರ ವಿರುದ್ಧವೂ ಆಪಾದನೆಗಳನ್ನು ಮಾಡುತ್ತಿಲ್ಲ. ಈ ರೀತಿಯಾಗಿ ಆಪಾದನೆಗಳು ಬಂದಿವೆ. ಆಪಾದನೆಗಳಿಗೆ ಪೂರಕವಾಗಿ ವೀಡಿಯೋ ರೆರ್ಕಾಡಿಂಗ್‌ನ್ನೂ ಸಹ ಮಾಡಿದ್ದಾರೆ. ಹೀಗಾಗಿ ಆಪಾದಿಸಿರುವ ಅಂಶಗಳು ಸತ್ಯವೋ ಅಥವಾ ಅಸತ್ಯವೋ ಎಂದು ತಿಳಿಯಲು ವಿಚಾರಣೆಯನ್ನು ಮಾಡಬೇಕು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ವಿಡಿಯೋ ರೆರ್ಕಾಡಿಂಗ್ ಮಾಡಬೇಕಾದರೆ ಅದರ ಹಿಂದಿನ ಉದ್ದೇಶವೇನು? Are they planned it? ಅದನ್ನು ಪರಿಶೀಲನೆ ಮಾಡಿ. ಕೂಲಂಕಷವಾಗಿ ವಿಚಾರಣೆ ಮಾಡಿ. ಸದರಿ ದೂರಿನನ್ವಯ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ತಪ್ಪು ಕಂಡು ಬಂದಲ್ಲಿ, ದಯಮಾಡಿ ಮೊದಲು let them set right their own institution.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ತಮ್ಮ ಮುಖಾಂತರ ನಾನು ಹೇಳುವುದೇನೆಂದರೆ, ಆ ಶಿಕ್ಷಣ ಸಂಸ್ಥೆಯ ತಪ್ಪಿದ್ದರೆ ಮುಲಾಜಿಲ್ಲದೇ ಅವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಅದೇ ರೀತಿಯಾಗಿ. ಕಾರ್ಯಕಾರಿಣಿ ಕೌನ್ಸಿಲ್ ಸದಸ್ಯರ ತಪ್ಪಿದ್ದರೆ ಅವರ ವಿರುದ್ಧವೂ ಕ್ರಮವನ್ನು ತೆಗೆದುಕೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರು ನೀಡಿರುವ ಸಲಹೆಯಂತೆ ನಾವು ಜಾರಿಗೆ ತರಲಿರುವ ಹೊಸ ಕಾಯ್ದೆಯನ್ನು ಮಂಡಿಸುವ ಬಗ್ಗೆ ತಮ್ಮ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ತರುತ್ತೇನೆ. ಅವರ ಸಲಹೆಯ ಮೇರೆಗೆ ಅದನ್ನು ಮೊದಲು ಈ ಸದನದಲ್ಲಿ ಅಥವಾ ಆ ಸದನದಲ್ಲಿ ಮಂಡಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2485**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಕಾಲ್ಪನಿಕ ವೇತನ ಬಡ್ತಿಯ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ತಮ್ಮ ಉಪಸ್ಥಿತಿಯಲ್ಲಿ ಸರ್ಕಾರದೊಂದಿಗೆ ಚರ್ಚೆಯನ್ನು ಮಾಡಿ ಷರತ್ತು ಬದ್ಧವಾಗಿ ಒಂದು ವಿಧೇಯಕವನ್ನು ಅಂಗೀಕರಿಸಲಾಯಿತು. ಸರ್ಕಾರವು ಸಮಸ್ಯೆಯನ್ನು ಬಗೆಹರಿಸುವುದಾಗಿ ಹಾಗೂ ವಿಷಯವು ಜರೂರಾಗಿದೆ ಎನ್ನುವ ಕಾರಣಗಳಿಗಾಗಿ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ 2014 ನ್ನು ಅಂಗೀಕರಿಸಲಾಯಿತು. ಹಲವಾರು ಬಾರಿ ಪ್ರಸ್ತುತ ವಿಷಯವು ಈ ಸದನದಲ್ಲಿ ಪ್ರಸ್ತಾಪವಾಗಿದೆ. ತುರ್ತಾಗಿ ಈ ವಿಷಯದ ಬಗ್ಗೆ ಮತ್ತೊಮ್ಮೆ ಪ್ರಶ್ನೆಯನ್ನು ಕೇಳಲು ಕಾರಣವೇನೆಂದರೆ ಉನ್ನತ ಶಿಕ್ಷಣ ಇಲಾಖೆಯಡಿ ವಿಶೇಷವಾಗಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನಿವೃತ್ತಿಯಾಗುತ್ತಿರುವಂತಹ ಶಿಕ್ಷಕರ ನಿವೃತ್ತಿ ವೇತನವನ್ನು ತಡೆಹಿಡಿಯಲಾಗಿದೆ. ಇದಕ್ಕೆ ಕಾರಣವೇನೆಂದರೆ ಸದರಿ ಶಿಕ್ಷಕರ ನೋಷನಲ್ ಅವಧಿಯನ್ನು ಕಟಾಯಿಸಿ ಕೊಡಬೇಕು ಎನ್ನುವ ಕಾರಣಕ್ಕಾಗಿಯೇ ಇವತ್ತಿನ ದಿವಸ ನಿವೃತ್ತಿ ವೇತನವನ್ನು ತಡೆಹಿಡಿಯಲಾಗಿದೆ ಎನ್ನುವಂತಹ ಉದಾಹರಣೆ ನನ್ನ ಬಳಿಯಿದೆ. ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಯಾವ ವಿಧೇಯಕ ಅಂಗೀಕಾರವಾಗಿತ್ತೋ ಅಷ್ಟಕ್ಕೆ ಸೀಮಿತವಾಗಿ ನನಗೆ ಉತ್ತರವನ್ನು ನೀಡಿದ್ದಾರೆ. ಅದು ಅಸಿಂಧು ಎಂಬುದಾಗಿ ಉಚ್ಚ ನ್ಯಾಯಾಲಯವು ಆದೇಶವನ್ನು ನೀಡಿತ್ತು. ಸದರಿ ಆದೇಶದ ವಿರುದ್ಧ ಸರ್ಕಾರವು ಮೇಲ್ಮನವಿಯನ್ನು ಸಲ್ಲಿಸಿದೆ. ಸದರಿ ಆದೇಶಕ್ಕೆ ಷರತ್ತು ಬದ್ಧವಾದ ತಡೆಯಾಜ್ಞೆ ದೊರೆತಿದೆ. ಸದರಿ ಷರತ್ತಿನಲ್ಲಿ ಬಹಳ ಸ್ಪಷ್ಟವಾಗಿ “So far as recovery proceedings and calculation of the pension in terms of the new Regulations are concerned, proceedings shall however

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

remain stayed" ಎಂದು ಆದೇಶ ಮಾಡಿದ್ದಾರೆ. ಕಟಾವಣೆ ಮಾಡಬಾರದು ಎನ್ನುವ ವಿಚಾರದ ಬಗ್ಗೆ ಸರ್ಕಾರದ ಅಡ್ವೋಕೇಟ್ ಜನರಲ್‌ರವರು ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ. ಆದರೆ ಸರ್ಕಾರವು ನೀಡುವ ಉತ್ತರದಲ್ಲಿ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪಿಂಚಣಿಯನ್ನು ಇತ್ಯರ್ಥಪಡಿಸುವಾಗ ಅನುದಾನರಹಿತ ಅವಧಿಯನ್ನು ಹೊರತುಪಡಿಸಿ, ಅನುದಾನಕ್ಕೊಳಪಟ್ಟ ದಿನಾಂಕದಿಂದ ವೇತನವನ್ನು ಪುನರ್ ನಿಗದಿಗೊಳಿಸಿ, ಹೆಚ್ಚುವರಿಯಾಗಿ ಪಾವತಿಸಿರುವ ವ್ಯತ್ಯಾಸದ ಮೊತ್ತವನ್ನು ನ್ಯಾಯಾಲಯದ ಅಂತಿಮ ತೀರ್ಮಾನಕ್ಕೆ ಒಳಪಟ್ಟು ಸೇವಾ ಉಪದಾನ ಮೊತ್ತದಲ್ಲಿ ಕಟಾಯಿಸಿ ತಡೆಹಿಡಿಯಲಾಗುತ್ತಿದೆ ಎಂಬುದಾಗಿ ತಿಳಿಸಲಾಗಿದೆ. ಕಟಾಯಿಸಿ ತಡೆಹಿಡಿಯುವುದು ಎಂದರೆ ಏನರ್ಥ? ನಿವೃತ್ತಿದಾರರ ರೂಪಾಯಿ 18 ರಿಂದ 20 ಲಕ್ಷಗಳಷ್ಟು ಮೊತ್ತವನ್ನು ನೀವು ಕಟಾಯಿಸಿ ತಡೆಹಿಡಿದರೆ ಆ ಮನುಷ್ಯ ಏನು ನಿವೃತ್ತಿಯ ಉಪದಾನವನ್ನು ಪಡೆದುಕೊಳ್ಳುತ್ತಾನೆ? ನ್ಯಾಯಾಲಯದ ಆದೇಶಕ್ಕೂ ಹಾಗೂ ನೀವು ತೆಗೆದುಕೊಳ್ಳುತ್ತಿರುವ ಕ್ರಮಕ್ಕೂ ಒಂದಕ್ಕೊಂದು ವಿರುದ್ಧವಾಗಿರುವಂತಹದ್ದಾಗಿದೆ. ಶಿಕ್ಷಕರು ಅವರ ಜೀವನ ಪೂರ್ತಿ ಕೆಲಸವನ್ನು ಮಾಡಿ ನಿವೃತ್ತಿಯ ನಂತರ ತೆಗೆದುಕೊಳ್ಳುವ ಉಪದಾನದಲ್ಲಿ ರೂಪಾಯಿ 18 ಲಕ್ಷಗಳನ್ನು ಕಡಿತಗೊಳಿಸಿದರೆ ...

**ಸಭಾಪತಿಯವರು:–** ಆ ಎಲ್ಲಾ ವಿಷಯಗಳನ್ನು ಈಗ ಪ್ರಸ್ತಾಪ ಮಾಡುವುದು ಬೇಡ. Come to the point. ಇದು ನನಗೂ ಗೊತ್ತಿರುವ ವಿಷಯವಾಗಿದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಅಂಶವು ಸರಿಯಾಗಿದೆ. ಸರ್ಕಾರಿ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಕಟಾವಣೆ ಮಾಡುವ ಅಧಿಕಾರ ಅವರಿಗೆ ಇಲ್ಲ. ನ್ಯಾಯಾಲಯದ ತೀರ್ಮಾನವಾದ ಮೇಲೆ ಶಿಕ್ಷಕರ ವೇತನ, ನಿವೃತ್ತಿ ವೇತನ ಹಾಗೂ ಇನ್ನಿತರೆ ಉಪದಾನಗಳ ಮೂಲಕ ವಾಪಸ್ಸು ತೆಗೆದುಕೊಳ್ಳಬೇಕು. ಆದರೆ ಕಟಾವಣೆ ಮಾಡುವಂತಹ ದುಸ್ಸಾಹಸಕ್ಕೆ ಅಧಿಕಾರಿಗಳು ಕೈಹಾಕುವುದು ಬೇಡ. ಮಾನ್ಯ ಸದಸ್ಯರ ಪರವಾಗಿ ನಾನು ಹೇಳುತ್ತಿದ್ದೇನೆ...

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಅಧಿಕಾರಿಗಳು ಈಗ ಹಾಗೆಯೇ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ ರವರು ಕೇಳಿರುವ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ನೀಡಲಾಗಿದೆ. ಸದಸ್ಯರು ತಾಂತ್ರಿಕ ಶಿಕ್ಷಣ ಹಾಗೂ ಕಾಲೇಜು ಶಿಕ್ಷಣ ಇಲಾಖೆಗಳಲ್ಲಿ ಆದಂತಹ ತೊಂದರೆಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(643)09.06.2017 MSS-MD(VK) 11.20**

**ಶ್ರೀ ಬಸವರಾಜ ರಾಯರೆಡ್ಡಿ(ಮುಂದು):–**

ತಾಂತ್ರಿಕ ಶಿಕ್ಷಣದಲ್ಲಿ ಅನುದಾನ ನಿಗದಿಯಾದ ದಿನಾಂಕದಿಂದ, ಅವರು ಸೇವೆಗೆ ಸೇರಿದ ದಿನಾಂಕದಿಂದ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಅವರಿಗೆ ನಾವು ಯಾವುದೇ ಹಣವನ್ನು ಅವರ ನಿವೃತ್ತಿಯ ಹಣದಿಂದ ಕಟ್ ಮಾಡುತ್ತಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಇತ್ತೀಚೆಗೆ ಅನುದಾನವನ್ನು ಕೊಡುವುದಲ್ಲ. ಸೇವೆಗೆ ಸೇರಿದ ದಿನಾಂಕದಿಂದ ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡಲಾಗಿದೆ. Pay fixation ಆಗಿದೆ and they are drawing the salary. ಈಗ ಅವರ ನಿವೃತ್ತಿಯ ಸಮಯದಲ್ಲಿ 5 ಲಕ್ಷ, 10 ಲಕ್ಷ ರೂಪಾಯಿಗಳನ್ನು ಕಟ್ ಮಾಡಲಾಗುತ್ತಿದೆ. ಅದನ್ನು ಕಟ್ ಮಾಡುವುದಿಲ್ಲವೆಂದು ಹಿಂದೆ ಒಂದು ಬಿಲ್ ಅನ್ನು ಪಾಸ್ ಮಾಡುವಾಗ ಸರ್ಕಾರ ಒಪ್ಪಿಕೊಂಡಿದೆ. ಅದರ ಬಗ್ಗೆ ಶ್ರೀ ಬಸವರಾಜ ಹೊರಟ್ಟಿಯವರ ಸಮಿತಿಯಲ್ಲಿಯೂ ವರದಿಯಾಗಿದೆ. ಜೊತೆಗೆ 359 ಕೋಟಿ ರೂಪಾಯಿಗಳನ್ನು ಕೊಡಲಾಗುವುದೆಂದು ಸರ್ಕಾರ ಒಪ್ಪಿಕೊಂಡಿದೆ. ಕೊಡುವುದು ಇರಲಿ. ಈಗ ಕೊಟ್ಟಿರುವಂತಹ ಹಣವನ್ನು ಕಟ್ ಮಾಡಲಾಗುತ್ತಿದೆ.

**CAPT.GANESH KARNIK:-** Your oral answer may be right. But there is a difference in your written reply. ಆದರೆ ಎ.ಜಿ.ಯವರು ಕೂಡ report ಕೊಟ್ಟಿದ್ದಾರೆ, ಮಾನ್ಯ ಸಚಿವರು ಇಂಗ್ಲಿಷ್‌ನಲ್ಲಿ ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ ಸರಿಯಾಗಿ ಕೊಡಲಾಗಿದೆ. ಆದರೆ ಕನ್ನಡದಲ್ಲಿರುವಂತಹ ಲಿಖಿತ ಉತ್ತರದಲ್ಲಿ ಕಟಾವು ಮಾಡಲಾಗುವುದೆಂದು ಇದೆ. ಶ್ರೀ ಅರುಣ ಶಹಪೂರರವರು ಹೇಳಿದ್ದು ಸರಿ ಇದೆ, ಶ್ರೀ ಕೆ.ಟಿ.ಶ್ರೀಕಂಠೇಗೌಡರು ಹೇಳಿದ್ದು ಕೂಡ ಸರಿ ಇದೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದು ಕೂಡ ಸರಿ ಇದೆ.

**ಸಭಾಪತಿಯವರು:–** ಕಟಾವು ಮಾಡಿವುದಿಲ್ಲವೆಂದು ಹೇಳಿ ಮತ್ತೆ ಇದರ ಬಗ್ಗೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**Sri BASAVARAJ RAYAREDDY:-** Please allow me to speak. I want to clarify on this matter. ನಾನು ಇನ್ನೊಂದು ಸಾರಿ ಹೇಳುತ್ತೇನೆ. ಶಿಕ್ಷಣ ಇಲಾಖೆಗೆ ಸಂಬಂಧಿಸಿದ ನೌಕರರ ವಿಚಾರದಲ್ಲಿ ಈಗಾಗಲೇ ನಾವು ಏನು ನಿಗದಿಗೊಳಿಸಿದ್ದೇವೆ. ಅವರ ನಿವೃತ್ತಿ ವೇತನದಿಂದ ಯಾವುದೇ ಹಣವನ್ನು ಕಟಾವು ಮಾಡುತ್ತಿಲ್ಲ.

**ಸಭಾಪತಿಯವರು:-** ಮಾಡುವುದಿಲ್ಲವೆಂದು ನೀವು ಹೇಳುತ್ತಿದ್ದೀರಿ. ಆದರೆ ಹಣವನ್ನು ಕಟಾವು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರುಗಳು ಹೇಳುತ್ತಿರುವುದು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಮಾಡುತ್ತಿಲ್ಲ. Let me complete....

**ಸಭಾಪತಿಯವರು:-** ಆ ರೀತಿಯಾಗಿ ಏನಾದರು ಮಾಡುತ್ತಿದ್ದರೆ ಅಥವಾ ಮಾಡಿದ್ದರೆ ಅದನ್ನು ವಾಪಸ್ಸು ಕೊಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ವಿಚಾರವನ್ನು ಮನದಟ್ಟು ಮಾಡಿಕೊಡುತ್ತೇನೆ. ಕಳೆದ ಮೂವತ್ತು ವರ್ಷಗಳಿಂದ ಸೇವೆ ಮಾಡಿದ್ದಾರೆ. ಅವರು ಸಂಬಳವನ್ನು ಕೂಡ ಪಡೆಯುತ್ತಿದ್ದಾರೆ. ಈಗ ನಿವೃತ್ತಿಯಾಗುತ್ತಿರುವುದರಿಂದ ಅವರ ನಿವೃತ್ತಿಯಾಗುವಾಗ ಬರುವಂತಹ ಹಣದಲ್ಲಿ ಕಟಾವು ಮಾಡಲಾಗುತ್ತಿದೆ ಅದನ್ನು ಮಾಡುವುದು ಬೇಡ.

**ಸಭಾಪತಿಯವರು:-** ಮಾನ್ಯ ಸಚಿವರು ನಿವೃತ್ತಿಯ ಹಣದಲ್ಲಿ ಯಾವುದೇ ಹಣವನ್ನು ಕಟಾವು ಮಾಡುತ್ತಿಲ್ಲ ಮತ್ತು ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಮಾಡಿಬಿಟ್ಟಿದ್ದರೆ ಅದನ್ನು ವಾಪಸ್ಸು ಕೊಡಿ. ಮುಂದೆ ಕಟಾವು ಮಾಡಬೇಡಿ. ಅಷ್ಟೇ. Don't go to the details.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ. ಅದೇ ವಿಚಾರವನ್ನು ನಾನು ಹೇಳುತ್ತಿದ್ದೆ. ನಾವು ತಾಂತ್ರಿಕ ಇಲಾಖೆಗೆ ಸಂಬಂಧಿಸಿದಂತಹ ನೌಕರರ ಯಾವುದೇ ಹಣವನ್ನು ನಾವು ಕಟಾವುಗೊಳಿಸುತ್ತಿಲ್ಲ. ಮಾನ್ಯ ಸದಸ್ಯರ ಹತ್ತಿರ ಏನಾದರು ಕಟಾವುಗೊಳಿಸುವಂತಹ ಪ್ರಕರಣ ಇದ್ದರೆ ನನ್ನ ಗಮನಕ್ಕೆ ತೆಗೆದುಕೊಂಡು ಬರಲಿ. ಎರಡನೆಯದಾಗಿ ಕಾಲೇಜು ಶಿಕ್ಷಣದ ಸಿಬ್ಬಂದಿಗಳೇನಿದ್ದಾರೆ ಈ ಸಿಬ್ಬಂದಿಯ ವಿಚಾರದಲ್ಲಿ ನಾವು ಕಾಲ್ಪನಿಕ ವೇತನವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ನಾವು ಈಗಾಗಲೇ 2014ನೇ ಇಸವಿಯಲ್ಲಿ ಏನು ವೇತನ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತೆಗೆದುಕೊಂಡು ಬಂದಿದ್ದೇವೆ. That matter is between the High Court, Supreme Court, ನಮ್ಮ ಸರ್ಕಾರದ ಪರವಾಗಿ ಕೆಲವೊಂದು ಕೋರ್ಟ್‌ನಲ್ಲಿ ಮತ್ತೊಂದು ಕೋರ್ಟ್‌ನಲ್ಲಿ ನೌಕರರ ಪರವಾಗಿದೆ. ಈಗಾಗಲೇ ಮಧ್ಯಂತರ ತೀರ್ಪನ್ನು ಹೈಕೋರ್ಟ್ ನಮಗೆ ಕೊಟ್ಟಿದೆ. ಆ ಮಧ್ಯಂತರ ತೀರ್ಪು ಹೈಕೋರ್ಟ್ ಕೊಟ್ಟಿದೆ ಅದರ ಪ್ರಕಾರವಾಗಿ ಸರ್ಕಾರ ನಡೆದುಕೊಳ್ಳುತ್ತಿದೆ. ಆದರೆ ಇನ್ನು ಮುಂದುವರೆದು ಹೇಳುವುದೇನೆಂದರೆ, ಹೈಕೋರ್ಟ್ ಏನು ಮಧ್ಯಂತರ ತೀರ್ಪು ಕೊಟ್ಟಿದೆ, ಅಂತಿಮ ತೀರ್ಪು ಬಂದ ತಕ್ಷಣ ಹೈಕೋರ್ಟ್ ತೀರ್ಪು ಪ್ರಕಾರವಾಗಿ ಸರ್ಕಾರ ನಡೆದುಕೊಳ್ಳುತ್ತದೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳಿಗೆ ಹೇಳುತ್ತಿದ್ದೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಆ ಬಿಲ್ ಪಾಸ್ ಮಾಡಿಕೊಳ್ಳುವಾಗ ಮಾನ್ಯ ಮಂತ್ರಿಗಳು ಕಾಲ್ಪನಿಕ ವೇತನವನ್ನು ಕೊಡುತ್ತೇವೆಂದು ಹೇಳಿ ಬಿಲ್ ಪಾಸ್ ಮಾಡಿಸಿಕೊಂಡಿದ್ದಾರೆ. ಈಗ ಹೈಕೋರ್ಟ್ ಹೇಳಿದರೆ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದು ಇಡೀ ಸದನದ ದಾರಿ ತಪ್ಪಿಸುವಂತಹ ಕೆಲಸವಾಗುತ್ತಿದೆ. ಸರ್ಕಾರ ಆ ವೇಳೆಯಲ್ಲಿ ಒಂದು ರೀತಿಯಲ್ಲಿ ಹೇಳುವುದು, ಈಗ ಇನ್ನೊಂದು ರೀತಿಯಲ್ಲಿ ಹೇಳುವುದು ಸರಿಯಲ್ಲ. ಕಾಲ್ಪನಿಕ ವೇತನವನ್ನು ಕೊಡುತ್ತೇವೆಂದು ಅಂದಿನ ಉನ್ನತ ಶಿಕ್ಷಣ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆಯವರು ಹೇಳಿದ್ದರು. ಈಗ ಮಾನ್ಯ ಸಚಿವರ ಪಕ್ಕದಲ್ಲಿಯೇ ಕುಳಿತುಕೊಂಡಿದ್ದಾರೆ.

**ಸಭಾಪತಿಯವರು:–** ಆ ಕಾರಣಕ್ಕಾಗಿಯೇ ನಾನು ಮಧ್ಯ ಪ್ರವೇಶ ಮಾಡಿದ್ದು.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ನಾನು ಬೇಕಾದರೆ ಶಿಕ್ಷಕರ ಕ್ಷೇತ್ರದ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಯಾದವರ ಇನ್ನೊಂದು ಸಭೆಯನ್ನು ಕರೆಯುತ್ತೇನೆ. This is a service matter. ನೀವು ಶಿಕ್ಷಕರ ಪರವಾಗಿ ಮಾತನಾಡುತ್ತೀರಿ. ಆದರೆ ನಾವು ಸರ್ಕಾರವನ್ನು ನಡೆಸುವವರು.

**ಸಭಾಪತಿಯವರು:–** ಇದು ಪ್ರಶ್ನೋತ್ತರ ವೇಳೆಯಾದುದರಿಂದ ಇದರ ಬಗ್ಗೆ ಹೆಚ್ಚು ಚರ್ಚೆ ಬೇಡ. ಈ ಸದನ ದಿನಾಂಕ 16.06.2017 ರಂದು ಮುಕ್ತಾಯವಾಗುತ್ತದೆ. ಸದನ ಮುಗಿದ ತಕ್ಷಣ ಪದವೀಧರರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಷೇತ್ರದಿಂದ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದ ಎಂಎಲ್‌ಸಿ ಗಳ ಸಭೆಯನ್ನು ಕರೆಯಿರಿ. ಆ ಸಭೆಯಲ್ಲಿ ಇದೊಂದೇ ವಿಷಯವನ್ನು ಚರ್ಚೆ ಮಾಡಿ.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿಯೇ **"ಹೆಚ್ಚುವರಿಯಾಗಿ ಪಾವತಿಸಿರುವ ವ್ಯತ್ಯಾಸದ ಮೊತ್ತವನ್ನು ನ್ಯಾಯಾಲಯದ ಅಂತಿಮ ತೀರ್ಮಾನಕ್ಕೆ ಒಳಪಟ್ಟು ಸೇವಾ ಉಪದಾನ ಮೊತ್ತದಲ್ಲಿ ಕಟಾಯಿಸಿ ತಡೆಹಿಡಿಯಲಾಗುತ್ತಿದೆ."** ಎಂದು ಹೇಳಿದ್ದಾರೆ. ಹೈಕೋರ್ಟ್ ಆದೇಶವಾಗಿಲ್ಲ ಎನ್ನುವುದೂ ಕೂಡ ಮಾನ್ಯ ಸಚಿವರ ಲಿಖಿತ ಉತ್ತರದಲ್ಲಿಯೇ ಇದೆ. ನಮ್ಮ ವಿನಂತಿ ಏನೆಂದರೆ, ಹಣವನ್ನು ಕಟಾವು ಮಾಡಬೇಡಿ ಎಂದು ಹೇಳುತ್ತಿದ್ದೇವೆ.

**Sri BASAVARAJ RAYAREDDY:-** You don't confuse. That is in the collegiate education.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಹೈಕೋರ್ಟ್ ಆದೇಶ ಏನಿದೆ?

**Sri BASAVARAJ RAYAREDDY:-** I am hundred percent right.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಎ.ಜಿ.ಯವರು ಕೋರ್ಟ್‌ನಲ್ಲಿ ಕಟಾಯಿಸುವುದಿಲ್ಲವೆಂದು affidavit ಕೊಟ್ಟಿದ್ದಾರೆ. ಆದರೆ ಈಗ ತಾಂತ್ರಿಕ ಶಿಕ್ಷಣ ಇಲಾಖೆಗೆ ಒಂದು ನ್ಯಾಯ, ಕಾಲೇಜು ಶಿಕ್ಷಣ ಇಲಾಖೆಗೆ ಇನ್ನೊಂದು ನ್ಯಾಯ ಈ ರೀತಿಯಾಗಿ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ನಾನು ಬಹಳ ಸ್ಪಷ್ಟಪಡಿಸಿದ್ದೇನೆ. ತಾಂತ್ರಿಕ ಶಿಕ್ಷಣದ ನೌಕರರಿಗೆ ಯಾವುದೇ ರೀತಿಯ ಹಣವನ್ನು ಕಟಾಯಿಸುತ್ತಿಲ್ಲ.

**Mr. CHAIRMAN:-** Allow him to speak. Don't interfere.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ:-** ಕಾಲೇಜು ಶಿಕ್ಷಣ ಇಲಾಖೆಯ ನೌಕರರಿಗೆ ಸಂಬಂಧಪಟ್ಟಂತೆ ನಿವೃತ್ತಿಯ ಹಣದಿಂದ ಕಟಾಯಿಸುತ್ತಿದ್ದೇವೆ. ಏಕೆಂದರೆ ಇದರ ಬಗ್ಗೆ ಇನ್ನೂ ಕೋರ್ಟ್‌ನಲ್ಲಿ ತೀರ್ಮಾನವಾಗಿಲ್ಲ. ಈ ವಿಷಯ ಕೋರ್ಟ್‌ಗೆ ಹೋದಂತಹ ಸಂದರ್ಭದಲ್ಲಿ status quo maintain ಮಾಡಿ ಎಂದು ಹೇಳಿದ್ದಾರೆ. ಅಲ್ಲಿಯೇ ಏನು ಹೇಳಿದ್ದಾರೆಂದರೆ, *“The State shall go on paying their current emoluments in terms of the re-fixation, subject, however, to the result of the writ appeals.”* ಈಗ ಏನು ಇದೇ ಅದನ್ನೇ ಮಾಡಿಕೊಂಡು ಹೋಗಿ ಎಂದು ಹೇಳಿದ್ದಾರೆ. ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನಾವು ಏನೇನು ಕೊಟ್ಟು ಬಿಟ್ಟಿದ್ದೇವೆ ಅನುದಾನಕ್ಕಿಂತಲೂ ಮೊದಲು ಏನೇನು ಸೌಲಭ್ಯಗಳನ್ನು ಕೊಡಬೇಕಾಗಿತ್ತು ಅದನ್ನೆಲ್ಲಾ ಕೊಟ್ಟು ಮುಂದುವರೆಸಿದ್ದೇವೆ. ಕಾಲೇಜು ಶಿಕ್ಷಣದಲ್ಲಿ ನಾವು ತೀರ್ಮಾನವನ್ನು ತೆಗೆದುಕೊಳ್ಳದೇ ಇರುವುದರಿಂದ ನಾವು ಅದನ್ನು maintain ಮಾಡಿದ್ದೇವೆ. However, subject to the judgement of the Division Bench, ಅದನ್ನು ನಾವು ಮುಂದುವರೆಸಿಕೊಂಡು ಹೋಗುತ್ತೇವೆ. Division Bench ಏನು ತೀರ್ಮಾನವನ್ನು ಕೊಡುತ್ತದೆ ಅದರ ಪ್ರಕಾರವಾಗಿ ಸರ್ಕಾರ ನಡೆದುಕೊಳ್ಳುತ್ತದೆ.

**(ಗೊಂದಲ)**

**Sri ARUN SHAHAPUR:-** *“.....However, they are restrained from initiating any recovery proceedings for recovery of the arrears of pay.”* ಇದನ್ನು ಕೂಡ ಹೇಳಿದ್ದಾರೆ, ನೀವು ಅದನ್ನು ಮಾತ್ರ ಹೇಳುವುದಿಲ್ಲ. ನೀವೇ ಮಂತ್ರಿಗಳಾಗಿ ತಾಂತ್ರಿಕ ಶಿಕ್ಷಣ ಇಲಾಖೆಗೆ ಒಂದು ನ್ಯಾಯ, ಕಾಲೇಜು ಶಿಕ್ಷಣ ಇಲಾಖೆಗೆ ಒಂದು ನ್ಯಾಯ ಎನ್ನುವಂತೆ ಮಾಡಿದರೆ ಇದನ್ನು ನಾವು ಹೇಗೆ ಒಪ್ಪಿಕೊಳ್ಳುವುದು?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಶಿಕ್ಷಕರ ಕ್ಷೇತ್ರದ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿರುವಂತಹ ಎಂಎಲ್‌ಸಿ ಗಳ ಸಭೆಯನ್ನು ಇನ್ನೊಂದು ಸಾರಿ ಕರೆಯುತ್ತೇನೆ.

**ಸಭಾಪತಿಯವರು:-** ಆ ಸಭೆಯಲ್ಲಿ ಈ ವಿಷಯವನ್ನು ಮಾತ್ರ ಚರ್ಚೆ ಮಾಡಬೇಕು. ಎರಡು ವಿಷಯದ ಬಗ್ಗೆ ಸಭೆ ಇರಬಾರದು. ಆ ಸಭೆಯಲ್ಲಿ ಮಾತನಾಡೋಣ. ಎಲ್ಲಾ ಇಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾತನಾಡುವುದಕ್ಕಾಗುತ್ತದೆಯೇ? You don't mix-up. ಅವರು ಈ ಸದನದ ಪದವೀಧರರ ಕ್ಷೇತ್ರದಿಂದ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿರುವಂತಹ ಸದಸ್ಯರುಗಳ ಸಭೆಯನ್ನು ಕರೆಯುತ್ತಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಆದರೆ ರಾಜ್ಯ ಸರ್ಕಾರದ ಹಣಕಾಸಿನ ಸಾಧಕ-ಬಾಧಕಗಳನ್ನು ಎಲ್ಲವನ್ನೂ ನೋಡಬೇಕಾಗುತ್ತದೆ.

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಇದರ ಬಗ್ಗೆ ವಿಚಾರ ಮಾಡುವುದಕ್ಕೆ, there is a confusion between the Government and the Members.

**ಸಭಾಪತಿಯವರು:-** ಆದಷ್ಟು ಬೇಗ ಸಭೆಯನ್ನು ಕರೆಯಿರಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಮುಂದಿನ ವಾರವೇ ಸಭೆಯನ್ನು ಕರೆದು ಇದನ್ನು clarify ಮಾಡುತ್ತೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ನಿಮ್ಮ ಕೊಠಡಿಯಲ್ಲಿಯೇ ಸಭೆಯನ್ನು ಕರೆಯಲಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ನಿಮ್ಮ ಕೊಠಡಿಯಲ್ಲಿಯೇ ಸಭೆಯನ್ನು ನಡೆಸೋಣ ನನ್ನದು ಏನೂ ತೊಂದರೆ ಇಲ್ಲ.

**ಸಭಾಪತಿಯವರು:-** ಅವತ್ತಿನ ಸಭೆಯಲ್ಲಿ ಇದೊಂದೇ ವಿಷಯದ ಬಗ್ಗೆ ಚರ್ಚೆ ಇರಬೇಕು.

**ಪ್ರಶ್ನೆ ಸಂಖ್ಯೆ: 2522**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2017-18ನೇ ಸಾಲಿನಲ್ಲಿ ಅಲೆಮಾರಿ/ಅರೆ ಅಲೆಮಾರಿ ಹಾಗೂ ಗೊಲ್ಲರ ಹಟ್ಟಿಗಳಿಗೆ ವಿಶೇಷವಾದಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ಯಾಕೇಜ್ ಮೂಲಕ ವಸತಿ ಸೌಲಭ್ಯ ಇದೆಯೇ ಎನ್ನುವಂತಹ ಪ್ರಶ್ನೆಗೆ ಮಾನ್ಯ ಸಚಿವರು 2017-18ನೇ ಸಾಲಿನಲ್ಲಿ ಅಲಮಾರಿ/ಅರೆ ಅಲೆಮಾರಿ ಹಾಗೂ ಗೊಲ್ಲರ ಹಟ್ಟಿಗಳಿಗೆ ವಿಶೇಷ ಪ್ಯಾಕೇಜ್ ನೀಡುವುದಕ್ಕೆ ಯಾವುದೇ ರೀತಿಯ ಪ್ರಸ್ತಾವನೆ ಇರುವುದಿಲ್ಲವೆಂದು ಹೇಳಿದ್ದಾರೆ. ಮತ್ತೆ ಅದೇ ರೀತಿಯಲ್ಲಿ ಅಲೆಮಾರಿ/ಅರೆ ಅಲೆಮಾರಿ ವರ್ಗದವರನ್ನೊಳಗೊಂಡಂತೆ ಎಲ್ಲಾ ವಿಶೇಷ ವರ್ಗದವರಿಗೆ ಹಂತ ಹಂತವಾಗಿ ವಸತಿ ಸೌಕರ್ಯವನ್ನು ಕಲ್ಪಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದ್ದಾರೆ. ನನ್ನ ಎರಡನೇ ಪ್ರಶ್ನೆಗೆ 2017-18ನೇ ಸಾಲಿನಲ್ಲಿ ದೇವರಾಜ ಅರಸು ವಸತಿ ಯೋಜನೆಯಡಿಯಲ್ಲಿ 69,000 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದೆ. ಅಲೆಮಾರಿ ಹಾಗೂ ಅರೆ ಅಲೆಮಾರಿ ವರ್ಗದವರನ್ನು ಒಳಗೊಂಡಂತೆ 14 ಫಲಾನುಭವಿಗಳು ಸೇರ್ಪಡೆಯಾಗಿದ್ದಾರೆ. ನಾನು ತಮಗೆ ಸ್ಪಷ್ಟಪಡಿಸುವುದೇನೆಂದರೆ,

**(644) 09.06.2017 11.30 SV-MD(VK)**

**ಶ್ರೀಮತಿ ಜಯಮ್ಮ(ಮುಂದು):-** ಸನ್ಮಾನ್ಯ ಸಭಾಪತಿಯವರೆ, 14 ಫಲಾನುಭವಿಗಳಿಗೂ ಕೊಡಲಿ. ಆದರೆ ನಾನು ಈ ಒಂದು ಗೊಲ್ಲರ ಹಟ್ಟಿಯ ಪರಿಸ್ಥಿತಿ ಮತ್ತು ದುಸ್ಥಿತಿಗಳ ಬಗ್ಗೆ ಎಂ.ಎಲ್.ಸಿ. ಆದಂದಿನಿಂದಲೂ ಅಲ್ಲಿಗೆ ಭೇಟಿ ಕೊಟ್ಟಾಗ, ಮೂಢ ನಂಬಿಕೆಗಳ ಬಗ್ಗೆ ಅರಿವು ಮೂಡಿಸಲಿಕ್ಕೆ ಹೋದಾಗ ಕೂಡ ಮನೆಗಳ ಬೇಡಿಕೆ ಹೆಚ್ಚಾಗಿರುತ್ತದೆ. ಅದಕ್ಕಾಗಿ ಇನ್ನೂ ಹೆಚ್ಚು ಮನೆಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಹಾಗೂ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಶೇಷ ಪ್ಯಾಕೇಜ್ ಅರೆ-ಅಲೆಮಾರಿ, ಅಲೆಮಾರಿ ಮತ್ತು ಗೊಲ್ಲರಹಟ್ಟಿಗಳಿಗೆ ಇರುವುದಿಲ್ಲ. ಆದರೆ ದೇವರಾಜ್ ಅರಸು ವಸತಿ ನಿಗಮದಿಂದ ಈ ವರ್ಷ ಅಂದರೆ 2017-18ರಲ್ಲಿ 69,000 ಮನೆಗಳನ್ನು ನಿರ್ಮಾಣ ಮಾಡುವ ಗುರಿ ಇಟ್ಟುಕೊಂಡು 14 ವಿಶೇಷ ವರ್ಗಗಳಾಗಿ ವಿಂಗಡಿಸಿದ್ದು, ಅದರಲ್ಲಿ 13ನೇ ವರ್ಗ ಅಲೆಮಾರಿ/ಅರೆ-ಅಲೆಮಾರಿ ಇವರದ್ದೇ ಆಗಿದೆ. ಅದರಲ್ಲಿ ಜನಸಂಖ್ಯೆ ಆಧಾರಿತವಾಗಿ ನಾವು ಮನೆಗಳನ್ನು ಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಲೆಮಾರಿ/ಅರೆ-ಅಲೆಮಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಈ ವರ್ಷ ಅಂದರೆ 2017-18ನೇ ಸಾಲಿನಲ್ಲಿ ಗೊಲ್ಲ ಸಮುದಾಯಕ್ಕೆ 833 ಮತ್ತು ಅಲೆಮಾರಿ/ಅರೆ-ಅಲೆಮಾರಿ ಸಮುದಾಯಕ್ಕೆ 833 ಒಟ್ಟು 1666 ಮನೆಗಳ ಭೌತಿಕ ಗುರಿಯನ್ನು ಮಾಡಿಕೊಂಡಿದ್ದೇವೆ. ರೂ.20 ಕೋಟಿಗಳನ್ನು ಅದಕ್ಕೆ ನಿಗದಿ ಪಡಿಸಲಾಗಿದೆ. ದೇವರಾಜ್ ಅರಸು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಗಮದಲ್ಲಿ 14 ವಿಶೇಷ ವರ್ಗಗಳಿಗೆ ಕೊಡಬೇಕಾದಂತಹದ್ದರಲ್ಲಿ ಅಲೆಮಾರಿ/ಅರೆ-ಅಲೆಮಾರಿ ವರ್ಗಕ್ಕೂ ನಾವು ಮನೆಗಳನ್ನು ಕೊಡುತ್ತೇವೆ.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಕಾಳಜಿ ಮತ್ತು ಕಳಕಳಿಯನ್ನು ಹೊಂದಿರುವಂತಹವರು. ಗೊಲ್ಲರಹಟ್ಟಿಗಳ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೂಡ ಅಲೆಮಾರಿ/ಅರೆ-ಅಲೆಮಾರಿ ಎಂಬ ಕಂದಾಯ ಗ್ರಾಮಗಳನ್ನು ಮಾಡುವುದಕ್ಕೆ ಸಹಕಾರವನ್ನು ನೀಡಿರುತ್ತಾರೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರೂ ಸಹ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ. ಆದರೆ ಈ ಗೊಲ್ಲರ ಹಟ್ಟಿಯ ದುಸ್ಥಿತಿಗಳು ಹೇಗಿದೆ ಎಂದರೆ ಮೂಲಭೂತ ಸೌಕರ್ಯದಿಂದ, ನಾಗರೀಕತೆಯಿಂದ ದೂರವಿದ್ದು, ಕೃಷಿಯನ್ನು ಅವಲಂಬಿಸಿದ್ದಾರೆ ಹಾಗೂ ಕುರಿಗಾಹಿಗಳಾಗಿದ್ದಾರೆ.

ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು ।
ಮೇಟಿಯಿಂ ರಾಟಿ ನಡೆದುದಲ್ಲದ ದೇಶ ।
ದಾಟವೇ ಕೆಡಗು ಸರ್ವಜ್ಞ ॥

ಇಂತಹ ಸರ್ವಜ್ಞನ ತ್ರಿಪದಿಯನ್ನು ನಂಬಿ ಜೀವನ ಮಾಡುತ್ತಿರುವವರು ಕುರಿಗಾಹಿಗಳು. ಕುರಿಕಾಯುವವರ ಕುರಿತು ಇನ್ನೊಂದು ಜನಪದ ಮಾತಿದೆ.

ಕುರಿಯ ಕಾಯುವವನಿಗೇಕೆ ನೆರಿಗೆ ಮಾಸಾದರೇನು ।
ಕುರಿಹಟ್ಟಿ ಅವನ ಮನೆಮಾರು ॥
ಗಿಡಗಂಟಿ ಅವನ ತಲೆದಿಂಬು ।

ಅಂತೆಯೇ ಕುರಿಗಾಹಿಗಳು ಎಲ್ಲಿ ಮಳೆ-ಬೆಳೆ ಆಗುತ್ತದೆಯೋ ಅಲ್ಲಿ ಪಶುಸಂಗೋಪನೆಯನ್ನು ಮಾಡುತ್ತಿದ್ದರು. ಇಂದು ಮನೆ ಬೇಡಿಕೆ ಹೆಚ್ಚು ಇರುವುದರಿಂದ ಹೆಚ್ಚು ಮನೆಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಹೆಚ್ಚಿಗೆ ಮನೆಗಳನ್ನು ನೀಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ:- 2479**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜು (ಬಿ.ಎಂ.ಎಲ್):-** ಮಾನ್ಯ ಸಭಾಪತಿಯವರೆ, 2013-14ರಲ್ಲಿ ವಾಜಪೇಯಿ ನಗರ ವಸತಿ ಯೋಜನೆ ಎಂಬುದು ತುಮಕೂರು ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಈಗಾಗಲೇ 4 ವರ್ಷಗಳಾಯಿತು. ತುಮಕೂರು ಜಿಲ್ಲೆಯ ಒಂದು ತಾಲ್ಲೂಕಿನಲ್ಲಿಯೂ ಇದು ಪೂರ್ಣಗೊಂಡಿರುವುದಿಲ್ಲ. ಅದನ್ನು ಪೂರ್ಣಗೊಳಿಸುವುದಕ್ಕೆ ಅಧಿಕಾರಿಗಳಿಗೆ ಇಚ್ಛಾಶಕ್ತಿ ಇರುವುದಿಲ್ಲವೆ? ಯಾವ ತಾಲ್ಲೂಕಿನಲ್ಲಿಯೂ ಶೇ.100ರಷ್ಟು ಕೆಲಸ ಪೂರ್ಣಗೊಂಡಿರುವುದಿಲ್ಲ. ಎಲ್ಲಾ ತಾಲ್ಲೂಕಿನಲ್ಲಿಯೂ ಶೇ.40 ಅಥವಾ ಶೇ.50 ಮಾತ್ರ ಮುಗಿದಿದೆ. ತುಮಕೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಹೊಸದಾಗಿ ಕಟ್ಟುತ್ತಿರುವ ವಸತಿಗೃಹಗಳು ಸಹ ಕಳಪೆ ಕಾಮಗಾರಿಯದ್ದಾಗಿದೆ. ಇದೂ ಸಹ ಪ್ರಾರಂಭವಾಗಿ 2-3 ವರ್ಷವಾಯಿತು. ಈಗಾಗಲೇ ಎರಡು ವರ್ಷಗಳು ಮುಗಿದಿದ್ದರೂ ಸಹ ಇನ್ನೂ ಹಸ್ತಾಂತರ ಮಾಡಿರುವುದಿಲ್ಲ. ಈ ಕಾಮಗಾರಿಯ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಾಜಪೇಯಿ ವಸತಿ ಯೋಜನೆಯ ಫಲಾನುಭವಿಗಳಿಗೆ ನೀಡಲಾಗುತ್ತಿರುವ ರೂ.1,20,000/- ಸಾಕಾಗುವುದಿಲ್ಲ. ಇಂದಿನ ದರದಲ್ಲಿ ಒಂದು ಶೀಟ್ ಮನೆಯನ್ನು ಕಟ್ಟುತ್ತೇವೆಂದರೂ ಕನಿಷ್ಟ ರೂ.2,00,000/- ಬೇಕು. ಆದ್ದರಿಂದ ಈ ಕೂಡಲೇ ಈ ಮೊತ್ತವನ್ನು ಹೆಚ್ಚಿಸಬೇಕು. ಏಕೆಂದರೆ ಎಲ್ಲಾ ಕಟ್ಟಡ ನಿರ್ಮಾಣ ಸಾಮಗ್ರಿಗಳ ದರಗಳೂ ಬಹಳ ಹೆಚ್ಚಾಗಿವೆ. ನೀವು ಮಾಡುತ್ತಿರುವ ಕಾನೂನುಗಳು ಫಲಾನುಭವಿಗಳಿಗೆ ಅನುಕೂಲವಾಗುವಂತಿರಬೇಕು. ಐ.ಎ.ಎಸ್. ಅಧಿಕಾರಿಗಳು ದಪ್ಪ ದಪ್ಪವಾದ ಪುಸ್ತಕಗಳನ್ನು ಓದಿ ಅಧಿಕಾರಿಗಳಾಗಿರುತ್ತಾರೆ. ಕಾನೂನು ಮಾತ್ರ ಚಿಕ್ಕದಾಗಿ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಕಾಂತರಾಜುರವರೆ, ಜಾಸ್ತಿ ಮಾಡಬೇಕೆಂದು ಹೇಳಿದಿರಿ. ಎಷ್ಟು ಮಾಡಬೇಕೆಂದು ಹೇಳಲಿಲ್ಲ. ಅದನ್ನು ಹೇಳಿ. ಅವರಿಗೆ ಕೊಡಲಿಕ್ಕಾಗುತ್ತದೆಯೋ ಇಲ್ಲವೋ ನೋಡೋಣ.

**ಶ್ರೀ ಕಾಂತರಾಜು (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೆ, ಕನಿಷ್ಟ ರೂ.3,00,000/–ಗಳನ್ನು ನೀಡಬೇಕು. ನಮ್ಮ ಜಿಲ್ಲೆಯಲ್ಲಿ ಮನೆಗಳಿಗಾಗಿ ಕೊಟ್ಟಿದ್ದಾರೆ. ಅದರಲ್ಲಿಯೂ ಇದೇ ರೀತಿ ಆಗಿದೆ. ನಮ್ಮ ಭಾಗದಲ್ಲಿ ತೀರಾ ಹಿಂದುಳಿದ ತಾಲ್ಲೂಕುಗಳು ಹೆಚ್ಚಿವೆ. ದಯಮಾಡಿ ಹೆಚ್ಚಿನ ಮನೆಗಳನ್ನು ನಮ್ಮ ಜಿಲ್ಲೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ ವಾಜಪೇಯಿ ನಗರ ವಸತಿ ಯೋಜನೆಯು ಕೇಂದ್ರದ ಪಾಲು ಎಂದು ತಿಳಿದುಕೊಂಡಿದ್ದಾರೆ. ಇದು ತಪ್ಪು. ಇದು 2010–11ನೇ ಸಾಲಿನಲ್ಲಿ ಜಾರಿಗೆ ಬಂದ ಸಂಪೂರ್ಣವಾಗಿ ಕರ್ನಾಟಕ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿದೆ. ಇದರಲ್ಲಿ ಮನೆಗಳು ಪೂರ್ಣಗೊಂಡಿಲ್ಲ ಎಂದು ಹೇಳುತ್ತಾರೆ. ತುಮಕೂರು ಜಿಲ್ಲೆಯಲ್ಲಿ 2013–14ನೇ ಸಾಲಿನಲ್ಲಿ 152 ಮನೆಗಳು ಪೂರ್ಣಗೊಂಡಿದ್ದು, ಉಳಿದವು ಪ್ರಗತಿಯಲ್ಲಿದೆ. 2014–15ರಿಂದ 2016–17ರಲ್ಲಿ 888 ಮನೆಗಳು ಪ್ರಗತಿಯಾಗಿವೆ. ಉಳಿದವು ಪ್ರಗತಿಯಲ್ಲಿವೆ. ಎಷ್ಟು ಬೇಡಿಕೆಯಿದೆಯೋ ಅಷ್ಟು ದುಡ್ಡನ್ನು ಬೇಡಿಕೆಗನುಗುಣವಾಗಿ ನೀಡುತ್ತಿದ್ದೇವೆ. ಅವರು ತಿಳಿದಿರುವಂತೆ ಹಣವನ್ನು ಯಾವುದೇ ಬ್ಯಾಂಕಿನಲ್ಲಿಟ್ಟಿರುವುದಿಲ್ಲ. ರೂ.1,20,000/– ಸಾಲುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದು, ಅದು ಎಲ್ಲರ ಗಮನಕ್ಕೂ ಬರುತ್ತಿದೆ. ಅದನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಲಾಗುವುದು.

**ಶ್ರೀ ಕಾಂತರಾಜು (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಗಮನಕ್ಕೆ ಒಂದು ಅಂಶವನ್ನು ತರಬಯಸುತ್ತೇನೆ. ನಾಲ್ಕು ವರ್ಷಗಳು ಕಳೆದರೂ ಸಹ ಒಂದೊಂದು ತಾಲ್ಲೂಕಿನಲ್ಲಿಯೂ 50 ಮನೆ, 20 ಮನೆ, 30 ಮನೆ ಈ ರೀತಿ ಉಳಿದಿದೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಅನುಮತಿಯೊಂದಿಗೆ Review Meeting ನಲ್ಲಿ ತುಮಕೂರು ಜಿಲ್ಲಾಧಿಕಾರಿಗಳು ಇದನ್ನು ಒಪ್ಪಿಕೊಂಡಿದ್ದಾರೆ ಎಂಬ ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ರಮೇಶ್ ಬಾಬುರವರೆ, ಅವರು ಮಾತನಾಡುತ್ತಿರುವಾಗ ನೀವು ಮಧ್ಯ ಪ್ರವೇಶ ಮಾಡಬೇಡಿ. ಅವರು ಮಾತನಾಡಿದ ನಂತರ ನಿಮಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಕಾಂತರಾಜು (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಟಿ.ಬಿ.ಜಯಚಂದ್ರ ಅವರಿದ್ದಾಗಲೂ ಸಹ ಇದರ ಬಗ್ಗೆ ಚರ್ಚೆಯಾಯಿತು. ಆಗಲೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಅಧಿಕಾರಿಗಳು ಈ ರೀತಿ ಆಗಿದೆಯೆಂದು ಒಪ್ಪಿಕೊಂಡರು. ಜಿಪಿಎಸ್ ಮಾಡಲಾಗುವುದು; ಅಧಿಕಾರಿಗಳು ಬದಲಾಗಿದ್ದಾರೆ ಈ ರೀತಿ ಹೇಳಿ ಕಾನೂನನ್ನು ಹೆಚ್ಚಿಸುತ್ತಿದ್ದಾರೆ. ನಾವೀಗ ಆಧುನೀಕರಣಗೊಳ್ಳುತ್ತಿದ್ದೇವೆ. ಇವರು single window type ಮಾಡುತ್ತಿದ್ದಾರೆ. ಮುಂಚೆ ಈ ಹಣವನ್ನು ತಹಶೀಲ್ದಾರ್‌ರವರೆ ಕೊಡುತ್ತಿದ್ದರು. ಈಗ ಎಲ್ಲೆಲ್ಲಿ ಅಲೆದಾಡಬೇಕು. AEE permission ತೆಗೆದುಕೊಳ್ಳಬೇಕು. PDO ಫೋಟೊ ತೆಗೆಯಬೇಕು. ಇನ್ಯಾರೋ ಒಬ್ಬರು GPS ಗೆ ಬರುತ್ತಾರೆ. GPS ಕೆಲಸ ಮಾಡುವವರು ನಮ್ಮ ಇಡೀ ಜಿಲ್ಲೆಯಲ್ಲಿ ನಾಲ್ಕೈದು ಜನ ಇರುವುದಿಲ್ಲ. 11 ತಾಲ್ಲೂಕಿಗೆ 200 ಮನೆ, 300 ಮನೆ, 400 ಮನೆಗಳನ್ನು ಕೊಡುತ್ತಾರೆ. GPS ಕೆಲಸ ಮಾಡುವವರು ಕೇವಲ ಮೂರ್ನಾಲ್ಕು ಜನರಿದ್ದರೆ ಹೇಗೆ ಕೆಲಸವಾಗುತ್ತದೆ. ಒಂದು ಬಾರಿ GPS activate ಆಗಿರಲಿಲ್ಲ. ಅಧಿಕಾರಿಗಳು ಅದೇನು ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ ಎಂದು ಅರ್ಥವಾಗುವುದಿಲ್ಲ. ಮಾನ್ಯ ಸಚಿವರಿಗೆ ಕೆಲಸ ಮಾಡುವುದಕ್ಕೆ ಬಹಳ ಇಚ್ಛಾಶಕ್ತಿ ಇದೆ. ಅವರು ಅಧಿಕಾರಿಗಳಿಗೆ ಛಾಟಿ ಏಟು ಬೀಸದಿದ್ದಲ್ಲಿ, ಅವರ ಇಚ್ಛಾಶಕ್ತಿಯನ್ನು block ಮಾಡುವಂತಹ ಕೆಲಸವನ್ನು ಅಧಿಕಾರಿಗಳು ಮಾಡುತ್ತಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಕೇವಲ ಒಂದು ತಿಂಗಳ ಹಿಂದಷ್ಟೆ ನಡೆದ ತುಮಕೂರು ಜಿಲ್ಲೆಯ KDP ಸಭೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಶೇ.50-60 ಮನೆಗಳು ಬಾಕಿ ಇವೆ. ಇದನ್ನೂ ಮಾನ್ಯ ಸಚಿವರು review ಮಾಡಬೇಕಾಗುತ್ತದೆ.

**ಶ್ರೀ ಎಂ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ಖಂಡಿತ ಇದರ ಬಗ್ಗೆ ಗಮನ ಹರಿಸಲಾಗುವುದು.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀಮತಿ ಮೋಟಮ್ಮನವರದ್ದಾಗಿದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಶ್ರೀಮತಿ ಮೋಟಮ್ಮನವರ ಪ್ರಶ್ನೆಗೆ ಮುಂದಿನ ವಾರದೊಳಗಾಗಿ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಆಗಲಿ. ಮುಂದಿನ ಪ್ರಶ್ನೆ ಶ್ರೀ ಶ್ರೀಕಾಂತ್ ಘೋಟ್ನೇಕರ್ ಅವರದು.

**ಶ್ರೀ ಐವನ್ ಡಿ'ಸೋಜ:–** ಅವರು ಬಂದಿರುವುದಿಲ್ಲ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀಮತಿ ಜಯಮಾಲ ಅವರದ್ದು.

**ಪ್ರಶ್ನೆ ಸಂಖ್ಯೆ 2584**

**(ಉತ್ತರ ಲಗತ್ತಿಸಲಾಗಿದೆ)**

**ಡಾ:ಜಯಮಾಲ:–** ಮಾನ್ಯ ಸಭಾಪತಿಯವರೆ, ಸಚಿವರು ಅತ್ಯಂತ ಸುದೀರ್ಘವಾದ ಉತ್ತರವನ್ನು ನೀಡಿದ್ದಾರೆ. ನಾನು ಅವರ ಗಮನಕ್ಕೆ ಕೆಲವು ಅಂಶಗಳನ್ನು ತರಲಿಕ್ಕೆ ಬಯಸುತ್ತೇನೆ. ಮಕ್ಕಳ ಗ್ರಾಮಸಭೆ ಎನ್ನುವಂತಹದ್ದು ಅತ್ಯಂತ ತುರ್ತಾಗಿ ನಡೆಯಬೇಕಾದಂತಹ ಸಭೆಗಳು.

(645)/9-6-2017/11-40/**RC-AK**

**ಡಾ||ಜಯಮಾಲ (ಮುಂದು):**

ಸುಮಾರು ಹತ್ತು ವರ್ಷಗಳಿಂದ ಗ್ರಾಮ ಸಭೆಗಳು ನಡೆಯುತ್ತಿದೆ. ಮಕ್ಕಳ ಹಕ್ಕು ಮತ್ತು ಮಕ್ಕಳ ಧ್ವನಿಗಳು ಮುಕ್ತವಾಗಿ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ತೋಡಿಕೊಳ್ಳುವಂತಹ ಒಂದು ಜಾಗ. ನಾನು ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಅನೇಕ ಗ್ರಾಮಗಳಲ್ಲಿ ಮಕ್ಕಳ ಗ್ರಾಮ ಸಭೆಯನ್ನು ನಡೆಸುತ್ತಿಲ್ಲ. ಕೆಲವು ಕಡೆ ನಡೆಸಿದರೂ ಅದು ಕಾಟಾಚಾರಕ್ಕೆ ನಡೆಸುವಂಥದ್ದು ತಮ್ಮ ಗಮನಕ್ಕೆ ಬಂದಿದೆಯೇ? ತಾವು ಕೊಟ್ಟಿರುವಂತಹ ಉತ್ತರದಲ್ಲಿ ಸರ್ಕಾರದ ಗಮನಕ್ಕೆ ಬಂದಿಲ್ಲ, ಒಂದು ವೇಳೆ ಬಂದರೆ ನಾನು ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಹೇಳಿದ್ದಿರಿ. ಇದುವರೆಗೂ ಎಷ್ಟು ಮಕ್ಕಳ ಸಮಸ್ಯೆಯನ್ನು ಬಗೆಹರಿಸಿದ್ದೀರಿ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ, ಶಾಲಾ ಮಕ್ಕಳು ಮುಕ್ತವಾಗಿ ಚರ್ಚಿಸುವುದಕ್ಕೆ ಮತ್ತು ಭಾಗವಹಿಸುವುದಕ್ಕೆ ಮಕ್ಕಳಿಗೆ ಅವಕಾಶ ನೀಡಲಾಗಿದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಒಂದು ಮಾತೃ ಹೃದಯ ಮಕ್ಕಳ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿರುವಂತಹ ಒಂದು ಪ್ರಶ್ನೆ ಇದು. ಮಾನ್ಯ ಸದಸ್ಯರು ಒಂದು ಮಾತನ್ನು ಕೇಳಿದರು. ಏನೆಂದರೆ, ಎಲ್ಲಿ ಮಕ್ಕಳ ಗ್ರಾಮ ಸಭೆ ನಡೆದಿಲ್ಲ, ಅದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದು. ಆದರೆ ಆ ರೀತಿಯಾಗಿ ದೂರಿನ ರೂಪದಲ್ಲಿ ಬಂದಿಲ್ಲ. ಆದರೆ ಮಕ್ಕಳ ಗ್ರಾಮ ಸಭೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕಾದುದು ಹಾಗೂ ಅದನ್ನು ಹೆಚ್ಚು ಪ್ರಚಾರ ಹಾಗೂ ಆ ಮಕ್ಕಳಿಗೆ ಆಸಕ್ತಿಯನ್ನು ಕುದುರಿಸುವಂತಹ ಗ್ರಾಮಸಭೆಗಳು ಆಗಬೇಕು. ಈಗಾಗಲೇ ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಆ ದಿಶೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ನವೆಂಬರ್ ತಿಂಗಳಿನಲ್ಲಿ ಮಕ್ಕಳ ಗ್ರಾಮಸಭೆಗಳನ್ನು ಮಾಡುತ್ತೇವೆ. ಈಗಾಗಲೇ S.I.R.D. (State Institute of Rural Development and Panchayat Raj) ಒಳಗೆ ನಾವು ಏನು ನಮ್ಮ ಗ್ರಾಮಪಂಚಾಯಿತಿ ಸದಸ್ಯರುಗಳಿಗೆ ಅಧ್ಯಕ್ಷರುಗಳಿಗೆ ತರಬೇತಿಯನ್ನು ಕೊಟ್ಟಿದ್ದೇವೆ, ಆ ತರಬೇತಿ ಕೊಡುವ ಸಂದರ್ಭದಲ್ಲಿ ನಾವು ಮಕ್ಕಳ ಗ್ರಾಮಸಭೆಗಳ ಬಗ್ಗೆ ಸಾಕಷ್ಟು sensitize ಮಾಡಿದ್ದೇವೆ. ಎಲ್ಲಿ ಮಕ್ಕಳ ಗ್ರಾಮಸಭೆಗಳು ನಡೆಯುವುದಿಲ್ಲ ಅಲ್ಲಿ ನಮ್ಮ ಪಿ.ಡಿ.ಓ. ಮೇಲೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ D.C.P. ಮೇಲೆ ಸೂಕ್ತ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುವ ಸಲುವಾಗಿ ಸನ್ಮಾನ್ಯ ಸದಸ್ಯರು ಏನಾದರು ಸಲಹೆಗಳನ್ನು ಕೊಟ್ಟರೆ ಅದನ್ನು ನಾವು ಸ್ವಾಗತಿಸುತ್ತೇವೆ, ಅದನ್ನು ತಾವು ದಯಮಾಡಿ ಕಳುಹಿಸಬೇಕು.

**ಡಾ॥ಜಯಮಾಲ:-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಒಂದು footnote ಅನ್ನು ಕೊಟ್ಟಿದ್ದಾರೆ. ಗ್ರಾಮ ಪಂಚಾಯಿತಿ ವತಿಯಿಂದ ಮಕ್ಕಳ ಗ್ರಾಮ ಸಭೆಗಳನ್ನು ನಡೆಸಲಾದರು ಮಕ್ಕಳಿಗೆ ಸಂಬಂಧಿಸಿದ ಹಕ್ಕುಗಳು ಮತ್ತು ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳುವ ನೇರವಾದ ಹೊಣೆಗಾರಿಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಗೆ ಇರುತ್ತದೆ ಎಂದು ತಿಳಿಸಿದ್ದಾರೆ.

ಮಾನ್ಯ ಸಭಾಪತಿಯವರೆ, ನಾನು ಕೇಳಿರುವಂಥದ್ದು ಮಕ್ಕಳ ಸಮಸ್ಯೆ ಬಗ್ಗೆ. ಮಕ್ಕಳಿಗೆ ನೂರಾರು ಸಮಸ್ಯೆಗಳಿರುತ್ತದೆ. ಇಲ್ಲಿ ಶಾಲೆಯ ಸಮಸ್ಯೆ ಬಗ್ಗೆ ಬರುತ್ತದೆ, ಮಕ್ಕಳ ಆಟ-ಪಾಠಕ್ಕೆ ಸಂಬಂಧಪಟ್ಟಂತಹ ವಿಷಯಗಳು ಬರುತ್ತದೆ. ತಾಯಿ-ತಂದೆಯ ಬಳಿ ಹೇಳಿಕೊಳ್ಳುವುದಕ್ಕೆ ಆಗದೆ ಇರುವಂತಹ ಸಮಸ್ಯೆ ಇರುತ್ತದೆ. ಮುಕ್ತವಾಗಿ ಕೌನ್ಸಿಲಿಂಗ್ ಮಾಡುವಂತಹ ಸಮಸ್ಯೆಗಳಿರುತ್ತದೆ. ಬಹಳ

ನಿರ್ಲಕ್ಷ್ಯಕ್ಕೆ ಒಳಪಟ್ಟಂಥವರು ಎಂದರೆ ಮಕ್ಕಳು. ಮಾನ್ಯ ಸಭಾಪತಿಯವರೆ, ಇವತ್ತು RTE problem ಮಕ್ಕಳಿಗೆ ಅತಿ ಹೆಚ್ಚಾಗಿದೆ. ಇವತ್ತು ಬಿಪಿಎಲ್ ಕಾರ್ಡು ಹೊಂದಿರುವಂತಹ ಮಕ್ಕಳ ಸಮಸ್ಯೆಗಳು ಇನ್ನೊಂದು ರೀತಿಯಲ್ಲಿ ಹೆಚ್ಚಾಗಿದೆ. ಆಟದ ಮೈದಾನ ಇಲ್ಲದೆ ಇರುವುದರಿಂದ ಮಕ್ಕಳಿಗೆ ಸಾಕಷ್ಟು ಸಮಸ್ಯೆಗಳಾಗಿದೆ. ಅದೇ ರೀತಿ ಶಾಲೆಯಲ್ಲಿ ಪಾಠ ಮಾಡಲು ಶಿಕ್ಷಕರು ಇಲ್ಲದೆ ನಮ್ಮ ಮಕ್ಕಳಿಗೆ ಹೆಚ್ಚು ಸಮಸ್ಯೆಯಾಗಿದೆ. ನಾನು ಈ ಪ್ರಶ್ನೆಯನ್ನು ಏಕೆ ಪ್ರಸ್ತಾಪ ಮಾಡಿದ್ದೇನೆಂದರೆ, ಇಲ್ಲಿ ಎಲ್ಲಾ ಮಾನ್ಯ ಸಚಿವರುಗಳಿದ್ದಾರೆ, ಆದಕಾರಣ ಮಕ್ಕಳ ಸಮಸ್ಯೆ ಯಾವ ರೀತಿ ಇದೆ ಎಂಬುದನ್ನು ಬಹುಶಃ ಇಲ್ಲಿರುವಂತಹ ಎಲ್ಲಾ ಸಚಿವರುಗಳಿಗೆ ಹಾಗೂ ಸಂಬಂಧಪಟ್ಟವರ ಗಮನಕ್ಕೆ ತರಬಯಸುತ್ತೇನೆ.

ಇವತ್ತಿನ ದಿವಸ ಕಾರವಾರದಲ್ಲಿ 8 ಶಾಲೆಗಳಲ್ಲಿ ಶಿಕ್ಷಕರುಗಳೇ ಇಲ್ಲ, ಕುಣಿಗಲ್ ತಾಲ್ಲೂಕಿನಲ್ಲಿ ಆರು ಶಾಲೆಗಳಲ್ಲಿ ಒಬ್ಬ ಶಿಕ್ಷಕರು ಇಲ್ಲ. ಈ ರೀತಿ ಇರುವಾಗ ಈ ಮಕ್ಕಳು ತಮ್ಮ ಸಮಸ್ಯೆಯನ್ನು ಯಾರಿಗೆ ಹೇಳಿಕೊಳ್ಳಬೇಕೆಂದು ಈ ಪ್ರಶ್ನೆಯ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಕ್ಕಳಿಗೆ ಸಮಸ್ಯೆಗಳಾದಾಗ ಅವರ ಸಮಸ್ಯೆಗಳನ್ನು ಪರಿಹರಿಸಬೇಕೆಂದರೆ, ಗ್ರಾಮ ಸಭೆಗಳು ಉತ್ತಮವಾಗಿ ನಡೆಯಬೇಕು. ಮಕ್ಕಳ ಸಮಸ್ಯೆಗೆ ಮುಕ್ತವಾದಂತಹ ಉತ್ತರಗಳು ಸಿಕ್ಕಿದರೆ ಆ ಮಕ್ಕಳಿಗೆ ಒಳ್ಳೆಯದಾಗುತ್ತದೆ, ಅವರ ಧ್ವನಿಗೆ ಬೆಲೆ ಸಿಗುತ್ತದೆ ಎನ್ನುವ ಕಾರಣಕ್ಕೋಸ್ಕರ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಈ ಇಲಾಖೆ ಮಕ್ಕಳಿಗೆ ಎಲ್ಲಾ ರೀತಿಯಾದಂತಹ ಸವಲತ್ತುಗಳನ್ನು ನೀಡುತ್ತಿದೆ ಆದರೂ ಮಕ್ಕಳ ಸಮಸ್ಯೆಗಳು ಬಹುರೂಪವನ್ನು ಪಡೆದುಕೊಳ್ಳುತ್ತಿರುವಂತಹ ಸಮಸ್ಯೆ ಆಗಿರುವುದರಿಂದ ಇಲ್ಲಿ ಇರುವಂತಹ ಎಲ್ಲಾ ಸಚಿವರುಗಳಲ್ಲಿ ಕೇಳಿಕೊಳ್ಳುವುದಿಷ್ಟೆ, ಇದು ಒಂದು ಸಮಸ್ಯೆಯೆಂದು ಭಾವಿಸಿಕೊಂಡು ಇದಕ್ಕೆ ತಾವೆಲ್ಲರೂ ಸಹ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರ ಬಗ್ಗೆ ಆ ಇಲಾಖೆ ಬಗ್ಗೆ ಮಾನ್ಯ ಸದಸ್ಯರು ಅಭಿನಂದನೆಯನ್ನು ಸಲ್ಲಿಸಿದರು. ಆದಕಾರಣ ಅವರ ಪರವಾಗಿ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ತಾವೇನು ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ ಆ ಎಲ್ಲಾ ಸಲಹೆಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಮಾನ್ಯ ಸಭಾಪತಿಯವರೆ, ಮಕ್ಕಳ ಗ್ರಾಮ ಸಭೆಗಳು ಕೇವಲ ಅವರಿಗೆ ಬೇಕು ಬೇಡಗಳು ಡಿಮ್ಯಾಂಡ್ ಇಡುವಂತಹ ಸಭೆಗಳು ಮಾತ್ರ ಆಗಬಾರದು. ಅದು ಆಗಿಲ್ಲ. ನಾವು ಕೆಲವು ಉದಾಹರಣೆಗಳನ್ನು ನೋಡಿದ್ದೇವೆ. ಮಕ್ಕಳ ಗ್ರಾಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭೆಗಳಲ್ಲಿಯೂ ಸಹ ನಾವು ಶೌಚಾಲಯಕ್ಕಾಗಿ ಸಮರ ಕಾರ್ಯಕ್ರಮವನ್ನು ಬಯಲು ಬಹಿರ್ದೆಸೆ ಮುಕ್ತವಾಗಿರುವಂತಹ ಗ್ರಾಮಗಳನ್ನು ಮಾಡಬೇಕಾದಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ, ಮಕ್ಕಳ ಪಾಲ್ಗೊಳ್ಳುವಿಕೆ, ಮಕ್ಕಳ ಪಾಲಕರ ಪಾಲ್ಗೊಳ್ಳುವಿಕೆ ಬಗ್ಗೆ ಸಹ ವಿಸ್ತೃತವಾಗಿ ಅವರಿಗೆ ಮನವರಿಕೆ ಮಾಡಿಕೊಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಹಾಗಾಗಿ ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಕೊಪ್ಪಳದಲ್ಲಿ ಮಲ್ಲಮ್ಮ ಎನ್ನುವಂತಹ ಹುಡುಗಿ 9ನೇ ತರಗತಿಯನ್ನು ಓದುತ್ತಿರುವಂತಹ ಹುಡುಗಿ ಆಕೆ ಇವತ್ತು ಪ್ರಧಾನ ಮಂತ್ರಿಯವರ ಗಮನ ಸೆಳೆಯುವಷ್ಟರ ಮಟ್ಟಿಗೆ ಎತ್ತರಕ್ಕೆ ಹೋಗಿದ್ದಾರೆ. ಇದೇ ರೀತಿ ನಮ್ಮ ಹಿರಿಯೂರ ಹತ್ತಿರ ಕುಮಾರಿ ಲಾವಣ್ಯ ಎನ್ನುವಂತಹ ಹುಡುಗಿ ಅವರ ಪಾಲಕರ ವಿರುದ್ಧವೆ ಉಪವಾಸ ಸತ್ಯಗ್ರಹವನ್ನು ತನ್ನ ಮನೆಯಲ್ಲಿಯೇ ಮಾಡುವುದಕ್ಕೆ ಪ್ರಾರಂಭ ಮಾಡಿದರು. ನಂತರ ಊರಿನವರು ಅವಳ ಪ್ರತಿಭಟನೆಯನ್ನು ನೋಡಿ ನಮ್ಮ ಊರಿನೊಳಗೆ ಎಲ್ಲರ ಮನೆಯಲ್ಲಿಯೂ ಶೌಚಾಲಯ ಆಗಬೇಕೆಂದು ನಿರ್ಧರಿಸಿದರು. ಆ ರೀತಿಯಾದಂತಹ ಒಂದು ಜಾಗೃತಿಯನ್ನು ಈ ಮಗು ಸೃಷ್ಠಿ ಮಾಡಿತು ಎಂದರೆ ಮಕ್ಕಳಲ್ಲಿ ಅಪಾರ ಶಕ್ತಿ ಇರುತ್ತದೆ. ಆ ಶಕ್ತಿಯನ್ನು ನಾವು ಬಳಕೆ ಮಾಡಿಕೊಳ್ಳಬೇಕು ಹಾಗೂ ಅವರನ್ನು ನಾಯಕರನ್ನಾಗಿಯೂ ಬೆಳೆಸುವುದಕ್ಕೆ ಈ ಗ್ರಾಮ ಸಭೆಗಳು ಬಹಳ ಸಹಾಯಕವಾಗುತ್ತದೆ. ಆದುದರಿಂದಲೇ ಎಲ್ಲಾ ಮಕ್ಕಳಿಗೆ 'Sanitation Champions' ಎಂದು ಹೇಳಿ ಇವತ್ತು ಅವರಿಗೆ ಪ್ರೋತ್ಸಾಹ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆಯೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ 2574**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಸ್ವಂತ ಕಟ್ಟಡ ಹೊಂದಿರುವ ಶಾಲೆಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಆ ಪ್ರಶ್ನೆಗೆ ಉತ್ತರವಾಗಿ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ 43,185 ಹಾಗೂ ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ 4486 ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ 716 ಶಾಲೆಗಳು ಸ್ವಂತ ಕಟ್ಟಡದಲ್ಲಿ ಇಲ್ಲವೆಂದು ಹೇಳಿದ್ದಾರೆ. ಸರ್ಕಾರ ಬಜೆಟ್‌ನಲ್ಲಿ ಶಿಕ್ಷಣ ಇಲಾಖೆಗೆ ಸಾಕಷ್ಟು ಅನುದಾನವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಿದೆ. ಆದರೆ 70 ಸಾವಿರಕ್ಕೂ ಅಧಿಕ ಶಾಲೆಗಳು ಶಿಥಿಲಗೊಂಡಿದೆ. ಅದಕ್ಕೆ ದುರಸ್ಥಿ ಭಾಗ್ಯವನ್ನು ಏಕೆ ಕಲ್ಪಿಸುತ್ತಿಲ್ಲ? ಬಹಳಷ್ಟು ಮಕ್ಕಳು ಇವತ್ತು ಕಟ್ಟಡ ಬೀಳುತ್ತದೋ, ನಾಳೆ ಬೀಳುತ್ತದೋ ಎಂಬ ಭಯದಿಂದ, ಅಪಾಯದ ವಾತಾವರಣದಿಂದ ಶಾಲೆಗೆ ಹೋಗುತ್ತಿಲ್ಲ. ಶಾಲೆಗೆ ಹೋಗುವಂತಹ ಮಕ್ಕಳು ಯಾವತ್ತು ಏನಾಗುತ್ತದೋ ಎಂಬ ಭಯದ ವಾತಾವರಣದಲ್ಲಿಯೇ ಅವರು ಪಾಠವನ್ನು ಕೇಳಿಸಿಕೊಳ್ಳುವಂತಹ ಒಂದು ಭಾಗ್ಯವನ್ನು ಸಹ ಸರ್ಕಾರ ಕಲ್ಪಿಸಿಕೊಟ್ಟಿದೆ. ಸರ್ಕಾರ ಏಕೆ ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲ? ದುರಸ್ಥಿ ವ್ಯವಸ್ಥೆಗೆ ಏಕೆ ಚಾಲನೆ ನೀಡುತ್ತಿಲ್ಲ? ಸರ್ಕಾರಕ್ಕೆ ಇರುವಂತಹ ಸಮಸ್ಯೆಯಾದರು ಏನು? ಸನ್ಮಾನ್ಯ ಕಿಮ್ಮನೆ ರತ್ನಾಕರ್ ಅವರು ಇದ್ದಾಗಲೂ ಸಹ ಬಹುಶಃ 7 ಸಾವಿರ ಕೋಟಿ ಅನುದಾನವನ್ನು ಇಟ್ಟು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವೆಂದು ನನಗೆ ಇದೇ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದರು. ಆದರೆ ತಾವು ಬಂದಾಗಲೂ ಯಾವ ಕೆಲಸವೂ ಮುಂದುವರೆಯುತ್ತಿಲ್ಲ, ಬಹಳಷ್ಟು ಕಡೆ ತೊಂದರೆ ಉಂಟಾಗುತ್ತಿದೆ. ಇವತ್ತಿನ ದಿವಸ ಎಸ್‌ಸಿ/ಎಸ್‌ಟಿ ಅಂದರೆ ಮೀಸಲು ಕ್ಷೇತ್ರಗಳು ಏನಿದೆ ಅಲ್ಲಿಗೆ ಮಾತ್ರ ಅನುದಾನಗಳು ಹೋಗುತ್ತಿದೆ. ಇವತ್ತು ಬಹಳಷ್ಟು ಕ್ಷೇತ್ರಗಳಲ್ಲಿ ಇರುವಂತಹ ಸರ್ಕಾರಿ ಶಾಲೆಗಳಿಗೆ ಅನುದಾನ ಬಿಡುಗಡೆ ಆಗುತ್ತಿಲ್ಲ. ಸರ್ಕಾರ ಬಜೆಟ್‌ನಲ್ಲಿ ಇಟ್ಟಿರುವಂತಹ ಅನುದಾನ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಇದಕ್ಕೆ ಕಾರಣ ಏನು? ಈ ಬಗ್ಗೆ ವಿವರಣೆಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**(646) 09.06.2017 KG.AK 11.50**

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಸುಧೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಇದರಲ್ಲಿ ಶಾಲೆಗಳನ್ನು ದುರಸ್ಥಿ ಮಾಡುವುದಕ್ಕೆ ಈಗಾಗಲೇ ಕಳೆದ ವರ್ಷ ರಾಜ್ಯ ವ್ಯಾಪ್ತಿಯಲ್ಲಿ ಒಂದು ಸಮೀಕ್ಷೆ ಮಾಡಿ ಆ ಬಗ್ಗೆ ವರದಿಯನ್ನು ತರಿಸಿಕೊಂಡಿದ್ದೇನೆ. ಅದನ್ನು ಯಾವ ಯಾವ ಕ್ಷೇತ್ರದಲ್ಲಿ ಶಾಲಾ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಏನೆಲ್ಲಾ ಕಾರ್ಯಕ್ರಮಗಳನ್ನು ಮಾಡಬೇಕು ಎಂಬುದನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ಸದಸ್ಯರ ಗಮನಕ್ಕೆ ತರುವಂತಹದ್ದು ಏನೆಂದರೆ, ಕಳೆದ ವರ್ಷದ ಬಜೆಟ್‌ನಲ್ಲಿ 17 ಸಾವಿರ ಕೋಟಿ ರೂಪಾಯಿಗಳ ಅನುದಾನ ಬಂದಿತ್ತು. ಈ ವರ್ಷದ ಬಜೆಟ್‌ನಲ್ಲಿ 18,266 ಕೋಟಿ ರೂಪಾಯಿಗಳ ಅನುದಾನ ಸಿಕ್ಕಿದೆ. ಬಹುತೇಕ ಅನುದಾನ ವೇತನ ಕೊಡುವುದಕ್ಕೆ ಮತ್ತು ಬೇರೆ ಬೇರೆ ಕಾರ್ಯಕ್ರಮಗಳಿಗೂ ಸಹ ಹೋಗುತ್ತದೆ. ಶಾಲೆಗಳ ದುರಸ್ಥಿ ಮಾಡುವುದಕ್ಕೆ ‘ಸರ್ವ ಶಿಕ್ಷ ಅಭಿಯಾನ ಯೋಜನೆ’ ಇದ್ದಂತಹ ಸಂದರ್ಭದಲ್ಲಿ

“ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಾಕಷ್ಟು ಹಣ ಬರುತ್ತಿತ್ತು. ಈಗ ನಾವು ಪ್ರತಿಯೊಂದು ಶಾಲೆಗೆ ನಿರ್ವಹಣಾ ವೆಚ್ಚವೆಂದು ಈ ವರ್ಷ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ಶಿಥಿಲಗೊಂಡಿರುವ ಶಾಲೆಗಳನ್ನು ನೆಲಸಮ ಮಾಡುವುದಕ್ಕೆ ಆದೇಶ ಮಾಡಿದ್ದೇವೆ. ಎಲ್ಲೆಲ್ಲಿ ರಿಪೇರಿ ಮಾಡಬೇಕು ಅದಕ್ಕೂ ಸಹ ಆದೇಶ ಮಾಡಿದ್ದೇವೆ. ಇದಕ್ಕೆ ಸತತವಾಗಿ ಪ್ರತಿವರ್ಷ 20 ಕೋಟಿ, 30 ಕೋಟಿ ಮತ್ತು 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿತ್ತು. ನಾನು ಈ ಇಲಾಖೆಯ ಸಚಿವನಾದ ನಂತರ 2014-2015ನೇ ಸಾಲಿನಿಂದ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ತಲಾ 40 ಲಕ್ಷ ರೂಪಾಯಿಗಳು ಎಂದು ಘೋಷಣೆ ಮಾಡಿದ್ದೇವೆ. ಆ ಎಲ್ಲಾ ಹಣವನ್ನು ನಾನು ಸಚಿವನಾದ ನಂತರ ಪೂರೈಸಿದ್ದೇನೆ. ಅದನ್ನು ಬಿಟ್ಟು 124 ಕೋಟಿ ರೂಪಾಯಿಗಳನ್ನು ಕಳೆದ ವರ್ಷ ಖರ್ಚು ಮಾಡಿದ್ದೇವೆ. ಇದಲ್ಲದೆ SCP/TSP ಹಣದ ಬಳಕೆ ಆಗಬೇಕು ಎನ್ನುವುದಕ್ಕೆ 57 ಮೀಸಲು ಕ್ಷೇತ್ರಗಳು ಎಲ್ಲಿವೆ ಅಲ್ಲಿಗೆ ಆ ಹಣವನ್ನು ಬಳಕೆ ಮಾಡುವುದಕ್ಕೆ ಆದೇಶ ಕೊಟ್ಟು ಹಣವನ್ನು ಬಿಡುಗಡೆ ಮಾಡಿರುತ್ತೇವೆ. ಅದಲ್ಲದೇ, ರಾಜ್ಯದ ಬಹುತೇಕ ಶಾಲೆಗಳನ್ನು ನಿರ್ವಹಣೆ ಮಾಡುವುದಕ್ಕೆ ಮತ್ತು ಕಟ್ಟಡ ಕಟ್ಟುವುದಕ್ಕೆ 124 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ವರ್ಷವು ಸಹ ಅದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಾವು ಅದರ ಬಳಕೆ ಯಾವ ರೀತಿ ಮಾಡಬೇಕು ಎಂಬುದನ್ನು ಅಧಿವೇಶನ ಮುಗಿದ ನಂತರ ಅದನ್ನು ಕ್ರಮಬದ್ಧವಾಗಿ ಮಾಡುತ್ತೇವೆ. ಇದಲ್ಲದೆ, ಇಲಾಖೆಗೆ ಎಲ್ಲಿಲ್ಲಿ ಹಣ ಕ್ರೂಢೀಕರಿಸುವುದಕ್ಕೆ ಸಾಧ್ಯವಿದೆ ಅದರಡಿಯಲ್ಲಿಯೂ ಸಹ ಹಾಗೂ 'ಸರ್ವ ಶಿಕ್ಷ ಅಭಿಯಾನ ಯೋಜನೆ' ಅಡಿಯಲ್ಲಿ ಕಳೆದ ವರ್ಷ 32 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ಹಣವನ್ನು ಯಾವ ಯಾವ ಶಾಲೆಗಳಿಗೆ ಮತ್ತು ಯಾವ ಯಾವ ಜಿಲ್ಲೆಗಳಿಗೆ ಕೊಟ್ಟಿದ್ದೇವೆ ಎಂಬ ಮಾಹಿತಿಯೂ ಸಹ ಸರ್ಕಾರ ನೀಡಿರುವ ಉತ್ತರ ಅನುಬಂಧ-1 ರಲ್ಲಿ ಇದೆ. ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅನುಬಂಧ-1ನ್ನು ನೋಡಿ ಏನಾದರೂ ಸಲಹೆಗಳು ಇದ್ದರೆ ಕೊಡಬಹುದು.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು 124 ಕೋಟಿ ರೂಪಾಯಿಗಳನ್ನು ಶಾಲೆಗಳ ರಿಪೇರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಇನ್ನೂ 70 ಸಾವಿರ ಶಾಲೆಗಳಿಗೆ ಇವತ್ತು ದುರಸ್ಥಿ ಕಾರ್ಯ ಆಗಬೇಕಾಗಿದೆ. ಆ ಶಾಲೆಗಳ ಚಾವಣಿ ಇರಬಹುದು, ಕೊಠಡಿಗಳು ಇರಬಹುದು ಅವು ಎಷ್ಟು ಅಪಾಯಕಾರಿ ಎಂಬುದನ್ನು ನೋಡ ಬೇಕಾಗುತ್ತದೆ ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಇರುವಂತಹದು 43 ಸಾವಿರ ಶಾಲೆಗಳು, 70 ಸಾವಿರ ಶಾಲೆಗಳು ಯಾವುವು ಶಿಥಿಲಗೊಂಡಿವೆ ಎಂಬುದು ನನಗೆ ಗೊತ್ತಿಲ್ಲ. ಈ ಸದನದಲ್ಲಿ ಮಾಹಿತಿ ಬಂದಿರುವುದನ್ನು ನಾನು ಹೇಳಿದ್ದೇನೆ. ಇವತ್ತು 36 ಸಾವಿರ ಶಾಲಾ ಕೊಠಡಿಗಳು ಶಿಥಿಲಗೊಂಡಿವೆ. ಅವುಗಳನ್ನು ನೆಲಸಮ ಮಾಡುವಂತಹ ಆದೇಶ ಮಾಡಿದ್ದೇವೆ. 31 ಸಾವಿರ ಶಾಲಾ ಕೊಠಡಿಗಳನ್ನು ಸಣ್ಣ ಪ್ರಮಾಣದಲ್ಲಿ ರಿಪೇರಿ ಮಾಡಿ ಅವುಗಳನ್ನು ಬಳಕೆ ಮಾಡಿಕೊಳ್ಳಬಹುದು ಎಂಬ ಮಾಹಿತಿ ಬಂದಿದೆ. ಅದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳುವಂತಹ ಸಂಪೂರ್ಣ ಮಾಹಿತಿಯನ್ನು ತರಿಸಿಕೊಂಡಿದ್ದೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಬೆಳಗಾಂ ಜಿಲ್ಲೆಯ ಶಾಲೆಯೊಂದರಲ್ಲಿ ಮಕ್ಕಳು ಸತ್ತು ಹೋಗಿರುವಂತಹ ಘಟನೆಯನ್ನು ಸಹ ಮಾನ್ಯ ಸಚಿವರು ವೀಕ್ಷಣೆ ಮಾಡಿ ನೋಡಿದ್ದಾರೆ. ಮಾನ್ಯ ಸಚಿವರಿಗೆ ಈ ಘಟನೆ ಗೊತ್ತಿದ್ದರೂ ಸಹ, ಇನ್ನೂ ಏಕೆ ಈ ಬಗ್ಗೆ ಎಚ್ಚರ ವಹಿಸುತ್ತಿಲ್ಲ?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ನಾವು ಖಂಡಿತವಾಗಿ ಎಚ್ಚರ ವಹಿಸಿಕೊಂಡೆ ಕೆಲಸ ಮಾಡುತ್ತಿದ್ದೇವೆ. ಇದನ್ನು ಖಂಡಿತವಾಗಿ ಮಾಡುತ್ತೇವೆ. ಆ ಕಾರಣಕ್ಕಾಗಿಯೇ ಮೊನ್ನೆ ಸದನದಲ್ಲಿಯೂ ಸಹ ಹೇಳಿದ್ದೇನೆ. ನಾನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಗೂ ಸಹ ಮನವಿ ಮಾಡಿಕೊಂಡಿದ್ದೇನೆ. ಶಾಸಕರ ಅನುದಾನದಲ್ಲಿ ಶೇಕಡಾ 30 ರಷ್ಟನ್ನು ಶಾಲೆಗಳ ದುರಸ್ಥಿ ಕಾರ್ಯಕ್ಕೆ ಬಳಕೆ ಮಾಡಿಕೊಳ್ಳಬೇಕು. ಏಕೆಂದರೆ, ದುರಸ್ಥಿ ಕಾರ್ಯಕ್ಕೆ ನಮಗೆ ಹಣವನ್ನು ಬಳಸುವುದಕ್ಕೆ ಸಾಧ್ಯವಿರಲಿಲ್ಲ. ಈಗ ಅದನ್ನು ಮಾಡುವುದಕ್ಕೆ ನಾವು ಮನವಿ ಮಾಡಿಕೊಂಡಿದ್ದೇವೆ. ಆ ದೃಷ್ಟಿಯಲ್ಲಿ ಸಾರ್ವಜನಿಕರು, ಶಾಸಕರು ಮತ್ತು ಸರ್ಕಾರದ ಅನುದಾನಗಳಲ್ಲಿ ಇನ್ನು ಮುಂದೆ ಶಾಲೆಯ ವಾತವರಣ ಯಾವ ರೀತಿ ಇರಬೇಕು ಎಂಬುದನ್ನು ಮಾಡುವುದಕ್ಕೆ ಮುಂದಾಗುತ್ತಿದ್ದೇವೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಈಗ 70 ಸಾವಿರ ಶಾಲಾ ಕೊಠಡಿಗಳ ಸಮಸ್ಯೆ ಇದೆ. ಅದಕ್ಕೆ ಮಾನ್ಯ ಸಚಿವರು ಹೇಳಿರುವಂತಹ ಹಣ ಸಾಕುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಮಾನ್ಯ ಸಚಿವರು ಅದನ್ನು ಹೇಳಿದರು ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ಶಾಲಾ ಕೊಠಡಿಗಳನ್ನು ನೆಲಸಮ ಮಾಡಿದ ಮೇಲೆ ಮಕ್ಕಳನ್ನು ಎಲ್ಲಿ ಕೂರಿಸಿ ಪಾಠ ಮಾಡಿಸುತ್ತಾರೆ ಎಂಬುದನ್ನು ಮಾನ್ಯ ಸಚಿವರು ದಯವಿಟ್ಟು ಸ್ಪಷ್ಟಪಡಿಸಬೇಕು?

(ಗೊಂದಲ)

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, 'ಸರ್ವ ಶಿಕ್ಷ ಅಭಿಯಾನ ಯೋಜನೆ' ಅಡಿಯಲ್ಲಿ 26 ಸಾವಿರ ಶಾಲಾ ಕೊಠಡಿಗಳನ್ನು ಕಟ್ಟಿದ್ದೇವೆ. ಹಳೆಯ ಕೊಠಡಿಗಳನ್ನು ನೆಲಸಮ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿರಲಿಲ್ಲ. ಹೊಸ ಕೊಠಡಿಗಳನ್ನು ಕಟ್ಟಿ ಬಳಕೆ ಮಾಡಿಕೊಳ್ಳುತ್ತಾರೆ. ಹಳೆ ಕಟ್ಟಡ ಹಾಗೂ ಶಿಥಿಲಗೊಂಡಿರುವ ಕಟ್ಟಡಗಳು ಹಾಗೆ ಉಳಿದುಕೊಂಡಿವೆ. ಹಾಗಾಗಿ, ಎಲ್ಲೆಲ್ಲಿ ಶಿಥಿಲಗೊಂಡಿರುವ ಕೊಠಡಿಗಳನ್ನು ತೆಗೆಯುವುದಕ್ಕೆ ಸಾಧ್ಯವಿದೆ, ಅಲ್ಲೆಲ್ಲ ತೆಗೆಯುತ್ತಿದ್ದೇವೆ. ಎಲ್ಲಿ ಪೂರ್ಣ ಪ್ರಮಾಣದಲ್ಲಿ ತೆಗೆದು ಹೊಸದಾಗಿ ಕಟ್ಟಬೇಕು ಅದಕ್ಕೂ ಸಹ ಆದ್ಯತೆ ಕೂಡುತ್ತಿದ್ದೇವೆ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ಇವತ್ತು ಅನೇಕ ಶಾಲೆಗಳಲ್ಲಿ ಸರಿಯಾಗಿ ಪೀಠೋಪಕರಣಗಳು ಇಲ್ಲ. ಮಕ್ಕಳು ನೆಲದ ಮೇಲೆ ಕೂಳಿತುಕೊಂಡು ಓದುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸರ್ಕಾರಿ ಶಾಲೆಗಳಿಗೆ ಮಕ್ಕಳು ಏಕೆ ಬರುವುದಿಲ್ಲವೆಂದರೆ, ನಮ್ಮ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕೊಡುತ್ತಿಲ್ಲ. ಹಾಗಾಗಿ, ಸರ್ಕಾರಿ ಶಾಲೆಗಳಿಗೆ ಮಕ್ಕಳು ಎಲ್ಲಿಂದ ಬರಬೇಕು ಹೇಳಿ?

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಮಾನ್ಯ ಸಚಿವರು ಮಾಡುತ್ತೇವೆಂದು ಹೇಳಿದ್ದಾರೆ. ಇದು ಪ್ರಶ್ನೋತ್ತರ ಅವಧಿ ಚರ್ಚೆ ಸಾಕು ಬಿಡಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಇದು ಶಾಲಾ ಕೊಠಡಿಗಳ ಸಮಸ್ಯೆಗಳ ಬಗ್ಗೆ ಇರುವಂತಹ ಬಹಳ ಪ್ರಮುಖವಾದ ವಿಷಯವಾಗಿದೆ. ಹಾಗಾಗಿ, ಇದನ್ನು ಚರ್ಚೆ ಮಾಡಲು Half an Hour discussion ಗೆ ಕಾಲಾವಕಾಶ ನೀಡಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಮೊನ್ನೆ ದಿವಸ ಮೂರುವರೆ ಗಂಟೆಗಳ ಕಾಲ ಚರ್ಚೆ ಆಗಿದೆ. ಈಗ ಸಾಕು ಬೇಡ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಹೇಳಿದ್ದಾರೆ. ಆ ರೀತಿ ಏನಾದರೂ ಇದ್ದರೆ ತಾವು ಮತ್ತೊಂದು ನೋಟಿಸ್ ಕೊಡಿ. ಮಾನ್ಯ ಸಚಿವರೆ, ದಯವಿಟ್ಟು ಕುಳಿತುಕೊಳ್ಳಿ. ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 2588**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಬಳ್ಳಾರಿ ಜಿಲ್ಲೆಯಡಿ ಬರುವಂತಹ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಬಗ್ಗೆ ಮತ್ತು ಅವುಗಳ ವ್ಯಾಪ್ತಿ ಬರುವಂತಹ ಪ್ರದೇಶದ ಬಗ್ಗೆ ಒಂದು ಪ್ರಶ್ನೆಯನ್ನು ಮಾಡಿದ್ದೆ. ಇನ್ನೊಂದು ಶೈಕ್ಷಣಿಕ ಜಿಲ್ಲೆಯ ಬಗ್ಗೆ ಎರಡು ಆಯಾಮಗಳಲ್ಲಿ ಪ್ರಶ್ನೆಗಳನ್ನು ಕೇಳಿದ್ದೆ. ಅದರಲ್ಲಿ ಮೊದಲನೆದಾಗಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮತ್ತು ಅದರ ವ್ಯಾಪ್ತಿ ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟಂತೆ, ಬಳ್ಳಾರಿ ಪೂರ್ವ ಅದರಡಿಯಲ್ಲಿ ಬಳ್ಳಾರಿ ಗ್ರಾಮಾಂತರ, ಬಳ್ಳಾರಿ ನಗರ ಮತ್ತು ಕಂಪ್ಲಿ. ಇನ್ನೊಂದು ಬಳ್ಳಾರಿ ತಾಲ್ಲೂಕಿನಲ್ಲಿ ಬರುವಂತಹ ಕುರುಗೋಡು ಇದು ಬಳ್ಳಾರಿ ನಗರದಿಂದ ಸುಮಾರು 28 ರಿಂದ 30 ಕಿಲೋಮೀಟರ್ ದೂರದಲ್ಲಿದೆ. ಬಳ್ಳಾರಿ ಗ್ರಾಮಾಂತರ ಮತ್ತು ಬಳ್ಳಾರಿ ನಗರ ಕ್ಷೇತ್ರವನ್ನು ಕುರುಗೋಡು ವ್ಯಾಪ್ತಿಗೆ ಸೇರ್ಪಡೆ ಮಾಡಿದ್ದಾರೆ. ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇವತ್ತು ನಗರದ ವ್ಯಾಪ್ತಿಯಲ್ಲಿ ಬರುವಂತಹ ಶಿಕ್ಷಣ ಸಂಸ್ಥೆಗಳು 28 ರಿಂದ 30 ಕಿಲೋಮೀಟರ್ ದೂರದಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹೋಗಿ ತಮ್ಮ ಯಾವುದೇ ಶೈಕ್ಷಣಿಕ ಚಟುವಟಿಕೆಗಳನ್ನು, ಇವತ್ತು ಪಾಲಕರು ಇರಬಹುದು, ವಿದ್ಯಾರ್ಥಿಗಳು ಇರಬಹುದು, ಶಿಕ್ಷಣ ಸಂಸ್ಥೆಗಳು ಇರಬಹುದು ಆ ನಗರ ಬಿಟ್ಟು ಅಲ್ಲಿಗೆ ಹೋಗಿ ಬರುವುದರಿಂದ ಸಾಕಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅದನ್ನು ಕುರುಗೋಡು ವ್ಯಾಪ್ತಿಯಿಂದ ತೆಗೆದು ನಗರದಲ್ಲಿ ಈಗಾಗಲೇ ಇರುವ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

B.E.O. ಕಛೇರಿಗೆ ಸೇರ್ಪಡೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಅಮರನಾಥ ಪಾಟೀಲ್ ರವರು ಕೇಳಿರುವಂತಹ ಪ್ರಶ್ನೆ ಹೊಸದಾದಂತಹ ಶೈಕ್ಷಣಿಕ ಜಿಲ್ಲೆಗಳನ್ನು ಸ್ಥಾಪಿಸುವಂತಹ ವಿಚಾರದಲ್ಲಿ. ಜೊತೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ. ಇವತ್ತು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಜಿಲ್ಲೆಗಳು ಮತ್ತು ತಾಲ್ಲೂಕುಗಳು, ತಾಲ್ಲೂಕು ವ್ಯಾಪ್ತಿಗಳು ಬದಲಾವಣೆ ಆಗುತ್ತಿರುವಂತಹದ್ದನ್ನು ನಾವು ಗಮನಿಸಿದ್ದೇವೆ. ಇದರ ಜೊತೆಗೆ ನಮ್ಮಲ್ಲಿ 204 B.E.O ವ್ಯಾಪ್ತಿಗಳು ಇವೆ. ಜೊತೆಗೆ 34 ಶೈಕ್ಷಣಿಕ ಜಿಲ್ಲೆಗಳನ್ನು ನಾವು ಮಾಡಿಕೊಂಡಿದ್ದೇವೆ. ಇದು ಮಾಡಿಕೊಂಡಿರುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರ ಕಳಕಳಿ ಇರುವಂತಹದ್ದು ಬಳ್ಳಾರಿ ಪೂರ್ವದಲ್ಲಿ ಬರುವಂತಹ ಅನೇಕ ವ್ಯಾಪ್ತಿಗಳ ಜೊತೆಗೆ ಬಳ್ಳಾರಿ ನಗರಕ್ಕೆ ಸೇರ್ಪಡೆ ಆಗಬೇಕು ಎನ್ನುವಂತಹದ್ದು. ಅದನ್ನು ತಾತ್ಕಾಲಿಕವಾಗಿ ಮಾಡುವುದರ ಜೊತೆಗೆ, ಇವತ್ತು ಕ್ಷೇತ್ರಗಳು ವಿಂಗಡನೆ ಆದಂತಹ ಸಂದರ್ಭದಲ್ಲಿ ನಗರ ಇರುವಂತಹದ್ದು ಗ್ರಾಮೀಣ, ಗ್ರಾಮೀಣ ಭಾಗ ನಗರಕ್ಕೆ ಸೇರ್ಪಡೆ ಆಗಿರುವಂತಹದ್ದನ್ನು ನಾವು ನೋಡಿದ್ದೇವೆ. ಈ ವ್ಯಾಪ್ತಿಗೆ ಸಂಬಂಧಿಸಿದಂತೆ ನಮಗೆ ಅಪರ ಆಯುಕ್ತರು ಧಾರವಾಡ ಅವರು ವರದಿ ಮಾಡಿದ್ದಾರೆ. ಆ ವರದಿಯಲ್ಲಿ ಕೆಲವೊಂದು ಹೆಚ್ಚಿನ ಮಾಹಿತಿಯನ್ನು ಕೂಡ ನಾವು ಕೇಳಿ ಕಳುಹಿಸಿದ್ದೇವೆ. ಅದು ಕೂಡ ನಮಗೆ ಬಂದಿದೆ. ದಿನಾಂಕ 25.01.2017 ರಂದು ಅವರ ವ್ಯವಹಾರ ನಡೆದಿದೆ. ದಿನಾಂಕ 25.01.2017 ರಂದು ಅಪರ ಆಯುಕ್ತರಿಂದ ನಮಗೆ ಪ್ರಸ್ತಾವನೆ ಬಂದಿದೆ. ಆ ಪ್ರಸ್ತಾವನೆ ಅನುಗುಣವಾಗಿ ನಮ್ಮಲ್ಲಿ ಆರ್ಥಿಕವಾದಂತಹ ಸಮಸ್ಯೆ ಜೊತೆಗೆ ನಾವು ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬೇಕಾದರೂ ನಮ್ಮ ಇಲಾಖೆಯಲ್ಲಿ ಇರುವಂತಹ ಕೆಲವೊಂದು....

(ಗೊಂದಲ)

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಇನ್ನು ಆ ವಿಷಯಕ್ಕೆ ಬಂದಿಲ್ಲ...

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ನಾನು ಇಲ್ಲಿ ಎಲ್ಲವನ್ನು ಸಂಪೂರ್ಣವಾಗಿ ಹೇಳುತ್ತಿದ್ದೇನೆ. ನಗರ ಪ್ರದೇಶ ವ್ಯಾಪ್ತಿಯ ಶಾಲೆಗಳು ಮತ್ತು ಅಲ್ಲಿ ಬರುವಂತಹ ಶೈಕ್ಷಣಿಕ ಸಂಸ್ಥೆಗಳನ್ನು ಗ್ರಾಮೀಣ ವ್ಯಾಪ್ತಿಗೆ ಕೊಟ್ಟಿರುವುದರಿಂದ, 20 ರಿಂದ 25 ಕೀಲೋಮೀಟರ್ ದೂರವಾಗುತ್ತದೆ ಎನ್ನುವುದನ್ನು ಪರಿಶೀಲಿಸಿ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಮಾಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ದಯವಿಟ್ಟು ಆದೇಶ ಮಾಡಬೇಕು.

**(647) 09.06.2017 ಸಿಎಸ್/ಆರ್‌ಎನ್ 12.00**

**ಶ್ರೀ ಅಮರನಾಥ ಪಾಟೀಲ್(ಮುಂದು):-**

ಬಳ್ಳಾರಿ ಬಹಳ ವಿಶಾಲವಾದ ಜಿಲ್ಲೆ. ಬಳ್ಳಾರಿಯ ಪಶ್ಚಿಮಕ್ಕೆ ಬರತಕ್ಕ ಹಗರಿ ಬೊಮ್ಮನಹಳ್ಳಿ, ಹೂವಿನ ಹಡಗಲಿ, ಹೊಸಪೇಟೆ ಮತ್ತು ಕೂಡ್ಲಿಗಿ ತಾಲ್ಲೂಕುಗಳಿಂದ ಬಳ್ಳಾರಿಯ ಕೇಂದ್ರಸ್ಥಾನಕ್ಕೆ ಹೋಗಿ ಬರುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಸಚಿವರು ಉತ್ತರದಲ್ಲಿ ಹೇಳಿರುವಂತೆ ಬಳ್ಳಾರಿಯ ಪಶ್ಚಿಮಕ್ಕೆ ಒಂದು ಶೈಕ್ಷಣಿಕ ಜಿಲ್ಲೆ ಮಾಡುವುದಕ್ಕೆ ನಮ್ಮ ಗುಲ್ಬರ್ಗಾದ ಕಮಿಷನರ್ ಕಚೇರಿಯಿಂದ ಪತ್ರ ವ್ಯವಹಾರ ನಡೆದಿದ್ದು ಆರ್ಥಿಕ ಇಲಾಖೆಯವರು ಈ ಬಗ್ಗೆ ಕೆಲವು ಕ್ಲಾರಿಫಿಕೇಷನ್ ಕೇಳಿದ್ದಕ್ಕೆ ಕಲುಬುರ್ಗಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಕ್ಲಾರಿಫೈ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಬಳ್ಳಾರಿಯ ಪಶ್ಚಿಮಕ್ಕೆ ಒಂದು ಶೈಕ್ಷಣಿಕ ಜಿಲ್ಲೆಯನ್ನು ಹೂವಿನ ಹಡಗಲಿ ಅಥವಾ ಹೊಸಪೇಟೆಯಲ್ಲಿ ಮಾಡಬೇಕು. ಸಚಿವರು ಈಗಾಗಲೇ ಹೇಳಿರುವಂತೆ ಈ ಬಗ್ಗೆ ಪತ್ರ ಬರೆದು 6 ತಿಂಗಳಾಗಿದೆ. ದಯಮಾಡಿ ಈ ಭಾಗದಲ್ಲಿ ಶೈಕ್ಷಣಿಕ ಜಿಲ್ಲೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಗಳೇ, ಇವತ್ತು ನಮ್ಮ ಬೆಳಗಾವಿ ಜಿಲ್ಲೆಯೂ 18 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವಂತಹ ಒಂದು ದೊಡ್ಡ ಜಿಲ್ಲೆ. ಆದ್ದರಿಂದ ಅದನ್ನು ಎರಡು ಜಿಲ್ಲೆಗಳನ್ನಾಗಿ ವಿಭಾಗ ಮಾಡಲಾಗಿದೆ. ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ 11 ತಾಲ್ಲೂಕುಗಳು ಬರುತ್ತವೆ. ಅದೇ ರೀತಿ ಮೈಸೂರು ಜಿಲ್ಲೆಯಲ್ಲಿಯೂ ಸಹ 11 ತಾಲ್ಲೂಕುಗಳು ಬರುತ್ತವೆ. ಎಷ್ಟು ತಾಲ್ಲೂಕುಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಉಪನಿರ್ದೇಶಕರ ಕಚೇರಿಗಳನ್ನು ಮಾಡಬೇಕು ಮತ್ತು ಯಾವುದನ್ನು ಶೈಕ್ಷಣಿಕ ಜಿಲ್ಲೆಯನ್ನಾಗಿ ಮಾಡಬೇಕೆನ್ನುವುದನ್ನು ನಾವು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಹೊಸ ಹುದ್ದೆಗಳನ್ನು ಸೃಷ್ಟಿ ಮಾಡಿಕೊಂಡು ಅವುಗಳನ್ನೆಲ್ಲ ತುಂಬಿದ ಮೇಲೆಯೇ ಇದನ್ನೆಲ್ಲ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

**ಶ್ರೀ ಅಮರನಾಥ ಪಾಟೀಲ್:-** ಹಗರಿ ಬೊಮ್ಮನಹಳ್ಳಿ, ಹೂವಿನ ಹಡಗಲಿ, ಹೊಸಪೇಟೆ ಮತ್ತು ಕೂಡ್ಲಿಗಿ ತಾಲ್ಲೂಕುಗಳಿಂದ ಬಳ್ಳಾರಿಯ ಕೇಂದ್ರಸ್ಥಾನಕ್ಕೆ ಹೋಗಿ ಬರುವುದಕ್ಕೆ 180-200 ಕಿ.ಮೀ ಆಗುತ್ತದೆ.

**ಶ್ರೀ ತನ್ವೀರ್ ಸೇಠ್:-** ನಾನು ಅದನ್ನೇ ಹೇಳುತ್ತಿರುವುದು, ಇಲಾಖೆಯ ಹಂತದಲ್ಲಿ ಅದು ಪರಿಶೀಲನೆಯಲ್ಲಿದೆ, ಸರ್ಕಾರ ಖಂಡಿತ ಇದಕ್ಕೆ ಸ್ಪಂದಿಸುವ ಕೆಲಸ ಮಾಡುತ್ತದೆ.

**ಶ್ರೀ ಅಮರನಾಥ ಪಾಟೀಲ್:-** ನನಗೆ ಆ ವರದಿಯ ಕಾಪಿಯನ್ನಾದರೂ ಸಚಿವರು ನೀಡಬೇಕು.

**ಶ್ರೀ ತನ್ವೀರ್ ಸೇಠ್:** ಕಳುಹಿಸಿ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 2462**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ ಯವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಶರವಣರವರು ಕೇಳಿದ ಪ್ರಶ್ನೆಯ ಮುಂದಿನ ಭಾಗ ಇದು. ಈ ವಿಚಾರ ಮೂರುವರೆ ಗಂಟೆಗಳ ಕಾಲ ನಿಯಮ 330ರ ಅಡಿಯಲ್ಲಿ ಚರ್ಚೆ ಮಾಡಲಾಗಿದೆ ಎಂದು ತಾವು ಹೇಳಿದಿರಿ. ಮಾನ್ಯ ಸದಸ್ಯರಾದ ಶರವಣರವರ ಪ್ರಶ್ನೆಗೆ ಉತ್ತರ ನೀಡುತ್ತಾ, ರಾಜ್ಯದಲ್ಲಿ ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳ ಮಾಹಿತಿ ನೀಡುತ್ತಾ, ಕಿರಿಯ ಪ್ರಾಥಮಿಕ ಶಾಲೆ 56, ಹಿರಿಯ ಪ್ರಾಥಮಿಕ ಶಾಲೆ 158 ಮತ್ತು ಪ್ರೌಢ ಶಾಲೆ 39 ಎನ್ನುವ ಉತ್ತರ ನೀಡಿದ್ದಾರೆ. ಆದರೆ ನನಗೆ ಉತ್ತರ ನೀಡುವ ಸಂದರ್ಭದಲ್ಲಿ ಪ್ರಾಥಮಿಕ ಶಾಲೆ 87, ಪ್ರೌಢ ಶಾಲೆ 2 ಎನ್ನುವ ಉತ್ತರವನ್ನು ನೀಡಿದ್ದಾರೆ. ಇದು ಒಂದೇ ಇಲಾಖೆ ಒಂದೇ ದಿವಸ ಒಂದೇ ವಿಷಯವುಳ್ಳ ಎರಡು ಪ್ರಶ್ನೆಗಳಿಗೆ ಒಬ್ಬರೆ ಸಚಿವರು ನೀಡುತ್ತಿರುವ ಉತ್ತರ. ಇದರಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎನ್ನುವುದನ್ನು ಮಾನ್ಯ ಸಚಿವರೇ ಹೇಳಬೇಕು. ಇನ್ನು ಎರಡನೆಯದು, ನನಗಿರುವ ಮಾಹಿತಿ ಪ್ರಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ದಿಷ್ಟವಾಗಿ ಸುನಿಲ್ ಸುಬ್ರಮಣಿರವರು ಒಂದು ಶಾಲೆಯ ವಿವರ ಕೇಳಿದ್ದರು, ಆ ಶಾಲೆಯಲ್ಲಿ 283 ಮಕ್ಕಳಿದ್ದಾರೆ. ನಮ್ಮ ಸನ್ಮಾನ್ಯ ಶಾಸಕರು ಅಲ್ಲಿಗೆ ಭೇಟಿ ನೀಡಿದ ದಿವಸ 270 ಮಕ್ಕಳು ಆ ಶಾಲೆಯಲ್ಲಿದ್ದರು. ಆದರೆ ಸಚಿವರು ನೀಡಿರುವ ಉತ್ತರದ ಪ್ರಕಾರ ಅಲ್ಲಿ 181 ಮಕ್ಕಳಿದ್ದಾರೆ. ಸಚಿವರು ಕೂಡ ಶಾಲೆಯ ಶಿಥಿಲಾವಸ್ಥೆ ಮತ್ತು ಬೀಳುವ ಸ್ಥಿತಿಯ ಬಗ್ಗೆ ಉಲ್ಲೇಖಿಸಿದ್ದಾರೆ. ಉಲ್ಲೇಖಿಸಿರುವ ಅಯ್ಯಂಗೇರಿಯ ಶಾಲೆಯ ಹೆಸರು ಸಹ ಅದರಲ್ಲಿದೆ. ಆ ಶಾಲೆಯ ಮಾಡು ಬಿದ್ದು ಹೋಗುತ್ತಿದೆ. ಈಗ ಮಳೆಗಾಲ ಬರುತ್ತಿರುವ ಕಾರಣ ಆ ಊರಿನವರು ಮರದ ಕೊಂಬೆಯ ಸಪೋರ್ಟ್ ನೀಡಿ ಮಾಡನ್ನು ಬೀಳದಂತೆ ನಿಲ್ಲಿಸಿದ್ದಾರೆ. ಸಚಿವರು ಹೇಳಿದ ರೀತ್ಯಾ ಅಲ್ಲಿ ಯಾವುದೇ ಬದಲಿ ವ್ಯವಸ್ಥೆಗಳು ಸಹ ಆಗಿಲ್ಲ. ನಾನು ಸಚಿವರ ಗಮನಕ್ಕೆ ತರಬಯಸುವುದೇನೆಂದರೆ DISE (District Information System for Education) ಮಾಹಿತಿಯಂತೆ ನೀಡುತ್ತಿರುವ ಮಾಹಿತಿಗಳು ಸರಿಯಾಗಿಲ್ಲ. ಏಕೆಂದರೆ ಒಂದೇ ದಿವಸ ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ನೀಡಿರುವ ಉತ್ತರಗಳು ಒಂದೇ ರೀತಿಯಿಲ್ಲ. ಮೊದಲನೆಯದಾಗಿ ಸದನಕ್ಕೆ ಏಕೆ ತಪ್ಪು ಉತ್ತರ ನೀಡುತ್ತಿದ್ದಾರೆನ್ನುವ ಬಗ್ಗೆ ನನಗೆ ಸಚಿವರಿಂದ ಸ್ಪಷ್ಟೀಕರಣ ಬೇಕು. ಎರಡನೆಯದಾಗಿ 50 ಕೋಟಿ ಮತ್ತು 124 ಕೋಟಿ ರೂಪಾಯಿಗಳಲ್ಲಿ ರಾಜ್ಯದಲ್ಲಿರುವ 40 ರಿಂದ 50 ವರ್ಷಗಳ ಹಳೆಯ ಕಟ್ಟಡಗಳೇನಿವೆ, ಅವುಗಳನ್ನು ಇನ್ನು 25 ವರ್ಷಗಳಾದರೂ ಸಹ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಮೊನ್ನೆಯ ದಿವಸ ಸದನದಲ್ಲಿ ಮಾನ್ಯ ಸಚಿವರು ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸುವುದಕ್ಕೆ ಏನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಎನ್ನುವುದನ್ನು ಮೂರುವರೆ ಗಂಟೆಗಳ ಕಾಲ ತಮ್ಮ ಉತ್ತರದಲ್ಲಿ ಹೇಳಿದರು. ಕನ್ನಡ ಶಾಲೆಗಳು ಈ ಸ್ಥಿತಿಯಲ್ಲಿದ್ದರೆ ಯಾವ ರೀತಿ ಕನ್ನಡ ಮಾಧ್ಯಮ ಶಾಲೆಗಳಿಗೆ ಮಕ್ಕಳು ಬರುತ್ತಾರೆ? ಇದಕ್ಕಾಗಿ ಏನಾದರೂ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆಯೇ? ಈ ಕಟ್ಟಡಗಳನ್ನು ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಮತ್ತು ಬೀಳುತ್ತಿರುವ ಕಟ್ಟಡಗಳೆಂದು ಎರಡು ರೀತಿ ವರ್ಗ ಮಾಡಲಾಯಿತು. ಇದು ಎರಡು ಪ್ರತ್ಯೇಕವಾಗಿ ಎಷ್ಟಿವೆ? ಅಥವಾ ಈ ಎರಡು ಒಂದೇ ಆದರೆ ಅದನ್ನು ಹೇಳಿಬಿಡಿ.

**ಶ್ರೀ ತನ್ವೀರ್ ಸೇಠ್:-** ಇಲ್ಲಿ ಪದಗಳ ಬಳಕೆಯಲ್ಲಿ ವ್ಯತ್ಯಾಸವಾಗಿದೆ. ಇಲ್ಲಿ ಶಿಥಿಲಾವಸ್ಥೆ ಮತ್ತು ಬೀಳುವಂತಹ ಸ್ಥಿತಿಯಲ್ಲಿರುವ ಎರಡೂ ಸೇರಿ ಇಷ್ಟಿವೆ ಎಂದು ಉತ್ತರ ನೀಡಿದ್ದೇನೆ. ಇದು ಬೇರೆ ಬೇರೆ ಅಲ್ಲ, ಇಲ್ಲಿ ಏನು ಪದ ಬಳಕೆ ಆಗಿದೆ, ಅದು ಬೀಳುವಂತಹವು ಮತ್ತು ಶಿಥಿಲಾವಸ್ಥೆ ಎರಡನ್ನೂ ಸೇರಿಸಿ ಹೇಳಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, ಈ ಸಂದರ್ಭದಲ್ಲಿ ಸದನದಲ್ಲಿ ಸಭಾನಾಯಕರಿಂದ ಹಿಡಿದು ಎಲ್ಲರೂ ಕ್ಯಾಬಿನೆಟ್‌ನಲ್ಲಿ ಪವರ್‌ಫುಲ್ ಇರುವಂತಹ ಸಚಿವರುಗಳು ಇದ್ದಾರೆ. ಅವರೆಲ್ಲರೂ ದಯವಿಟ್ಟು ಈ ವಿಚಾರವನ್ನು ಗಮನಿಸಬೇಕು. ನಮ್ಮ ಕ್ಷೇತ್ರಗಳಲ್ಲಿ ಅದು ಗ್ರಾಮಾಂತರ ಪ್ರದೇಶ ಇರಬಹದು ಅಥವಾ ನಗರ ಪ್ರದೇಶ ಇರಬಹುದು ಒಂದು ಶಾಲೆಯನ್ನು ರಿಪೇರಿ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆಯೇ? ನಾವುಗಳು ಹಣ ಖರ್ಚು ಮಾಡುವ ಹಾಗೆ ಇಲ್ಲವೇ ಇಲ್ಲ. ನಗರಪ್ರದೇಶಗಳಲ್ಲಿ ಕಾರ್ಪೊರೇಷನ್ ಅವರನ್ನು ಕೇಳಿದರೆ ಈ ಶಾಲೆಗಳ ದುರಸ್ಥಿಗೆ ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ. ಜಿಲ್ಲಾಪಂಚಾಯಿತಿಗಳನ್ನು ಕೇಳಿದರೆ ಅವರು ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ. ಮಂತ್ರಿಗಳು ಆಸಕ್ತಿಯಿಂದ ಇಲಾಖೆಗಳ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಹಣ ತರುವುದಕ್ಕೆ ಅವರಿಂದ ಆಗುತ್ತಾ ಇಲ್ಲ. ಈ ವಿಚಾರವನ್ನು ವಿಶೇಷವಾಗಿ ಗಮನಿಸಿ ಸಚಿವಸಂಪುಟದ ಮುಂದಿಟ್ಟು ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಒಂದಿಷ್ಟು ಹಣ, 50–100 ಕೋಟಿ ಅಂದರೆ ಸರ್ಕಾರದ ಆರ್ಥಿಕ ಪರಿಸ್ಥಿತಿಗೆ ತಕ್ಕ ಹಾಗೆ ಹಣವನ್ನು ಫಿಕ್ಸ್ ಮಾಡಿದರೆ ನಿಜಕ್ಕೂ ಕೂಡ ಆ ಮಕ್ಕಳನ್ನು ಬದುಕಿಸಬಹುದು. ನಾನು ಈ ವಿಷಯದಲ್ಲಿ ವಿವರಗಳಿಗೆ ಹೋಗುವುದಿಲ್ಲ. ಯಾವ ಊರಿಗೆ ಹೋದರೂ ಸಹ ಶಿಥಿಲಗೊಂಡಿರುವ ಮತ್ತು ಬೀಳುತ್ತಿರುವ ಶಾಲೆಗಳನ್ನು ಅಲ್ಲಿನವರು ತೋರಿಸುತ್ತಾರೆ. ಆದರೆ ಅದನ್ನೆಲ್ಲ ದುರಸ್ಥಿ ಮಾಡಿಸುವುದಕ್ಕೆ ನಮಗೆ ಅಧಿಕಾರವಿಲ್ಲ. ದೊಡ್ಡದಾಗಿ ನಾವು ಚುನಾಯಿತ ಪ್ರತಿನಿಧಿಗಳೆಂದು ಅಲ್ಲಿಗೆ ಹೋಗುತ್ತೇವೆ. ಮಂತ್ರಿಗಳಿಗೂ ಸಹ ಹಣ ಬಿಡುಗಡೆ ಮಾಡುವುದಕ್ಕೆ ಅಧಿಕಾರವಿಲ್ಲ. ಏಕೆಂದರೆ ಅಷ್ಟು ಫಂಡ್ಸ್ ಮಂತ್ರಿಗಳ ಬಳಿ ಇದೆಯೇ ಎನ್ನುವುದನ್ನು ಪ್ರಾಮಾಣಿಕವಾಗಿ ಹೇಳಿ. ವಿಧಾನಸಭಾ ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರ ಹಣವನ್ನು ಕೂಡ ಖರ್ಚು ಮಾಡುವುದಕ್ಕೆ ಅವಕಾಶವಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ, ನನ್ನ ಒಂದೇ ಒಂದು ಪ್ರಶ್ನೆ ಏನೆಂದರೆ ಈಗ ಶಾಲಾ ಶೈಕ್ಷಣಿಕ ವರ್ಷ ಪ್ರಾರಂಭವಾಗಿದೆ. ಸರ್ಕಾರ ನೀಡಿರುವ ಅಂಕಿಸಂಖ್ಯೆಗಳ ಪ್ರಕಾರ ಕೊಡಗು ಜಿಲ್ಲೆಯಲ್ಲಿ 22 ಶಾಲೆಗಳು ಶಿಥಿಲಾವಸ್ಥೆಯಲ್ಲಿವೆ. ಮಾನ್ಯ ಶಿಕ್ಷಣ ಸಚಿವರು ಈ ಸದನದಲ್ಲಿ ಮುಂದಿನ ಒಂದು ವಾರದಲ್ಲಿ ಅಲ್ಲಿರತಕ್ಕ ಮಕ್ಕಳಿಗೆ ಬದಲಿ ವ್ಯವಸ್ಥೆಯನ್ನು ಮಾಡುವರೆ ಎನ್ನುವ ಬಗ್ಗೆ ಸ್ಪಷ್ಟ ಉತ್ತರ ನೀಡಬೇಕು. ಏಕೆಂದರೆ ಆ ಊರಿನವರು ಒಂದು ಊರುಗಂಬವನ್ನು ನಿಲ್ಲಿಸಿ, ಆ ಶಾಲೆ ಬೀಳದಂತೆ ನೋಡಿಕೊಂಡಿದ್ದಾರೆ. ಸಚಿವರು ತಮ್ಮ ಉತ್ತರದಲ್ಲಿ ಶಿಥಿಲಗೊಂಡ ಅಪಾಯಕಾರಿ ಕಟ್ಟಡದಲ್ಲಿದ್ದ ವಿದ್ಯಾರ್ಥಿಗಳನ್ನು ಸುಸ್ಥಿತಿಯಲ್ಲಿರುವ ಕೊಠಡಿಗಳಲ್ಲಿ ಸ್ಥಳಾಂತರ ಮಾಡುವಂತೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಂಧಿಸಿದ ಮುಖ್ಯ ಶಿಕ್ಷಕರಿಗೆ ಸೂಚಿಸಿದ್ದು ಬದಲಿ ವ್ಯವಸ್ಥೆಗಾಗಿ ಪ್ರಸ್ತುತ ಲಭ್ಯವಿರುವ ಕೊಠಡಿಗಳಲ್ಲಿ ತರಗತಿಗಳನ್ನು ತಾತ್ಕಾಲಿಕವಾಗಿ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ, ಆದರೆ ಈ ವ್ಯವಸ್ಥೆ ಅಲ್ಲಿ ಆಗಿಲ್ಲ. ಸರ್ಕಾರವೇ ಗುರುತಿಸಿರುವ 22 ಶಾಲೆಗಳಲ್ಲಿ ಒಂದು ವಾರದಲ್ಲಿ ಸಮರೋಪಾದಿಯಲ್ಲಿ ಬದಲಿ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಇದನ್ನು ಮಾಡುತ್ತಾರೆಯೇ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಗಳೇ, ಮೊದಲನೆಯದಾಗಿ ಮಾನ್ಯ ಸದಸ್ಯರು ಶಿಥಿಲಾವಸ್ಥೆ ಹಾಗೂ ಬೀಳುತ್ತಿರುವ ಶಾಲೆಗಳನ್ನು ಸರ್ಕಾರ ಗುರುತಿಸಿದೆಯೇ ಎಂದು ಕೇಳಿದ್ದಾರೆ. ಇಲಾಖೆ ಏನು ಗುರುತಿಸಿದೆ ಮತ್ತು DISE ನವರು ಏನು ಮಾಹಿತಿಯನ್ನು ನೀಡಿದ್ದಾರೆ ಆ ಮಾಹಿತಿಯನ್ನು ನಾನು ಸದಸ್ಯರುಗಳಿಗೆ ನೀಡಿದ್ದೇನೆ. ಕಳೆದ 11 ವರ್ಷಗಳಿಂದಲೂ ನಾವು DISE ಅನ್ನು ನಂಬಿಕೊಂಡು ಕೆಲಸವನ್ನು ಮಾಡುತ್ತಿದ್ದೇವೆ ಅದರಿಂದ ಸರಿಯಾದ ಮಾಹಿತಿ ನಮಗೆ ಬಾರದ ಕಾರಣ ಶಿಕ್ಷಣ ಕಿರಣ ಎನ್ನುವ ಒಂದು ಮಾಹಿತಿ ತಂತ್ರಜ್ಞಾನವನ್ನು ತರಲಾಗಿದೆ, ಈ ಶಿಕ್ಷಣ ಕಿರಣದ ಅಡಿಯಲ್ಲಿ ಮಕ್ಕಳ ದಾಖಲಾತಿಗಳನ್ನು ಹಾಜರಾತಿಗಳನ್ನು ಕೂಡ ನಾವು ನೋಡಬಹುದಾಗಿದೆ. ಇದರ ಜೊತೆಗೆ ಮಾನ್ಯ ಸದಸ್ಯರು ಹೇಳಿರುವಂತೆ 21 ಶಾಲೆಗಳು ಇವತ್ತು ಶಿಥಿಲಾವಸ್ಥೆಯಲ್ಲಿವೆ. ಕಳೆದ ವರ್ಷ 1 ಕೋಟಿ 20 ಲಕ್ಷ ರೂಪಾಯಿಗಳನ್ನು ಬಿಡುಗಡೆಗೊಳಿಸಿ ಶಾಲೆಗಳ ದುರಸ್ಥಿಯನ್ನು ಮಾಡಿಸಿದ್ದೇವೆ. ಈ ವರ್ಷ ಜಿಲ್ಲಾಪಂಚಾಯಿತಿಯ ಮುಖ್ಯಕಾರ್ಯನಿರ್ವಹಣಾ ಅಧಿಕಾರಿಗಳು ಮತ್ತು ಇಂಜಿನಿಯರಿಂಗ್ ವಿಭಾಗದಿಂದ ಏನು ಮಾಹಿತಿ ಪಡೆಯಲಾಗಿದೆ. ಕಳೆದ ವರ್ಷ ಈ ವಿಚಾರವಾಗಿ ನಾನು ಸದನದಲ್ಲಿ ಚರ್ಚೆ ಆಗಿ ಕೊಡಗು ಜಿಲ್ಲೆಯಲ್ಲಿ ಲೋಕೋಪಯೋಗಿ ಜಿಲ್ಲಾಪಂಚಾಯಿತಿಗಳಿಂದ ಒಂದು ಸಮೀಕ್ಷೆಯನ್ನು ನಡೆಸಿ ಪಡೆದ ವರದಿಯ ಪ್ರಕಾರ ಅವರು 1 ಕೋಟಿ 30 ಲಕ್ಷ ರೂಪಾಯಿಗಳ ಬೇಡಿಕೆ ನಮ್ಮ ಮುಂದಿದೆ. ಈಗ 22 ಕೊಠಡಿಗಳು ಶಿಥಿಲಾವಸ್ಥೆಯಲ್ಲಿರುವುದರಿಂದ ಅವುಗಳನ್ನು ಪಕ್ಕದಲ್ಲಿರುವ ಕೊಠಡಿಗಳಿಗೆ ಸ್ಥಳಾಂತರಿಸಿ ಶಿಕ್ಷಣ ಕೊಡುವಂತೆ ಈಗಾಗಲೇ ಆದೇಶಿಸಲಾಗಿದೆ. ಈ ಮಧ್ಯದಲ್ಲಿ ಕೊಡಗಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಆದೇಶ ನೀಡಿ ಇಂಜಿನಿಯರಿಂಗ್ ವಿಭಾಗದವರು ಅಲ್ಲಿ ಏನೇನು ದುರಸ್ಥಿ ಆಗಬೇಕೆನ್ನುವುದರ ವರದಿ ಕೇಳಿದ್ದೇನೆ. ಏಕೆಂದರೆ ಈಗ ದುರಸ್ಥಿಗಾಗಿ ಹಣ ಬಿಡುಗಡೆ ಮಾಡುವ ಸಂದರ್ಭದಲ್ಲಿ ಹೊಸ ಕೊಠಡಿಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ದುರಸ್ಥಿ ಬಗ್ಗೆ ಕೂಡ ವರದಿ ಕೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(648):12.10:09-06-2017:ಎಂವಿ:ಆರ್‌ಎಸ್**

**ಶ್ರೀ ತನ್ವೀರ್ ಸೇಠ್ (ಮುಂದು):–**

ಇವತ್ತಿನ ದಿವಸ ಇಡೀ ರಾಜ್ಯ ವ್ಯಾಪ್ತಿಯಲ್ಲಿರುವಂತಹ ಈ ಪರಿಸ್ಥಿತಿಗೆ, ಈಗ ಮಾನ್ಯ ಪ್ರತಿಪಕ್ಷದ ನಾಯಕರು ಮಾತನಾಡಿದರು. ನಾವು ಶಿಕ್ಷಣ ಇಲಾಖೆಯಲ್ಲಿ ಶಿಕ್ಷಣವನ್ನು ಬೋಧನೆ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಏನು ನಾವು ಕೇಂದ್ರ ಸರ್ಕಾರದಿಂದ ಸರ್ವಶಿಕ್ಷ ಅಭಿಯಾನ ಮತ್ತು RMSA (Rashtriya Madhyamik Shiksha Abhiyan) ನಲ್ಲಿ ಅನುದಾನಗಳಿಗೆ ಬೇಡಿಕೆಗಳನ್ನು ಇಟ್ಟಿದ್ದೇವೆ. ನಾವು ಸಮರ್ಪಕವಾಗಿ ಕೇಳಿದಷ್ಟು ಅಥವಾ ಅವರು ನಮಗೆ ಕೊಡುತ್ತಿದ್ದೇವೆಂದು ಹೇಳುತ್ತಿರುವಷ್ಟು ನಮಗೆ ಸಿಗುತ್ತಿಲ್ಲ. ಅದಕ್ಕೆ ನಾನಾ ರೀತಿಯ ಕಾರಣಗಳಿವೆ, ಈಗ ಮಾನ್ಯ ಸದಸ್ಯರಾದಂತಹ ಶ್ರೀ ಟಿ.ಎ.ಶರವಣರವರು ನಮ್ಮ ಶಾಸಕರ ಮತ್ತು ವಿಧಾನ ಪರಿಷತ್ತಿನ ಸದಸ್ಯರ ಅನುದಾನದಿಂದಲೂ ನಾವು ಅವುಗಳನ್ನು ರಿಪೇರಿ ಮಾಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಆ ಕಾರಣಕ್ಕಾಗಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಗೆ ನಾನು ಈಗಾಗಲೇ ಮನದಟ್ಟು ಮಾಡಿದ್ದೇನೆ. ರಿಪೇರಿ ಮಾಡಿಸುವಂಥದ್ದು, ಅದರಲ್ಲೂ ಸರ್ಕಾರಿ ಶಾಲೆಗಳಿಗೆ ಆ ಹಣವನ್ನು ವಿನಿಯೋಗ ಮಾಡಿಕೊಳ್ಳುವಂತಹ ಅವಕಾಶ ಮಾಡಿಕೊಡುವಂಥದ್ದಕ್ಕೆ ಒಂದು ಸುತ್ತೋಲೆಯನ್ನು ಹೊರಡಿಸಿ ಎಂದು ಕೇಳಿದ್ದೇನೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಇರುವಂತಹ ಯಾರ್‍ಯಾರು ಎನ್.ಜಿ.ಓ.ಗಳು ಇದ್ದಾರೆ, ಅವರ ಜೊತೆಯಲ್ಲಿಯೂ ಸಹ ನಾನು ಸಮಾಲೋಚನೆ ಮಾಡುತ್ತಿದ್ದೇನೆ. ಈಗ ಕೆಲವರು ಶೌಚಾಲಯವನ್ನು ಕಟ್ಟಿ ಕೊಡುತ್ತೇವೆಂದು ಬರುತ್ತಾರೆ. ಕೆಲವರು ಸ್ಮಾರ್ಟ್‌ಕ್ಲಾಸ್ ಕೊಡುತ್ತೇವೆಂದು ಬರುತ್ತಾರೆ. ನಾವು ಮನಸ್ಸಿಗೆ ಬಂದ ಹಾಗೆ ಮಾಡುವುದು ಬೇಡ, ಒಂದು ದಿಕ್ಸೂಚಿ ಅಥವಾ ಒಂದು ಮಾರ್ಗಸೂಚಿಯನ್ನು ಕೊಟ್ಟು, ಸರಿಯಾದ ರೀತಿಯಲ್ಲಿ ನಮ್ಮ ಬಯಕೆ ಏನು ಇದೆ. ಅಲ್ಲಿ ಶಾಸಕರ ಅನುದಾನ, ಸರ್ಕಾರದ ಅನುದಾನ ಮತ್ತು ಎನ್.ಜಿ.ಓ.ಗಳ ಅನುದಾನ ಏನೇ ಇದ್ದರೂ ಕೂಡ, ಆ ಶಾಲೆಯ ವಾತಾವರಣ ಹೇಗೆ ಇರಬೇಕು ಎಂಬುದಕ್ಕೆ ಸ್ಪಷ್ಟೀಕರಣ ಕೊಟ್ಟು, ಸ್ಪಷ್ಟತೆಯಿಂದ ಏನು ಮಾಡಬೇಕು ಎಂಬುದಕ್ಕೆ ನಾವು ಮುಂದಾಗುತ್ತಿದ್ದೇವೆ. ಈಗ ಮಾನ್ಯ ಸದಸ್ಯರಾದಂತಹ ಶ್ರೀ ಟಿ.ಎ.ಶರವಣರವರು ಶಾಲೆಗಳಲ್ಲಿ ಮಕ್ಕಳು ನೆಲದ ಮೇಲೆ ಕುಳಿತುಕೊಳ್ಳುತ್ತಾರೆಂದು ಹೇಳಿದರು. ಇವತ್ತಿನ ದಿವಸ ಅನೇಕ ಶಾಲೆಗಳಲ್ಲಿ ಕುಳಿತುಕೊಳ್ಳುವುದಕ್ಕೆ ಬೆಂಚು ಮತ್ತು ಮೇಜು ಇಲ್ಲ. ಈ ವ್ಯವಸ್ಥೆ ಇವತ್ತಿನದಲ್ಲ, ಬಹಳ ಹಿಂದಿನಿಂದ ಆಗುತ್ತಿದೆ. ಮಾಡುವಂತಹ ಹಂಬಲ ಇದ್ದರೂ ಕೂಡ, ಹಣ ತರಬೇಕಾದರೆ, ಎಲ್ಲಿಂದ ತರಬೇಕು ಎಂಬುದು, ಆ ಕಾರಣದಿಂದ ನಮಗೆ ಬಜೆಟ್‌ನಲ್ಲಿ ಏನು ಹಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೀಸಲಿಟ್ಟಿರುತ್ತಾರೆ, ಅದರಲ್ಲಿ ಸುಮಾರು ಎಂಟರಿಂದ ಹತ್ತು ಕೋಟಿ ರೂಪಾಯಿಗಳ ಹಣವನ್ನು maintenance ಎಂದು ಖರ್ಚು ಮಾಡುತ್ತೇವೆ. ಆ ಹಣ ಯಾವುದಕ್ಕೂ ಸಾಕಾಗುವುದಿಲ್ಲ. ನಮ್ಮಲ್ಲಿರುವಂತಹ ಬೇರೆ–ಬೇರೆ ಯೋಜನೆಗಳಿಂದ ಆ ಹಣವನ್ನು ಕ್ರೋಢೀಕರಿಸಿಕೊಂಡು...

**ಸಭಾಪತಿಯವರು:–** ಈಗ ಅಷ್ಟೆಲ್ಲಾ ಬೇಡ, ಈಗಾಗಲೇ ಹನ್ನೆರಡು ನಿಮಿಷ ಆಯಿತು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾವು ನನಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ.

**ಸಭಾಪತಿಯವರು:–** ತಾವು ಕೊಡಗಿನ ಬಗ್ಗೆ ಕೇಳಿದ್ದೀರಿ, ಅದಕ್ಕೆ ಮಾನ್ಯ ಸಚಿವರು ಇಪ್ಪತ್ತೆರಡು ಕೊಠಡಿಗಳನ್ನು ರಿಪೇರಿ ಮಾಡಿಸಿ ಕೊಡಿಸುತ್ತೇನೆಂದು ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀಮತಿ ತಾರಾ ಅನೂರಾಧರವರದ್ದು.

**<u>ಪ್ರಶ್ನೆ ಸಂಖ್ಯೆ 266 (2640)</u>**
**<u>(ಉತ್ತರವನ್ನು ಒದಗಿಸಲಾಗಿದೆ)</u>**

**ಶ್ರೀಮತಿ ತಾರಾಅನೂರಾಧ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಉತ್ತರಗಳನ್ನು ನೋಡಿದ್ದೇನೆ, ಅವರ ಪ್ರಕಾರ 19,033 ಹುದ್ದೆಗಳು ಖಾಲಿಯಿವೆ. ಇಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಹೇಗೆ ಗುಣಮಟ್ಟದ ಶಿಕ್ಷಣ ಕೊಡುವುದಕ್ಕೆ ಸಾಧ್ಯ ಎನ್ನುವುದು ನನ್ನ ಒಂದು ಸಂದೇಹ. ತಕ್ಷಣ ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕೈಗೊಂಡಿರುವ ಕ್ರಮಗಳೇನು, ಯಾವ ಸಮಯದ ಮಿತಿಯಲ್ಲಿ ಅವುಗಳನ್ನು ಭರ್ತಿ ಮಾಡುತ್ತೀರಿ. ಈಗ ಸಿ.ಇ.ಟಿ. ಮೂಲಕವೇ ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ. ಆದರೆ, ರಾಜ್ಯಾದ್ಯಂತ ಸಿ.ಇ.ಟಿ. ಇಲ್ಲದೆ, ನೇಮಕಾತಿ ನೇರವಾಗಿ ನಡೆಯುತ್ತದೆ ಎನ್ನುವಂತಹ ಸುದ್ದಿ, Cabinet briefing ನಲ್ಲಿ ಬಂದಿದೆ ಮತ್ತು ಸೃಷ್ಟಿಯಾಗಿದೆ ಎನ್ನುವಂತಹ ಒಂದು ಮಾತು ಇದೆ, ಒಂದು ಕೂಗು ಇದೆ. ಹುದ್ದೆಗಳನ್ನು ಸಿ.ಇ.ಟಿ.ಯ ಮೂಲಕವೇ ನೇಮಕಾತಿ ಮಾಡಿಕೊಳ್ಳುತ್ತೇವೆ ಎನ್ನುವುದು promise ಹೌದಲ್ಲವೇ? ಎನ್ನುವುದನ್ನು ಮಾನ್ಯ ಸಚಿವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಬೇಕು. ಅದು promise ಎಂದು ತಾವು ಹೇಳಬೇಕು, ಅದು ಸತ್ಯಾನಾ ಎಂದು ಹೇಳಬೇಕು. ಏಕೆಂದರೆ ಮಕ್ಕಳು promise ಎಂದು ಕೇಳುತ್ತಾರಲ್ಲ ಹಾಗೆ. ಈ ಹಿಂದೆ ವಯೋಮಿತಿ ಮೀರಿದವರಿಗೆ ಮೀಸಲಾತಿ ಸಿಗುತ್ತಿತ್ತು, ಹಾಗೆಯೇ ನಿವೃತ್ತಿ, ಸ್ವಯಂನಿವೃತ್ತಿ ಮತ್ತು ಮರಣ ಇತ್ಯಾದಿಗಳಿಂದ ಖಾಲಿ ಇರುವ ಹುದ್ದೆಗಳನ್ನು ಆಗಿಂದಾಗ್ಗೆ ಭರ್ತಿ ಮಾಡಿಕೊಳ್ಳಬೇಕು ಎಂಬ ನಿಯಮವಿತ್ತು. ಇದಕ್ಕೆ Finance Department ನವರ ಅನುಮೋದನೆ ಏಕೆ ಬೇಕು ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ನನಗೆ ಇರುವಂತಹ ಇನ್ನೊಂದು ಸಂದೇಹವೆಂದರೆ ಸಿ.ಇ.ಟಿ. ಮೂಲಕ ನೇಮಕಾತಿ ಮಾಡಿಕೊಳ್ಳಬೇಕಾದರೆ, ಪದವಿ ಅಂಕಗಳನ್ನು ಪರಿಗಣಿಸುತ್ತೀರಿ, ಆದರೆ, Annual System ಮತ್ತು Semester System ಫಲಿತಾಂಶಗಳಲ್ಲಿ ಬಹಳ ಅಜಗಜಾಂತರ ವ್ಯತ್ಯಾಸವಿದೆ. Annual System ನಲ್ಲಿ ತೆಗೆದುಕೊಂಡರೆ ಅವರಿಗೆ ಅನ್ಯಾಯವಾಗುತ್ತಿದೆ ಎಂಬುದು ಮತ್ತೊಂದು ಕೂಗು ಇದೆ, ಇದಕ್ಕೆ ನಿಮ್ಮ ಪರಿಹಾರವೇನು? ಕ್ರೀಡೆಗೆ ಸಂಬಂಧಿಸಿರುವುದನ್ನು ಮುಂದೆ ಕೇಳುತ್ತೇನೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಒಂದು ಇಲಾಖೆ ಎಂದಾಗ, ನಿರಂತರವಾಗಿ ನಡೆಯುವಂತಹ ಪ್ರಕ್ರಿಯೆ, ಈಗ ನಮ್ಮಲ್ಲಿ 2,32,792 ಹುದ್ದೆಗಳು ಮಂಜೂರಾಗಿರುವಂಥದ್ದು, ಆ ಹುದ್ದೆಗಳಲ್ಲಿ ಈಗ ಕಾರ್ಯ ನಿರ್ವಹಿಸುತ್ತಿರುವಂತಹ ಸಂಖ್ಯೆಗಳನ್ನು, ಈಗಾಗಲೇ ಮಾನ್ಯ ಸದಸ್ಯರು ಕ್ರೋಢೀಕರಿಸಿಕೊಂಡು ಹೇಳಿದ್ದಾರೆ. ಈಗ ನಮ್ಮಲ್ಲಿ 18,000 ಹುದ್ದೆಗಳು ಖಾಲಿ ಇವೆ. ನಾವು 2014-15ನೇ ಸಾಲಿನಲ್ಲಿ ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿ, ಈಗಾಗಲೇ ಸುಮಾರು 7,905 ಶಿಕ್ಷಕರ ನೇಮಕಾತಿ ಮಾಡಿ, ಅವರುಗಳು ಕಾರ್ಯನಿರ್ವಹಿಸಲು ಸ್ಥಳಗಳನ್ನು ನಿಯೋಜನೆ ಮಾಡಿ ಕೊಟ್ಟಿದ್ದೇವೆ. ಹೈಸ್ಕೂಲ್‌ಗಳಲ್ಲಿ 1,689 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡಿ, ಕೆ.ಎ.ಟಿ.ಯಲ್ಲಿ ಒಂದು ಸಣ್ಣ ತಡೆಯಾಜ್ಞೆ ಇರುವುದರಿಂದ, ಈಗಾಗಲೇ ಅದನ್ನು ತೆರವುಗೊಳಿಸುವಂತಹ ಪ್ರಕ್ರಿಯೆಯನ್ನು ಸಹ ನಾವು ಮಾಡುತ್ತಿದ್ದೇವೆ. ಅವರೆಲ್ಲರಿಗೂ ಕೌನ್ಸಿಲಿಂಗ್ ಮಾಡಿಕೊಟ್ಟಿದ್ದೇವೆ. ಪದವಿ ಪೂರ್ವ ಉಪನ್ಯಾಸಕರಿಗೂ ಕೂಡ 1,201 ಹುದ್ದೆಗಳಿಗೆ ಅರ್ಜಿಗಳನ್ನು ಕರೆದಿದ್ದೇವೆ. ಇದು ನಿರಂತರವಾಗಿ ನಡೆಯುವಂತಹ ಕ್ರಮದಲ್ಲಿ, ಪ್ರಸ್ತುತ ಸಾಲಿನಲ್ಲಿ ಸುಮಾರು ಹತ್ತು ಸಾವಿರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವುದಕ್ಕೂ ಸಹ ಮುಂದಾಗುತ್ತಿದ್ದೇವೆ. ಹಾಗಾಗಿ ಒಂದು ಇಲಾಖೆಯೆಂದು ಹೇಳಿದಾಗ, ಎಲ್ಲಾ ಇಲಾಖೆಗಳಲ್ಲೂ ಶೇಕಡ 50ಕ್ಕಿಂತ ಜಾಸ್ತಿ ಹುದ್ದೆಗಳು ಖಾಲಿ ಇವೆ. ಆದರೆ ನಮ್ಮ ಇಲಾಖೆಯಲ್ಲಿ ನಾವು ನಿರಂತರವಾಗಿ ಇದನ್ನು ಮಾಡಿಕೊಳ್ಳುತ್ತಾ ಹೋಗುತ್ತಿದ್ದೇವೆ. ಇದರಲ್ಲಿ ಆರ್ಥಿಕ ವ್ಯವಸ್ಥೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡಿರುವುದರಿಂದ, ಹಿಂದೆ ಇದ್ದಂತಹ ಶಿಕ್ಷಕರ ವೇತನಕ್ಕೂ, ಈಗ ಬರುವಂತಹ ಶಿಕ್ಷಕರ ವೇತನಕ್ಕೂ ವ್ಯತ್ಯಾಸ ಬರುವುದರಿಂದ, ಏಕೆಂದರೆ ಪ್ರತಿ ವರ್ಷ ಆಯವ್ಯಯ ಮಂಡನೆ ಮಾಡುವಂತಹ ಸಂದರ್ಭದಲ್ಲಿ, ಇರುವಂತಹ ಹುದ್ದೆಗಳಿಗೆ ಮಾತ್ರ ಅನುದಾನವನ್ನು ಕೊಡುವಂತಹದು. ಹಾಗಾಗಿ ಖಾಲಿ ಇರುವಂತಹ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ, ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದುಕೊಳ್ಳುವುದು ಒಂದು ಪ್ರಕ್ರಿಯೆ, ಅದು ನಡೆಯುತ್ತಿರುತ್ತದೆ. ಇದರಲ್ಲಿ ಯಾವುದೇ ಕಾರಣಕ್ಕೂ ಆರ್ಥಿಕ ಇಲಾಖೆಯವರು ಅನುಮತಿ ಕೊಟ್ಟಿಲ್ಲವೆಂದು ಅದಕ್ಕೆ ನಾವು ಮಾಡಿಲ್ಲವೆಂದು ಎಲ್ಲೂ ಸಹ ಹೇಳಿಲ್ಲ. ಇದು ನಿರಂತರವಾಗಿ ನಡೆದುಕೊಂಡು ಹೋಗುವಂತಹ ಪ್ರಕ್ರಿಯೆಯಾಗಿರುವುದರಿಂದ, ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆ, ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವವರೆಗೂ ಅವುಗಳನ್ನು ಅತಿಥಿ ಶಿಕ್ಷಕರಿಂದ ಬೋಧನೆ ಮಾಡುವಂತಹ ಪ್ರಕ್ರಿಯೆಯನ್ನು ನಾವು ಮಾಡಿಕೊಂಡು ಬರುತ್ತಿದ್ದೇವೆ. ನಾವು ಅದರಲ್ಲಿ ಶಿಕ್ಷಕರ ಕೊರತೆಯನ್ನು ಎಲ್ಲೂ ಸಹ ತೋರಿಸಿಕೊಂಡಿಲ್ಲ. ಈಗಾಗಲೇ ಮಾನ್ಯ ಸದಸ್ಯರಾದಂತಹ ಶ್ರೀಮತಿ ಜಯಮಾಲ ರಾಮಚಂದ್ರರವರು ಹೇಳಿದರು, ಕೆಲವು ಶಾಲೆಗಳಲ್ಲಿ ಶಿಕ್ಷಕರೆ ಇಲ್ಲವೆಂದು. ನಾನು ಬಹಳ ಸ್ಪಷ್ಟ ರೂಪದಲ್ಲಿ ಹೇಳುತ್ತೇನೆ, ರಾಜ್ಯದಲ್ಲಿ ಯಾವುದೇ ಶಾಲೆಯಲ್ಲಿ ಶಿಕ್ಷಕರು ಇಲ್ಲದೇ, ಆ ಕೊರತೆ ಇರುವಂಥದ್ದು ಎಲ್ಲೂ ಇಲ್ಲ. ನಾವು ಎಲ್ಲಾ ಕಡೆ ಶಿಕ್ಷಕರನ್ನು ಕೊಟ್ಟಿದ್ದೇವೆ. ಎರಡನೇಯದಾಗಿ, ನೇಮಕಾತಿ ಪ್ರಕ್ರಿಯೆ ಕಾಲ-ಕಾಲಕ್ಕೆ ಏನು ಬದಲಾವಣೆಗಳಾಗುತ್ತವೆ. ಈಗ ನಮಗೆ ಏನು ಅಗತ್ಯವಾಗಿ ಬೇಕಾಗಿದೆ, ಈಗ ಏನಾಗುತ್ತದೆಂದರೆ, ನಾವು ನಮಗೆ ಅಗತ್ಯವಿರುವಂತಹ ಅಂಶಗಳನ್ನು ಮುಂದೆ ಇಟ್ಟುಕೊಂಡು ಏನು ನೋಟಿಫಿಕೇಶನ್ ಮಾಡುತ್ತೇವೆ. ನೋಟಿಫಿಕೇಶನ್ ಮೂಲಕವೇ ಪರೀಕ್ಷೆಗಳನ್ನು ಬರೆಯುತ್ತೇವೆ, ಪರೀಕ್ಷೆ ಕೊಟ್ಟು, ನಂತರ ಆ ಪ್ರಕ್ರಿಯೆ ಏನು ಇದೆ, ಅದು ನಿರಂತರವಾಗಿ ನಡೆದುಕೊಂಡು ಹೋಗುವಂತಹ ಪ್ರಕ್ರಿಯೆ. ಇದರಲ್ಲಿ ನಾನು ನೇರವಾಗಿ ಯಾರನ್ನೋ ಕರೆದುಕೊಂಡು ಬಂದು ಹುದ್ದೆ ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಪ್ರಸ್ತುತ ಏನು ಪ್ರಕ್ರಿಯೆ ಇದೆ, ಅದೇ ಪ್ರಕ್ರಿಯೆ ಮುಂದುವರೆಯುತ್ತದೆ.

**ಶ್ರೀಮತಿ ತಾರಾಅನೂರಾಧಃ-** ಮಾನ್ಯ ಸಭಾಪತಿಯವರೆ, ಇನ್ನು ಪ್ರಶ್ನೆ ಇದೆ. ಅವರು promise ಹೇಳಿದ್ದಾರೆ, ಅಂದರೆ ಸಿ.ಇ.ಟಿ. ಮೂಲಕವೇ ನೇಮಕಾತಿಯನ್ನು ಮಾಡಿಕೊಳ್ಳುತ್ತೇವೆಂದು ಅದಕ್ಕೆ ಮಾನ್ಯ ಶಿಕ್ಷಣ ಸಚಿವರಿಗೆ ಧನ್ಯವಾದಗಳು. ಹಾಗೆಯೇ ಕ್ರೀಡಾ ಶಿಕ್ಷಣ, ನಾವು ಈ ಕ್ರೀಡೆ ಮತ್ತು ದೈಹಿಕ ಶಿಕ್ಷಣ ಇವುಗಳನ್ನೆಲ್ಲಾ ಯಾವಾಗ ನೆನಪಿಸಿಕೊಳ್ಳುತ್ತೇವೆಂದರೆ, ನಮ್ಮ ಮಕ್ಕಳು ಯಾವುದೇ ಕ್ರೀಡಾಕೂಟದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧನೆ ಮಾಡದೇ ಇರುವಾಗ, ಅಯ್ಯೋ ಏನೂ ಸಾಧನೆ ಮಾಡಲಿಲ್ಲವೆಂದು, ದೈಹಿಕ ಶಿಕ್ಷಕರ ಬಗ್ಗೆ ಮಾತನಾಡುತ್ತೇವೆ. ನಮಗೆ ಗೊತ್ತಿರುವ ಪ್ರಕಾರ ಈಗ ಮಾನ್ಯ ಸದಸ್ಯರಾದಂತಹ ಶ್ರೀ ಟಿ.ಎ.ಶರವಣರವರು ಕೇಳಿದಂತಹ ಪ್ರಶ್ನೆಯಲ್ಲಿ, ನೀವು ಕಿರಿಯ ಶಾಲೆಗಳಲ್ಲಿ 21,441, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 22,454, ಪ್ರೌಢಶಾಲೆಗಳಲ್ಲಿ 4,678 ಇದೆ ಎಂದು ಉತ್ತರ ಕೊಟ್ಟಿದ್ದೀರಾ. ಒಟ್ಟು ಎಷ್ಟು ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳನ್ನು ಸೃಷ್ಟಿ ಮಾಡಿದ್ದೀರಿ. ಒಂದು ಹಂತದಲ್ಲಿ ನನಗೆ ಕೊಟ್ಟಿರುವಂತಹ ಉತ್ತರದಲ್ಲೆ ಹೇಳಿದ್ದೀರಿ, 957 ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇನ್ನು ಪ್ರೌಢಶಾಲೆಗಳಲ್ಲಿ 321 ದೈಹಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ, ಅಂದರೆ ಅವುಗಳನ್ನು ತುಂಬಿಲ್ಲ. ಪದವಿ ಪೂರ್ವ ಶಿಕ್ಷಣದಲ್ಲಿ ಬರೀ 20 ಹುದ್ದೆಗಳು ಸೃಷ್ಟಿಯಾಗಿವೆ. ಆ 20 ಹುದ್ದೆಗಳೂ ಸಹ ಖಾಲಿ ಇವೆ. ಎಷ್ಟು ಕಳಕಳಿ, ಎಷ್ಟು ಬದ್ದತೆ ಎಂದು ನಾವು ಕೇಳಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮ ನಾಯಕರು ಕೂಡ ಶಿಕ್ಷಣಕ್ಕೆ ಅನುದಾನ ನೀಡಿ ಎಂದು support ಮಾಡಿದರು. ದಯವಿಟ್ಟು ನಿಮ್ಮ ಬದ್ದತೆಯನ್ನು, ನಿಮ್ಮ ಕಳಕಳಿಯನ್ನು ತೋರಿಸುವುದರಲ್ಲಿ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು, ದೈಹಿಕ ಶಿಕ್ಷಕರ ಬಗ್ಗೆ ಹೇಳಿ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ನಮ್ಮಲ್ಲಿ C&R (Cadre and Recruitment) ಮಾಡುವಂತಹ ಸಂದರ್ಭದಲ್ಲಿ ಮತ್ತು ನಾವೇನು 1983ರ ಶಿಕ್ಷಣದ ಕಾಯ್ದೆಯನ್ನು ಮಾಡಿಕೊಂಡಿದ್ದೇವೆ, ಅದರ ಪ್ರಕಾರ ಪ್ರಾಥಮಿಕ ಶಿಕ್ಷಣ ವಿಭಾಗದಲ್ಲಿ 250 ಮಕ್ಕಳು ಇರುವಂತಹ ಶಾಲೆಗಳಿಗೆ ದೈಹಿಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು ಎಂಬುದು ಇದೆ. ಅದರ ಜೊತೆಗೆ ಪ್ರೌಢಶಾಲಾ ವಿಭಾಗದಲ್ಲೂ ಅದೇ ನಿಯಮ ಮುಂದುವರೆದಿದೆ. ಪದವಿ ಪೂರ್ವ ಇಲಾಖೆಯಲ್ಲಿ 243 ಮಕ್ಕಳು ಇದ್ದಂತಹ ಕಾಲೇಜುಗಳಿಗೆ ಒಬ್ಬೊಬ್ಬರು ದೈಹಿಕ ಶಿಕ್ಷಕರನ್ನು ಕೊಡಬೇಕು ಎಂಬುದು ಇದೆ. ಈ ನಿಯಮದ ಪ್ರಕಾರ ಏನು 957 ಹುದ್ದೆಗಳು ಪ್ರಾಥಮಿಕ ಶಾಲಾ ವಿಭಾಗದಲ್ಲಿ ಖಾಲಿ ಇವೆ. ನಾವು ನೇಮಕ ಮಾಡಿಕೊಳ್ಳುವಂತಹ ಪ್ರಕ್ರಿಯೆಯಲ್ಲಿ ಅದಕ್ಕೆ ಅನುಗುಣವಾಗಿ ಆ ಹುದ್ದೆಗಳನ್ನು ಸೃಷ್ಟಿ ಮಾಡುವಂತಹ ಕೆಲಸಗಳನ್ನು ನಿರಂತರವಾಗಿ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಪ್ರೌಢಶಾಲಾ ವಿಭಾಗದಲ್ಲೂ 179 ಹುದ್ದೆಗಳನ್ನು, ಈಗ ಏನು 1,689 ಹುದ್ದೆಗಳಲ್ಲಿ ಈ 179 ಹುದ್ದೆಗಳನ್ನು ತುಂಬುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(649)09.06.2017 ಎಲ್‌ಎಲ್/ವಿಕೆ 12.20**

**ಶ್ರೀ ತನ್ವೀರ್ ಸೇಠ್**(ಮುಂದು) :-

ಅದೇ ರೀತಿಯಲ್ಲಿ ಪದವಿ ಪೂರ್ವದಲ್ಲಿಯೂ ಕೂಡ ಈಗಾಗಲೇ 1201 ಉಪನ್ಯಾಸಕರ ಹುದ್ದೆಗಳನ್ನು ನಾವು ಏನು ಕರೆದಿದ್ದೇವೆ, ಅದರಲ್ಲೂ ನಾವು ದೈಹಿಕ ಶಿಕ್ಷಕರ ಹುದ್ದೆಗಳನ್ನು ತುಂಬಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಒಂದು ತೀರ್ಮಾನ ಏನಾಗಿತ್ತೆಂದರೆ, 100 ವಿದ್ಯಾರ್ಥಿಗಳಿರುವಂತಹ ಪಿಯು. ಕಾಲೇಜಿನಲ್ಲಿ ದೈಹಿಕ ಶಿಕ್ಷಕರನ್ನು ಕೊಡಬೇಕು ಎನ್ನುವಂತಹದ್ದು ಮಾಡಿ, 100 ಕಾಲೇಜುಗಳಲ್ಲಿ ತುಂಬಿಕೊಳ್ಳುವಂತಹದ್ದಕ್ಕೆ ಅವಕಾಶ ಮಾಡಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋದಾಗ ಪ್ರಸ್ತಾವನೆ ಪಾಸ್ ಆಗಿತ್ತು. ನಂತರ ಮರು ವಾರವೇ ಸಚಿವ ಸಂಪುಟದಲ್ಲಿ ಮತ್ತೊಂದು ತೀರ್ಮಾನ ತೆಗೆದುಕೊಂಡು 240 ಕಾಲೇಜುಗಳು ಎಂದು ಮಾಡಿದರು. ಈ ಮಧ್ಯದಲ್ಲಿ 19 ಕಾಲೇಜುಗಳಲ್ಲಿ ಈಗಾಗಲೇ ನಾವು ನೇಮಕ ಮಾಡಿಕೊಟ್ಟಿದ್ದೇವೆ. ಆದುದರಿಂದ, ಸರ್ಕಾರಿ ಸಂಸ್ಥೆಗಳಲ್ಲಿ ಯಾವ ನಿಯಮಾವಳಿಗಳಲ್ಲಿ ಮಾಡಿಕೊಳ್ಳುತ್ತೇವೆ, ಅನುದಾನಿತ ಶಾಲೆಗಳು ಸಹ ಅದೇ ಮಾನದಂಡವನ್ನು ಅನುಸರಿಸುತ್ತಿರುವುದರಿಂದ ಈ ಕೊರತೆಗಳನ್ನು ತುಂಬುವಂತಹದ್ದಕ್ಕೆ ಕ್ರಮಬದ್ಧವಾಗಿ ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದನ್ನು ಯಾವುದೇ ರೀತಿಯಿಂದಲೂ ಖಾಲಿ ಇಟ್ಟುಕೊಳ್ಳಬೇಕೆಂದಿಲ್ಲ. ನಮ್ಮ ನಂಬಿಕೆಗಳು ಏನಿವೆ..?

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಯವರೆ, ಆ ಕೆಲಸವನ್ನು ಮಾಡುವುದಕ್ಕೆ ಸರ್ಕಾರಕ್ಕೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಈ ಪ್ರಕ್ರಿಯೆ ನಿರಂತರವಾಗಿ ನಡೆದುಕೊಂಡು ಹೋಗುತ್ತದೆ. **(ಗೊಂದಲ)** ಇಲ್ಲಿ ಏನಾಗುತ್ತದೆಯೆಂದರೆ...

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಿಲ್ಲ ಎನ್ನುವುದಕ್ಕೆ ಮಾನ್ಯ ಸಚಿವರ ಒಪ್ಪಿಗೆಯಿದೆಯೇ? ಇದು ತೃಪ್ತಿಕರವಾಗಿದೆಯೆನ್ನುವುದನ್ನು ಮಾನ್ಯ ಸಚಿವರು ಪ್ರಾಮಾಣಿಕವಾಗಿ ಹೇಳಲಿ. ದಯಮಾಡಿ ಇದನ್ನು ಅವರು ಪ್ರಾಮಾಣಿಕವಾಗಿ ಹೇಳಲಿ. ಒಂದೇ ಒಂದು ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇಲ್ಲವೆಂದರೆ ಕಥೆಯೇನು?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಇಲಾಖೆ ಬಗ್ಗೆ ಅಧ್ಯಯನವನ್ನು ಈಗಾಗಲೇ ನಾನು ಮಾಡಿದ್ದೇನೆ. ಎಲ್ಲೆಲ್ಲಿ ನ್ಯೂನತೆಗಳಿವೆ ಅವುಗಳನ್ನು ಸರಿಪಡಿಸುವಂತಹ ಕೆಲಸವನ್ನು ಈಗಾಗಲೇ ನಾವು ಪ್ರಾರಂಭ ಮಾಡಿದ್ದೇವೆ. ಅದರಂತೆ, ಮಾನ್ಯ ಸದಸ್ಯರ ಕಳಕಳಿಗೆ ಸ್ಪಂದನೆ ನೀಡುವಂತಹದ್ದಕ್ಕೆ ಮುಂದಾಗುತ್ತೇವೆ.

**ಪ್ರಶ್ನೆ ಸಂಖ್ಯೆ:2617**

**(ಉತ್ತರವನ್ನು ಲಗತ್ತಿಸಲಾಗಿದೆ.)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬಿಟ್ಟರೆ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಅತ್ಯಂತ ವೇಗವಾಗಿ ಬೆಳೆಯುತ್ತಿರುವಂತಹ ವಿಮಾನ ನಿಲ್ದಾಣವಾಗಿದೆ. ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ಇದು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ದೇಶದ ನಾಲ್ಕಾರು ಪಟ್ಟಣಗಳಿಗೆ ಮತ್ತು ಅಂತರಾಷ್ಟ್ರೀಯವಾಗಿ ಗಲ್ಫ್ ದೇಶಗಳಿಗೆ ಪ್ರತಿನಿತ್ಯ ವಿಮಾನಗಳು ಅಲ್ಲಿಂದ ಹೋಗುತ್ತಿವೆ. ಪಕ್ಕದ ರಾಜ್ಯದಲ್ಲಿ ಒಂದು ಅಂತರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಬರುತ್ತಿರುವುದರಿಂದ, ಇವತ್ತಲ್ಲಾ ನಾಳೆ ನಮಗೆ ಸಮಸ್ಯೆಗಳಾಗಬಹುದೆಂಬ ಆತಂಕಗಳನ್ನು ಮನಸ್ಸಲ್ಲಿಟ್ಟುಕೊಂಡು ಇದನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕೆನ್ನುವ ಒಂದು ಸಲಹೆ–ಸೂಚನೆ ಮತ್ತು ಪ್ರಸ್ತಾವನೆ ಈ ಹಿಂದೆ ಇತ್ತು. ಇದನ್ನು ಮನಸ್ಸಲ್ಲಿಟ್ಟುಕೊಂಡು ಮಾನ್ಯ ಸಚಿವರು, *"critical mandatory requirement for safe landing."* ಎಂದು ಹೇಳುತ್ತಿರಬಹುದು. ಇದಕ್ಕಾಗಿ ಅಲ್ಲಿ ಈಗ ಉಪಯೋಗದಲ್ಲಿರುವಂತಹ runway ಯನ್ನು ವಿಸ್ತಾರ ಮಾಡಬೇಕೆಂದು ಹೇಳುವ ಪ್ರಸ್ತಾವನೆ ಬಹಳ ವರ್ಷಗಳಿಂದ ನಡೆಯುತ್ತಿದೆ. ಅದಕ್ಕೆ ಬೇಕಾದ ಭೂಮಿಯ ಸ್ವಾಧೀನ ಏನಿದೆ, ಅದಕ್ಕಾಗಿ ಬಹಳ ದಿನಗಳಿಂದ ಪ್ರಕ್ರಿಯೆ ನಡೆಯುತ್ತಿದೆ. ಆ ಭೂಮಿಯನ್ನು ನಾವು ಸ್ವಾಧೀನಪಡಿಸಿ ಕೊಟ್ಟಿಲ್ಲವೆನ್ನುವ ಕಾರಣಕ್ಕಾಗಿ runway ವಿಸ್ತಾರವಾಗಿಲ್ಲ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಹೊಸ ಒಂದು angle ಕೂಡ ತೆಗೆದುಕೊಂಡು ಬಂದಿದ್ದಾರೆ. ಅದೇನೆಂದರೆ, *"To make a feasibility study for an alternative site between Udupi and Mangalore for development of a new airport."*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಆಗುತ್ತಿದೆಯೆಂದು ನನಗೆ ಇಲ್ಲಿಯವರೆಗೂ ಗೊತ್ತಿರಲಿಲ್ಲ. ಆದರೆ, ಈಗ ಇರುವಂತಹ ಮಂಗಳೂರು ವಿಮಾನ ನಿಲ್ದಾಣದ ಭವಿಷ್ಯದ ದೃಷ್ಟಿಯಿಂದ ನಾವು ಈ ಒಂದು ರನ್ ವೇ ವಿಸ್ತರಣಾ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳದೇ ಇದ್ದರೆ, ಅದಕ್ಕೆ ಬೇಕಾದ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳದೇ ಇದ್ದರೆ ಅಥವಾ ಪಕ್ಕದ ರಾಜ್ಯದ ಕ್ಯಾಲಿಕಟ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಯಾಚರಣೆ ಪ್ರಾರಂಭ ಮಾಡಿದರೆ ಮಂಗಳೂರು ವಿಮಾನ ನಿಲ್ದಾಣಕ್ಕೆ ದೊಡ್ಡ ಪ್ರಮಾಣದಲ್ಲಿ ಧಕ್ಕೆಯುಂಟಾಗುತ್ತದೆ. ಏಕೆಂದರೆ, ಶೇಕಡ 30ರಷ್ಟು ಮತ್ತು 40ರಷ್ಟು ವಿದೇಶಿ ಪ್ರಯಾಣಿಕರು ಬರುತ್ತಿರುವಂತಹದ್ದು ಕೇರಳದ ಉತ್ತರದ ಭಾಗಗಳಿಂದ. ಹಾಗಾಗಿ ಈ ದೃಷ್ಟಿಯಿಂದ ಇನ್ನೂ ದೊಡ್ಡ ಪ್ರಮಾಣದ ವಿಮಾನಗಳು ಇಳಿಯಬೇಕಾದರೆ ನಾವು ಅಲ್ಲಿನ ರನ್‌ವೇ ವಿಸ್ತರಣೆ ಮಾಡಬೇಕಾದ ಅತ್ಯಂತ ಅನಿವಾರ್ಯತೆ ನಮ್ಮ ಕಣ್ಣು ಮುಂದೆ ಇದೆ. ಹಾಗಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದವರು ಏನು ಹೇಳುತ್ತಾರೆ..? ಅವರು ಹೇಳುವುದಕ್ಕಿಂತ ಮುಖ್ಯವಾಗಿ ಕರ್ನಾಟಕ ರಾಜ್ಯದವರಾಗಿ ನಾವು ನಮ್ಮ ರಾಜ್ಯದಲ್ಲಿರುವಂತಹ ಒಂದು ಪ್ರಮುಖವಾದ ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸುವುದಕ್ಕೆ ಅಗತ್ಯವಿರುವಂತಹ ರನ್‌ವೇ ವಿಸ್ತರಣೆ ಕಾರ್ಯಕ್ರಮಕ್ಕೆ ಮಾನ್ಯ ಸಚಿವರು ಶೀಘ್ರ ಕ್ರಮ ತೆಗೆದುಕೊಳ್ಳುತ್ತಾರೆಯೇ ಎನ್ನುವಂತಹದ್ದು ಒಂದು ಪ್ರಶ್ನೆ. ಅದನ್ನು ನಾವಾಗಿಯೇ ಹೋಗಿ ಮಾಡುವಂತಹದ್ದು. ಇನ್ನು ಎರಡನೆಯದಾಗಿ, ಮಾನ್ಯ ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಎರಡು ರನ್‌ವೇ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಅಲ್ಲಿ ಎರಡು ರನ್‌ವೇ ಇವೆ. ಒಂದು ರನ್‌ವೇ ಉಪಯೋಗ ಮಾಡುತ್ತಾರೆ. ಹಳೆಯ ರನ್‌ವೇ ಇದೆ. ನನ್ನ ಪ್ರಶ್ನೆ ಇರುವಂತಹದ್ದು, ಈ ಹಿಂದೆ ಚರ್ಚೆ ಮಾಡಿದಾಗ ಆ ರನ್‌ವೇಯನ್ನು cargo operationsಗೆ ಉಪಯೋಗ ಮಾಡುತ್ತೇವೆ, ಹಳೆಯ airport terminal ಅನ್ನು cargo terminal ಆಗಿ ಉಪಯೋಗ ಮಾಡುತ್ತೇವೆಂದು ಕಳೆದ ಸದನದಲ್ಲಿ ಉತ್ತರ ಕೊಟ್ಟಿದ್ದರು. ಆದರೆ, ಈಗ ನೋಡಿದರೆ ಆ ರನ್‌ವೇ ಯನ್ನು ಯಾವುದಕ್ಕೂ ಉಪಯೋಗ ಮಾಡದೇ, ಕೇವಲ coast guardಗೆ ಸಂಬಂಧಪಟ್ಟಂತಹ ವಿಮಾನಗಳಿಗೆ ಟ್ರ್ಯಾಕ್ಸಿಂಗ್ ಉಪಯೋಗ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಪಕ್ಕದಲ್ಲಿ NMPT (New Mangalore Port Trust) ಪೋರ್ಟ್ ಇದೆ ಮತ್ತು ಎರಡು ರನ್‌ವೇ ಇರುವಂತಹ ಒಂದು ಏರ್‌ಪೋರ್ಟ್ ಇದೆ. ಈ ಎರಡನೆಯ ರನ್‌ವೇ ಅಥವಾ ಹಳೆಯ ರನ್‌ವೇ ಅನ್ನು cargo operationsಗೆ ಸೀಮಿತವಾಗಿ ಉಪಯೋಗ ಮಾಡಲಿಕ್ಕೆ ಸಾಧ್ಯವಾದರೆ, ಅದು ಕೂಡ ವ್ಯವಹಾರಿಕ ದೃಷ್ಟಿಯಿಂದ ಮಂಗಳೂರು ಜನಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಕೂಲವಾಗುತ್ತದೆ. ಈ ದೃಷ್ಟಿಯಲ್ಲಿ ಒಟ್ಟು ಮಂಗಳೂರು ವಿಮಾನ ನಿಲ್ದಾಣ ವಿಸ್ತರಣೆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ. ದಯವಿಟ್ಟು ಈ ವಿಚಾರವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದವರ ಮೇಲೆ ಹಾಕಬಾರದು. ಏಕೆಂದರೆ, for the time being, it is managed by the Airport Authority of India. I agree with you. ಆದರೆ, ಅದು ನಮ್ಮ ರಾಜ್ಯದ ವಿಮಾನ ನಿಲ್ದಾಣವಾಗಿರುವುದರಿಂದ ನಾವು ಸ್ವಲ್ಪ ಪೂರ್ವಭಾವಿಯಾಗಿ ಆಲೋಚನೆ ಮಾಡಿಕೊಂಡು ರನ್‌ವೇ ವಿಸ್ತರಣೆ ಮತ್ತು cargo terminal ಈ ಎರಡು ವಿಚಾರಗಳ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆಯೇ ಎಂದು ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದಂತೆ ಇದೊಂದು ಬಹಳ ಮಹತ್ವದ ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಿದೆ. ಇದರ ಅಭಿವೃದ್ಧಿ ಆಗುವ ವಿಚಾರದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲಿ ಸಹ ಇದರ ಬಗ್ಗೆ ಪ್ರಸ್ತಾಪ ಮಾಡಿ, "ರಾಜ್ಯ ಸರ್ಕಾರ ಈ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಸಂಪೂರ್ಣವಾದ ಸಹಕಾರ ಕೊಡುತ್ತದೆಯೆಂದು" ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿರುವ ಪ್ರಶ್ನೆಯೇನೆಂದರೆ, ಈ ಏರ್‌ಪೋರ್ಟ್ it is under the control of Airport Authority of India. ಇದು ಮಾನ್ಯ ಸದಸ್ಯರಿಗೆ ಗೊತ್ತಿದೆಯೆಂದು ಹೇಳಿದ್ದಾರೆ ಮತ್ತು ಈ ವಿಚಾರವನ್ನು ಹೇಳಬಾರದೆಂದು ಹೇಳಿದ್ದಾರೆ. ಆದರೆ, ಈ ವಿಚಾರವನ್ನು ಹೇಳಲೇಬೇಕಾಗುತ್ತದೆ. ಏಕೆಂದರೆ, ಈಗಾಗಲೇ ಒಂದು ಪ್ರಸ್ತಾವನೆ 268 ಎಕರೆ ಜಮೀನು... If I am right, ಆ 268 ಎಕರೆ ಜಮೀನನ್ನು ಭೂ ಸ್ವಾಧೀನದ ಬಗ್ಗೆ ಪ್ರಸ್ತಾವನೆಯನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಕಳುಹಿಸಿದಾಗ ಅದರ ಬಗ್ಗೆ ನಮಗೆ ಅದರ ರೂಪುರೇಷೆ, ಆ ಏರ್‌ಪೋರ್ಟ್‌ನ funding, ಅದನ್ನು ಯಾವ ಪ್ರಕಾರದಲ್ಲಿ ಮಾಡಬೇಕೆಂದು ಬಹಳ ಹಿಂದೆಯೇ ಒಂದು ಪ್ರಸ್ತಾವನೆಯನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಕಳುಹಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ಸಂದರ್ಭದಲ್ಲಿ Ministry of Civil Aviationಗೆ ಪತ್ರ ಬರೆದಿದ್ದಾರೆ. ಜೂನ್ 1ನೇ ತಾರೀಖಿಗೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧ್ಯಕ್ಷರು ನಮ್ಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದೆ ಬಂದು, ಮಾನ್ಯ ಮುಖ್ಯ ಕಾರ್ಯದರ್ಶಿಯವರ ಜೊತೆ ಒಂದು ಸಭೆ ಮಾಡಿ, ನಾಲ್ಕು ಪ್ರಸ್ತಾವನೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಆ ನಾಲ್ಕು ಪ್ರಸ್ತಾವನೆ ಮುಖ್ಯವಾಗಿ... practically difficult ಇವೆ. ಒಂದನೆಯ ಪ್ರಸ್ತಾವನೆ, "full length earth filling" ಅಂದರೆ, 255 ಎಕರೆ ಜಮೀನಿನಲ್ಲಿ 3 ಬೆಟ್ಟಗಳನ್ನು ಗುರುತಿಸಿ 339 ಲಕ್ಷ ಕ್ಯೂಬಿಕ್ ಮೀಟರ್ ಭೂಮಿಯನ್ನು ಮಣ್ಣಿನಿಂದ ಭರ್ತಿ ಮಾಡಬೇಕು. 12,000ಟ್ರಕ್ಸ್ ಪ್ರತಿ ದಿನ ಮಣ್ಣು ತುಂಬಬೇಕು. ಅದರ ವೆಚ್ಚ 1,895ಕೋಟಿ, ಎರಡನೆಯದು, "earth work and bridge" ಇದಕ್ಕೆ earth filling 22ಲಕ್ಷ, ಸಿಮೆಂಟ್ 13ಲಕ್ಷ ಟನ್ಸ್ ಮತ್ತು ಈ ಬ್ರಿಡ್ಜ್‌ನ ಎತ್ತರ 71 ಮೀಟರ್ ಅದಕ್ಕೆ 160ಎಕರೆ ಜಮೀನಿನಲ್ಲಿ 4,000 ಕೋಟಿ ವೆಚ್ಚವೆಂದು ಹೇಳಿದ್ದಾರೆ. ಅದೇ ಪ್ರಕಾರ ಮೂರನೆಯದು "full length bridge" ಜಗತ್ತಿನಲ್ಲಿ ಎಲ್ಲಿಯೂ ಆಗಿಲ್ಲ. ಒಂದು ಒಳ್ಳೆಯ ಪ್ರಸ್ತಾವನೆ. ಆದರೆ, ಪ್ರಾಯೋಗಿಕವಾಗಿ it requires about 5,000crores of rupees. ನಾಲ್ಕನೆಯದು, "earth work and bridge with reduced strip" ಇದಕ್ಕೆ 4,000 ಕೋಟಿ ರೂಪಾಯಿಗಳು. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದವರು, ಈ ಎಲ್ಲಾ ಪ್ರಸ್ತಾವನೆಗಳನ್ನು ನಾವು ಸಹ ಒಪ್ಪಿಕೊಳ್ಳುತ್ತೇವೆ. ಆದರೆ Feasibility ದೃಷ್ಟಿಯಿಂದ ಇದು ಸರಿಯಿಲ್ಲವೆಂದು ಹೇಳಿದರು. ಹಾಗಾಗಿ ಪುನಃ ಸಭೆಯಲ್ಲಿ ನಾವು, "we are more interested in this airport." ಇದು ಅಭಿವೃದ್ಧಿಯಾಗಬೇಕಾಗುತ್ತದೆ. ತಾವು ಇದರ ಬಗ್ಗೆ ಮಾರ್ಗದರ್ಶನ ಮಾಡಬೇಕೆಂದು ಹೇಳಿದ್ದೇವೆ. ಕೊನೆಯದಾಗಿ, ಈಗ ನಾವು 33ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿ ರನ್ ವೇ ವಿಸ್ತರಣೆ ಮಾಡುವ ಬಗ್ಗೆ ಒಂದು ಪ್ರಸ್ತಾವನೆಯಿದೆ. ಅದೇನು ಬಹಳ ಕಷ್ಟದ ಕೆಲಸವಲ್ಲ. ಅದನ್ನು ನಾವು ಒಪ್ಪಿಕೊಳ್ಳಬಹುದು. ಆದರೆ ಅದನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದವರು ನಮಗೆ ಹೇಳಬೇಕಾಗುತ್ತದೆ. ನಾವು ಆ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇವೆ. ಅವರು ಏನು ಹೇಳಬೇಕಾಗಿದೆ.., ಏಕೆಂದರೆ, ತಾಂತ್ರಿಕ ಸಲಹೆಗಳನ್ನು ಅವರು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಎರಡನೆಯ ರನ್‌ವೇ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ, ಅದೇನೆಂದರೆ, it is an Isolation Bay ಎನ್ನುತ್ತಾರೆ, Isolation Bay ನಲ್ಲಿ ಯಾವಾಗ ತಾಂತ್ರಿಕ ಸಮಸ್ಯೆಗಳಿರುತ್ತವೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(650)/9-6-2017/12-30/ಎಲ್‌ಎಂ/ವಿಕೆ**

**ಶ್ರೀ ಆರ್.ವಿ.ದೇಶಪಾಂಡೆ (ಮುಂದು):-** ಆಗ ಅಲ್ಲಿ air craft land ಆಗುತ್ತದೆ. ಅಥವಾ ಅಲ್ಲಿ ಕೆಲವು ಸಲ ಪಾರ್ಕ್ ಮಾಡುತ್ತಾರೆ. ತಾವು ಹೇಳಿದ ಹಾಗೆ coast guard ಮಾಡುತ್ತಾರೆ. ತಾವು cargo facilities ಬಗ್ಗೆ ಹೇಳಿದ್ದೀರಿ. ನಾವು ಅವರಿಗೆ ಪತ್ರವನ್ನು ಬರೆಯುತ್ತೇವೆ. ಅವರು ಒಪ್ಪಿಕೊಂಡರೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ. ಉಡುಪಿ, ಮಂಗಳೂರು ಮಾಡಬೇಕೆಂದು ನಾವು ಪ್ರಸ್ತಾವನೆಯನ್ನು ಕೊಟ್ಟಿರುವುದಿಲ್ಲ. ಅವರು ಹೇಳುವುದು totally feasibility ಬಂದಿಲ್ಲ ಎಂದರೆ ನಾವು ಬೇರೆ ಮಾರ್ಗವನ್ನು ಕಂಡು ಹಿಡಿಯಬೇಕಾಗುತ್ತದೆ, ಏಕೆಂದರೆ ಈಗಾಗಲೇ ಅಲ್ಲಿ International Airport ಇದೆ, ಅಲ್ಲಿ Airport ಅವಶ್ಯಕತೆ ಇದೆ ಎನ್ನುವುದು ಅವರ ಅಭಿಪ್ರಾಯವಾಗಿದೆ. ನಮ್ಮ ಅಭಿಪ್ರಾಯವೂ ಅದೇ ಆಗಿದೆ. ಅದಕ್ಕೆ ಎಲ್ಲರೂ ಸಂಪೂರ್ಣವಾದ ಬೆಂಬಲ, ಸಹಕಾರವನ್ನು ಕೊಡಬೇಕೆಂದು ಕೇಳುತ್ತೇನೆ. ಮೊನ್ನೆ 1ನೇ ತಾರೀಖಿನಂದು ಮೀಟಿಂಗ್ ಆಗಿದೆ. ತಾಂತ್ರಿಕ ಅಭಿಪ್ರಾಯವನ್ನು ಕೊಡಲು ನಾವು ಹೇಳಿದ್ದೇವೆ. ಖಂಡಿತವಾಗಿ ಸರ್ಕಾರದಿಂದ no stone will be left unturned. ಈಗ ಅಲ್ಲಿ Airport ಇದೆ. It is not our concern. But, as a State Government Air Services ಚೆನ್ನಾಗಿ ಬೆಳೆಯಬೇಕು, connectivity ಇರಬೇಕು ಎಂದು ಹಲವಾರು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. We have already spent about Rs. 68 crores. Second runway ಮಾಡಿದರಲ್ಲಾ, ಅದಕ್ಕೆ 68 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. Approach road ಮಾಡುವುದಕ್ಕೆ we have already spent about Rs.10 crores. ಒಂದು ಕಡೆ feasibility is important. ಆದರೆ Airport Authority of India ದವರು ನಮಗೆ ಹೇಳಬೇಕಾಗುತ್ತದೆ. It is their Airport. Technically they are sound people. We have to go by their advice.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ಮಂತ್ರಿಗಳಲ್ಲಿ ಒಂದು ವಿನಂತಿ ಎಂದರೆ, ತಾವು ಹೇಳಿದ ಹಾಗೆ 33 ಎಕರೆ ಏನು land for the critical mandatory

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

requirement for safe landing, ಈ ವಿಚಾರವನ್ನು ತಾವು ಗಂಭೀರವಾಗಿ ತೆಗೆದುಕೊಂಡರೆ, ಉಳಿದಿರುವುದು 4000–6000 ಕೋಟಿ ರೂ.ಗಳು, an alternate airport may take

long time. ಆದರೆ ಈಗ ಅತ್ಯಂತ ಪ್ರಮುಖವಾಗಿ ಆಗಬೇಕಾಗಿರುವುದು, ಆ 33 ಎಕರೆ for this critical development of the runway. ಇದಕ್ಕಾಗಿ ಸರ್ಕಾರ war footing ರೀತಿಯಲ್ಲಿ ಕೆಲಸ ತೆಗೆದುಕೊಳ್ಳಬಹುದಾ? ಇವತ್ತು ನಮಗೆ ಒಂದು advantage ಇದ್ದೆ, ಅದನ್ನು ನಾವು Calicut ಗೆ ಬಿಟ್ಟು ಕೊಡಬಾರದು. ಅದು ಆಗಬೇಕು ಎಂದರೆ ಇದನ್ನು ನಾವು ಅಭಿವೃದ್ಧಿ ಮಾಡಲೇ ಬೇಕಾಗುತ್ತದೆ. ಇದನ್ನು war footing ರೀತಿಯಲ್ಲಿ ತೆಗೆದುಕೊಳ್ಳಲು ಸಾಧ್ಯವಿದೆಯೇ? ಇದಕ್ಕೆ ಸಂಬಂಧಪಟ್ಟ ಹಾಗೆ Airport Authority of India ದವರು airport terminal development ಗಾಗಿ ಕೆಲವೊಂದು ಕೆಲಸಗಳನ್ನು ಮಾಡುತ್ತಿದ್ದಾರೆ. ನಮ್ಮಲ್ಲಿ arrival and departure lounge ಏನಿದೆ ಅದು ಎರಡು ಲೆವೆಲ್‌ಗಳಲ್ಲಿ ಇದೆ. ಒಂದು arrival ಗೆ ಇನ್ನೊಂದು departure ಗೆ ಅದಕ್ಕೆ 125 ಕೋಟಿ ರೂ.ಗಳ ಅಂದಾಜು ತಯಾರಿಸಿಕೊಂಡು ಅದನ್ನು ಅಭಿವೃದ್ಧಿಪಡಿಸಬೇಕು ಎನ್ನುವ ಪ್ರಪೋಸಲ್ ಇಟ್ಟಿದ್ದಾರೆ. ಇವತ್ತು ಅದನ್ನು ಮಾಡದೆ ಇರುವುದರಿಂದ both arrival and departure is in the same level. ಅಲ್ಲಿ ತುಂಬಾ ಟ್ರಾಫಿಕ್ ಜಾಮ್ ಆಗುವುದು, even it is a security hazard. ಇನ್ನು ಅನೇಕ ತೊಂದರೆಗಳಾಗುತ್ತದೆ. ಆ ದೃಷ್ಟಿಯಿಂದ ಅದನ್ನು ವೇಗವಾಗಿ ತೆಗೆದುಕೊಳ್ಳಲು ಸರ್ಕಾರ ಮೇಲೆ ಒತ್ತಡ ಹಾಕಬಹುದು ಎಂದು ಹೇಳಲು ಇಷ್ಟಪಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಸರ್ಕಾರ ಬಜೆಟ್‌ನಲ್ಲಿ 268ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡು ಕೆಲಸವನ್ನು ಮಾಡಬೇಕು ಎಂದು ಘೋಷಣೆ ಮಾಡಿದೆ. ಇದು ಬಹಳ ಸಮಯದಿಂದ ಬಾಕಿ ಇದೆ. ಇವತ್ತು ಇದು ಬಜೆಟ್‌ನಲ್ಲಿ ಬಂದಿದೆ. ನಮಗೆ ಏನು ಆಗಿದೆ ಎಂದರೆ International Airport ಎಂದು declare ಆದ ದಿನದಿಂದ ಇವತ್ತಿನವರೆಗೆ ಅಲ್ಲಿಂದ ಹೋಗುವ ವಿಮಾನಗಳು ಬರಿ ಕೊಲ್ಲಿ ರಾಷ್ಟ್ರಗಳಿಗೆ ಬಿಟ್ಟರೆ ಬೇರೆ ಯಾವುದೇ tourism destination ಗೆ ಹೋಗುತ್ತಿಲ್ಲ. ಹೀಗಾಗಿ every day our traffic is going down.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

Calicut ಮತ್ತು ಕಣ್ಣೂರ್‌ಗಳಲ್ಲಿ ಹೊಸ-ಹೊಸ ವಿಮಾನ ನಿಲ್ದಾಣಗಳು ಬರುತ್ತಿವೆ. Kerala is having four airports. ನಮ್ಮದು International Airport ಎಂದು declare ಆದಮೇಲೆ, ನಮ್ಮ ನೆರೆಯ ಕೇರಳ ಬಹಳ ಚಿಕ್ಕ ರಾಜ್ಯ ಅದು, ಅಲ್ಲಿ ನಾಲ್ಕು International Airport ಗಳಾದವು. ಕಣ್ಣೂರಿನಲ್ಲಿ International Airport ಬಂದರೆ ನಮ್ಮ ಎಲ್ಲಾ ಟ್ರಾಫಿಕ್ ಅಲ್ಲಿ ಹೋಗುತ್ತದೆ. ಆಗ ನಾವು ಸುಮ್ಮನೆ ಬೆಂಗಳೂರು-ಮಂಗಳೂರಗೆ ಮಾತ್ರ ಓಡಾಡುವಂತಹ ಪರಿಸ್ಥಿತಿ ಬರಬಹುದು. Malaysia, Singapore, America, United Kingdomಗೆ ಬೇಕಾದಷ್ಟು ಜನರು ಮಂಗಳೂರಿನಿಂದ ಬಾಂಬೆಗೆ ಹೋಗಿ ಹೋಗುತ್ತಿದ್ದಾರೆ. ನಮಗೆ ಇಲ್ಲಿ ಕೊಡುತ್ತಿಲ್ಲ. ನಾವು ಕೇಳಿದರೆ ಅವರು ದೊಡ್ಡ ವಿಮಾನಗಳನ್ನು ಲ್ಯಾಂಡ್ ಮಾಡಲು ಜಾಗವಿಲ್ಲ, ನಿಮ್ಮ runway ನಲ್ಲಿ ನಾವು ರಿಸ್ಕ್ ತೆಗೆದುಕೊಳ್ಳಲು ತಯಾರಿಲ್ಲ, ನಿಮ್ಮದು table top airport ಇದೆ ಎಂದು ಹೇಳುತ್ತಾರೆ. ಇದನ್ನು ವಿಸ್ತರಣೆ ಮಾಡಿಸಿ ಎಂದರೆ, ಇಲ್ಲ ಆಗುವುದಿಲ್ಲ ನಿಮ್ಮ ಭೂಮಿ ಸರಿಯಾಗಿ ಇಲ್ಲ, 800-900 ಕೋಟಿ ರೂ.ಗಳನ್ನು ಬರಿ ಮಣ್ಣು ತುಂಬಿಸಲು ನಾವು ಖರ್ಚು ಮಾಡಬೇಕಾಗುತ್ತದೆ ಎಂದು ಹೇಳುತ್ತಾರೆ. ಇದೆಲ್ಲವನ್ನು ಮಾಡುವುದು ಸಚಿವರಾದ ಮಾನ್ಯ ಆರ್.ವಿ.ದೇಶಪಾಂಡೆಯವರಿಂದ ಮಾತ್ರ ಸಾಧ್ಯ. ಎಲ್ಲವನ್ನು Airport Authority of India ದವರ ತಲೆ ಮೇಲೆ ಹಾಕಿದರೆ ಖಂಡಿತವಾಗಿ ಇದು ಆಗುವುದಿಲ್ಲ. ಇದಕ್ಕೆ special interest ತೆಗೆದುಕೊಳ್ಳಬೇಕು. ಮತ್ತು ಇದು coastal belt ನಲ್ಲಿ ಇರುವುದರಿಂದ ಈ ವಿಮಾನ ನಿಲ್ದಾಣದಿಂದ ಅನೇಕ ಪ್ರಯೋಜನಗಳು ಇವೆ. ನಮ್ಮಲ್ಲಿ ಬೇಕಾದಷ್ಟು sea ಇದೆ, ಇಂಜಿನೀಯರಿಂಗ್ ಕಾಲೇಜ್‌ಗಳು ಇವೆ, ಎಲ್ಲಾ ಮೂಲಭೂತ ಸೌಲಭ್ಯಗಳು ಇವೆ ಮತ್ತು ಎಲ್ಲದಕ್ಕೂ ಇದು connectivity ಆಗಿದೆ. Traffic ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಏನು ಘೋಷಣೆ ಮಾಡಿದ್ದೀರಿ ಅದನ್ನು ಆದಷ್ಟು ಬೇಗನೆ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಭಾಪತಿಗಳ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಗಳೆ, ಗೌರವಾನ್ವಿತ ಸದಸ್ಯರ concern ನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. Mangalore International Airport ಬಹಳ important connectivity. ಕೋಸ್ಟ್‌ಗೆ, ಪ್ರವಾಸೋದ್ಯಮ ಬೆಳೆಯಲು, ಕೇರಳ ರಾಜ್ಯಕ್ಕೆ ಹೋಗಲು, ವ್ಯಾಪಾರ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗಾರಿಕೆ ಬೆಳೆಯಲು ಇದು ಅವಶ್ಯಕವಾಗಿದೆ. ಇದು Civil Aviation Ministry, Airport Authority of India ಗೆ ಬರುತ್ತದೆ. ಇಲ್ಲಿ ನಾವು ಅಭಿವೃದ್ಧಿ ಮಾಡಿರುವುದು ಅವರ ಅನುಮತಿಯಿಂದ ಮತ್ತು ಅವರ ಸಹಕಾರದಿಂದ ಮಾಡಿರುವುದು. ಈಗ 268 acres of land ಬಗ್ಗೆ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. We will do it on priority. ಆದರೆ Airport Authority ಯವರು ಹೇಳುತ್ತಾರೆ this is a difficult proposal. 1ನೇ ತಾರೀಖಿನಂದು ಸಭೆ ಆಗಿದೆ, Chairman of Airport Authority had come to the meeting. ಅವರೇ presentation ಕೊಟ್ಟಿದ್ದಾರೆ. Four proposals, according to them none of them are feasible. ಅದಕ್ಕಾಗಿ ಆ 33 ಎಕರೆ ಬಗ್ಗೆ ನಾವು ಹೇಳಿರುವುದು, at least you find out some solution for this. ಅದರಿಂದ ಈ critical issues like landing the flights and all. If that could be sorted out. ಅದರ ಮೇಲೆ airport build-up ಮಾಡಲು ಸಾಧ್ಯವಾಗುತ್ತದೆ. ತಾವು terminal ಬಗ್ಗೆ ಹೇಳಿದ್ದೀರಿ. ಅದನ್ನು ಅವರ ಗಮನಕ್ಕೆ ತಂದು, we will try to see that those issues are sorted out. ಕಾರ್ಗೋ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. Ultimately they have to take a decision. ನಾವು suggest ಮಾಡಬಹುದು ಅಷ್ಟೆ. ನಾವು ಸಲಹೆ ಕೊಡುತ್ತೇವೆ and we also want that airport to be developed.

**ಪ್ರಶ್ನೆ ಸಂಖ್ಯೆ:2569**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಭಾನುಪ್ರಕಾಶ:– ಮಾನ್ಯ ಸಭಾಪತಿಗಳೆ,** ಕಳೆದ ಮೂರು ವರ್ಷಗಳಲ್ಲಿ ಮರಳು ಗಣಿಗಾರಿಕೆಯಿಂದ ಬಂದಂತಹ ಹಣ ಎಷ್ಟು ಎನ್ನುವುದಕ್ಕೆ 53,201.32 ಕೋಟಿ ರೂ.ಗಳು ಎಂದು ಉತ್ತರ ಕೊಟ್ಟಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ವಿವಿಧ ಪ್ರಕರಣಗಳಲ್ಲಿ ದಂಡ ವಸೂಲಾಗಿರುವುದು ಎಷ್ಟು ಎನ್ನುವುದಕ್ಕೆ, ಕಳೆದ ಮೂರು ವರ್ಷಗಳಲ್ಲಿ 27,875 ಪ್ರಕರಣಗಳನ್ನು ಪತ್ತೆ ಮಾಡಿದ್ದು, ಒಟ್ಟು 3561.71 ಕೋಟಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂ.ಗಳನ್ನು ಸಂಗ್ರಹ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ವರ್ಷ ಕೇವಲ 6 ಕೋಟಿ ರೂ.ಗಳಷ್ಟು ದಂಡವನ್ನು ಮಾತ್ರ ವಸೂಲಿ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಬರುತ್ತಿರುವುದು, ಅಧಿಕಾರಿಗಳು ಹಿಡಿಯಲು ಹೋಗುತ್ತಿರುವುದು, ಮರಳಿನ ಹಾಹಾಕಾರ ಇದೆಲ್ಲವನ್ನು ನೋಡಿದಾಗ ಈ ದಂಡದ ಪ್ರಕರಣ ಇಷ್ಟು ಕಡಿಮೆ ಇದೆ ಎಂದರೆ, ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕು ಎಂದು ಅನಿಸುತ್ತದೆ. ಮರಳನ್ನು ಇವರು ತಯಾರಿಸುವುದಿಲ್ಲ. ಸರ್ಕಾರದ ಪರವಾಗಿ ಇವರು custodian ಮಾತ್ರ, ಟ್ರಸ್ಟಿಗಳು ಮಾತ್ರ. ಈ ರಾಜ್ಯದ ಬಡವರಿಗೆ ಮತ್ತು ಶ್ರೀಮಂತರಿಗೆ ಇಬ್ಬರಿಗೂ ಸಮಪ್ರಮಾಣದಲ್ಲಿ ಅವರಿಗೆ ಅವಶ್ಯಕತೆ ಇರುವಷ್ಟು ಸಿಗಬೇಕು. ಅವರು ಕಟ್ಟುವಂತಹ ಮನೆಗಳಿಗೆ, ಶೌಚಾಲಯಗಳಿಗೆ ಶ್ರೀಮಂತ ಇರಲಿ, ಬಡವ ಇರಲಿ ಮರಳು ಹಾಕಿ ಕಟ್ಟುತ್ತಾನೆ ಎಂದರೆ ಆ ಪ್ರಕೃತಿದತ್ತವಾದ ಮರಳಿನ ಮೇಲೆ ಎಲ್ಲರಿಗೂ ಸಮಾನವಾದ ಹಕ್ಕು ಇದೆ. ಅದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಡುವುದಷ್ಟೆ ಸರ್ಕಾರದ ಜವಾಬ್ದಾರಿ. ಇದನ್ನು ಈಗ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರನ್ನು ತೆಗೆದುಕೊಂಡಿದ್ದಾರೆ. ಮುಂಚೆ ಇದು ಬೇರೆ-ಬೇರೆ ಇಲಾಖೆಯಲ್ಲಿ ಇತ್ತು. ನಾವು ಬಹಳ ಸಾರಿ ವಿಚಾರಿಸಿದ್ದೇವೆ, ಇವರು ಹರಾಜು ಹಾಕುತ್ತಾರೆ, ಹರಾಜಿನಲ್ಲಿ ಯಾರು ಹೆಚ್ಚು ಬಿಡ್ ಮಾಡುತ್ತಾರೆ ಅವರಿಗೆ ಅಲಾಟ್ ಮಾಡಿಬಿಡುತ್ತಾರೆ. ಹೆಚ್ಚು ಬಿಡ್ ಮಾಡಿದವರು ಇವರು ಸರ್ಕಾರ ಫಿಕ್ಸ್ ಮಾಡಿರುವ ಬೆಲೆಗೆ ಮಾರಾಟ ಮಾಡಬೇಕು ಎನ್ನುವುದು ನಿಯಮ. ಆ ಬ್ಲಾಕ್‌ನಲ್ಲಿ ಅವರು ಬೆಲೆ ನಮೂದಿಸಬೇಕು. ಆದರೆ ಬೆಲೆ ನಮೂದಿಸುವುದಿಲ್ಲ. ಇವತ್ತು ಮರಳಿನ ದರ ಎಷ್ಟು ಇದೆ ಎಂದರೆ ಇಡೀ ರಾಜ್ಯದಲ್ಲಿಯೇ ದೊಡ್ಡ ವಿಷಯವಾಗಿದೆ. ಬಡವನಿಗೆ ಮರಳು ಸಿಗುವುದಿಲ್ಲ. ಇವತ್ತು 20,000 ದಿಂದ 80,000 ದವರೆಗೆ ಮರಳು ಬೆಲೆ ಇದೆ. ಮೂರು ವರ್ಷದಲ್ಲಿ ಮರಳು ಗಣಿಗಾರಿಕೆಯಿಂದ 53,201.32 ಕೋಟಿ ರೂ.ಗಳು ಬಂದಿದೆ ಎಂದು ಹೇಳಿದ್ದಾರೆ. ಸರಾಸರಿ 20,000 ರೂ.ಗಳಾಗಿ ಹಿಡಿದರು, ಒಂದು ಲಕ್ಷ ರೂ.ಗಳಿಗೆ 5 ಲೋಡ್ ಎಂದು ಹೇಳಿದ್ದರು, ಒಂದು ಕೋಟಿ ರೂ.ಗೆ 50 ಲೋಡ್ ಆಗುತ್ತದೆ. ಹೀಗಾದರೆ ಒಂದು ಲಕ್ಷ ಲೋಡ್ ಕೂಡಾ ಇಲ್ಲವೆ? ಒಂದು ಲಕ್ಷ ಲೋಡ್ ಕೂಡಾ ಇಲ್ಲವೆ. ಈ ರೀತಿ ಮಾಡುವುದಕ್ಕಿಂತ ಸರ್ಕಾರ ತೆಗೆದುಕೊಳ್ಳುವುದೆ ಬೇಡ, ಬಿಟ್ಟು ಕೊಟ್ಟುಬಿಡಿ. ಎಲ್ಲರಿಗೂ ಮರಳು ಸಿಗುವಂತೆ ಬೇರೆ-ಬೇರೆ ಕಡೆಗಳಲ್ಲಿ ವ್ಯವಸ್ಥೆ ಮಾಡಲಾಗುತ್ತದೆ ಅದನ್ನು ಮಾಡಲಾದರೂ ವ್ಯವಸ್ಥೆ ಮಾಡಿ. ನನ್ನ ಪ್ರಶ್ನೆ ಏನು ಎಂದರೆ, ಇದರ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ. ಮರಳಿನ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಾ ಹೋದರೆ ಇದಕ್ಕೆ ಕೊನೆ ಇಲ್ಲ. ಇದರ ಬಗ್ಗೆ ಇನ್ನೂ ಅನೇಕ ಸದಸ್ಯರು ತಮ್ಮ ಅನಿಸಿಕೆಗಳನ್ನು ಹೇಳಬಹುದು. ಇದು ಪ್ರಶ್ನೋತ್ತರ ವೇಳೆ ಆಗಿರುವುದರಿಂದ ತಾವು ಅವಕಾಶ ಕೊಡುತ್ತೀರೋ ಇಲ್ಲವೊ ಗೊತ್ತಿಲ್ಲ. ನನ್ನವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂರು ಪ್ರಶ್ನೆಗಳು ಇವೆ, ಮೊದಲನೆಯದು, ಮರಳು ಹರಾಜು ಹಾಕಿದ ಮೇಲೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಯಾವ ಬ್ಲಾಕ್‌ನಲ್ಲಿ ಹರಾಜು ಹಾಕುತ್ತಾರೊ ಅಲ್ಲಿ rate display ಮಾಡಿ, ಇಷ್ಟು cubic feetಗೆ ಇಷ್ಟು ಬೆಲೆ ಎಂದು ನಿಗದಿ ಮಾಡಿದ ಮೇಲೆ ಸಾರಿಗೆ ವ್ಯವಸ್ಥೆ ಬಗ್ಗೆ ವಿಷಯ ಬರುತ್ತದೆ. ಆದರೆ ಯಾರು ಹರಾಜು ಹಾಕಿರುತ್ತಾರೆ ಅವರೆ 50/100 ಲಾರಿಗಳನ್ನು ಇಟ್ಟುಕೊಂಡು ಅದನ್ನು ತಮಗೆ ಬೇಕಾದ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು, ಅರಣ್ಯಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಕಂದಾಯ ಇಲಾಖೆಯವರು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ಮಾಡಿದ್ದಾರೆ. ಈ ಸಮಿತಿಯನ್ನು ಏಕೆ ಮಾಡಿದ್ದಾರೆ ಎಂದರೆ, ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಮಾತ್ರ ಈ ಸಮಿತಿ, ಮರಳು ಕೊಡಲು ಅಲ್ಲ. GPS tracking system ಇದೆ, Forest check post ಗಳು ಇವೆ, Revenue Department check post ಗಳು ಇವೆ, ಪೊಲೀಸ್ ಇಲಾಖೆ ಇದೆ. ಇಷ್ಟೆಲ್ಲಾ ಇದ್ದರೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಏಕೆ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು?

**(651) 09.06.2017 / YL-VK / 12.40**

**ಶ್ರೀ ಭಾನುಪ್ರಕಾಶ (ಮುಂದು):** ಎರಡನೆಯದಾಗಿ GPS tracking system ಮಾಡಬೇಕು. ಮರಳನ್ನು ತೆಗೆದುಕೊಂಡ ಮೇಲೆ ಆ ಮರಳು ಎಲ್ಲಿಗೆ ಸಾಗುತ್ತದೆಂದು monitor ಮಾಡುವುದಕ್ಕೆ ವೈಜ್ಞಾನಿಕವಾದ ವ್ಯವಸ್ಥೆ ಇದೆ. ಜಿಪಿಎಸ್ ವ್ಯವಸ್ಥೆಯನ್ನು ಲಾರಿಗೆ ಕಡ್ಡಾಯವಾಗಿ ಅಳವಡಿಸಲಾಗುತ್ತದೆ. ಆದರೆ, GPS system ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೆಲಸ ಮಾಡಬೇಕಲ್ಲವೇ? ಗಣಕಯಂತ್ರ, ಇತ್ಯಾದಿಗಳಿಗೆ ಸಂಪರ್ಕವೇ ಇಲ್ಲದಂತಾಗಿದೆ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ, ಪೊಲೀಸ್ ನಿಯಂತ್ರಣ ಕೊಠಡಿಯಲ್ಲಿ GPS system ನಿಯಂತ್ರಿಸುವ ವ್ಯವಸ್ಥೆಯೇ ಇಲ್ಲ. ಲಾರಿ ಮಾಲೀಕರು ಮೂರು ಸಾವಿರ, ಐದು ಸಾವಿರವನ್ನು ಖರ್ಚು ಮಾಡಿ, GPS system ಅಳವಡಿಸಿಕೊಂಡಿರುತ್ತಾರೆ. ಹಾಗಾಗಿ, GPS system ಇಲ್ಲದೇ ಇರುವಂತಹ ಲಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಮೂರನೆಯದಾಗಿ, ಎಲ್ಲವೂ ಸರ್ಕಾರಕ್ಕೆ ಒಳಪಡುತ್ತದೆ. ಲೈಸೆನ್ಸ್ ತೆಗೆದುಕೊಳ್ಳುವಂತಹ ಬಡವರು, ಜನತಾ ಮನೆಗೆ, ಮನೆ ಕಟ್ಟುವುದಕ್ಕಾಗಿ ಸಾಮಾನ್ಯ ಜನ ಗ್ರಾಮ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪಂಚಾಯಿತಿಯಲ್ಲಿ ಏನು ಲೈಸೆನ್ಸ್ ತೆಗೆದುಕೊಳ್ಳುತ್ತಾರೆಯೋ ಅಂಥವರಿಗೆ ದಯಮಾಡಿ ಸರ್ಕಾರವೇ ಜನತಾ ಮನೆಗೆ ಹಣವನ್ನು ಒದಗಿಸಬಹುದಲ್ಲವೇ? ಗ್ರಾಮ ಪಂಚಾಯಿತಿಯಲ್ಲಿ ಪರವಾನಗಿಯನ್ನು ತೆಗೆದುಕೊಂಡ ತಕ್ಷಣ ಅವನಿಗೆ ಬೇಕಾದಷ್ಟು ಮರಳನ್ನು ಒದಗಿಸಿ, ಮರಳನ್ನು ಒದಗಿಸಿದ ಮೇಲೆ ಕೊಡುವಂತಹ ಬಿಲ್ಲಿನಲ್ಲಿ ಹಣವನ್ನು ಹಿಡಿದುಕೊಳ್ಳುವ ವ್ಯವಸ್ಥೆಯನ್ನು ಮಾಡಲಿ. ಜನಕ್ಕೆ ಮರಳಿನ ಹಕ್ಕನ್ನು ಕೊಡದೇ, ಮರಳನ್ನು ಹರಾಜು ಹಾಕಿದ್ದರೆ, ಯಾವ ಬಡವ ಹರಾಜಿನಲ್ಲಿ ಮರಳನ್ನು ಪಡೆದುಕೊಳ್ಳುವುದಕ್ಕಾಗುತ್ತದೆ. ಹಣ ಇರುವವರು ಪಡೆದುಕೊಳ್ಳುತ್ತಾರೆ. ಮಾನ್ಯ ಸಚಿವರು custodian ಕೆಲಸ ಮಾಡದೇ, ಮರಳನ್ನು ಯಾರಿಗೋ ಹರಾಜು ಹಾಕುತ್ತಾರೆ. ಮರಳು ಪ್ರಕೃತಿಯದ್ದು, ಮಾನ್ಯ ಸಚಿವರದ್ದಲ್ಲ. ಆ ಪ್ರಕೃತಿಯಲ್ಲಿರತಕ್ಕಂಥ ಮರಳನ್ನು ಯಾರೋ ಒಬ್ಬ ಬಡವ ಹೋಗಿ ಲಾರಿಯಲ್ಲಿ ತುಂಬಿಕೊಂಡು ಬಂದರೆ ಅಥವಾ ಒಂದು ಟಿಲ್ಲರ್ ತುಂಬಿಕೊಂಡು ಬಂದರೆ ಬಂಧಿಸುತ್ತಾರೆ. ಆ ಪ್ರಕೃತಿಯ ವ್ಯವಸ್ಥೆಯಲ್ಲಿ ಮರಳನ್ನು custodian ಆಗಿ ನಿರ್ವಹಿಸುವುದಕ್ಕೆ ಸಚಿವರಿಗೆ ಏನು ತೊಂದರೆ. ಮೂರನೆಯದಾಗಿ ಲೈಸೆನ್ಸ್ ತೆಗೆದುಕೊಂಡ ತಕ್ಷಣ ಮರಳನ್ನು ಕೊಡುವ ವ್ಯವಸ್ಥೆಯನ್ನು ಮಾಡಬಹುದೇ? ಇದು ನನ್ನ ಪ್ರಶ್ನೆ.

**ಶ್ರೀ ವಿನಯ ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈಗಾಗಲೇ ಸಾಕಷ್ಟು ಹಣವು ಸಂಗ್ರಹವಾಗಿದೆ. ತಮ್ಮ ಮುಖಾಂತರ ಹೇಳುವುದಾದರೆ, ಇಷ್ಟು ವರ್ಷ ನಮ್ಮ ಅಡಿಯಲ್ಲಿ ಮರಳು ಇರಲಿಲ್ಲ. ಪಿಡಬ್ಲ್ಯೂಡಿ ಇಲಾಖೆಯವರ ಅಡಿಯಲ್ಲಿತ್ತು. ನಾವು ತೆಗೆದುಕೊಂಡು ಆರು, ಏಳು ತಿಂಗಳಾಗಿದೆ. ಅಂದಿನಿಂದ ಹಳೆಯ ಕಾಯ್ದೆಯನ್ನು ತಿದ್ದುಪಡಿ ಮಾಡಿ, ಹೊಸ ಕಾಯ್ದೆಯನ್ನು ತಂದಿದ್ದೇವೆ. ಏಕೆಂದರೆ, ಇದನ್ನು ಮರಳು ಸಮಿತಿಗೆ ಕೊಟ್ಟು, ಸಮಿತಿಯೂ ಒಂದು ವರದಿಯನ್ನು ಕೊಟ್ಟ ನಂತರ ನಾವು ಹೊಸ ಕಾಯ್ದೆಯನ್ನು ತಿದ್ದುಪಡಿ ಮಾಡಿ, ಕಾಯ್ದೆಯನ್ನು ರೂಪಿಸಿ, ಟೆಂಡರ್ ಮೂಲಕ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಏಕೆಂದರೆ, ಟೆಂಡರ್ ಬೇಡವೆನ್ನುವ ವ್ಯವಸ್ಥೆಯೂ ಇರುತ್ತದೆ. ಸಾಮಾನ್ಯವಾಗಿ ಯಾವ ಪದ್ಧತಿಯಲ್ಲಿ ಮರಳನ್ನು ಕೊಡಬೇಕೆನ್ನುವುದು ಮೊದಲನೆಯದು. ಒಂದು ವೇಳೆ ಯಾವುದಾದರೂ ಪದ್ಧತಿಯಲ್ಲಿ ನಾವು ಮರಳನ್ನು ಕೊಡುವುದಕ್ಕೆ ಹೋದರೆ, ಇದರಲ್ಲಿ ಮಂತ್ರಿಗಳ ಪಾತ್ರ ಏನೋ ಇದೆ. ಮಂತ್ರಿಗಳು ತಮಗೆ ಬೇಕಾದಂತಹವರಿಗೆ ಮರಳನ್ನು ಕೊಟ್ಟಿದ್ದಾರೆ. ಹಣವನ್ನು ಸ್ವೀಕರಿಸಿ ಕೊಟ್ಟಿದ್ದಾರೆಂದು ಹೇಳುತ್ತಾರೆ. ಆಮೇಲೆ ಕೇಂದ್ರ ಸರ್ಕಾರದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

guidelines ಪ್ರಕಾರ ಕೂಡ ಮರಳನ್ನು ಕೊಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರ ಸಹ guidelines ಕೊಟ್ಟಿರುವುದರಿಂದ ಮರಳನ್ನು ಕೊಡದೇ ಇರುವಂತಹ ವ್ಯವಸ್ಥೆ ಬಂದಿದೆ. ಹಾಗಾಗಿ ಪಾರದರ್ಶಕವಾಗಿ ಮಾಡಬೇಕೆಂದರೆ, ಸಹಜವಾಗಿ ಟೆಂಡರ್ ಮುಖಾಂತರ ಕೊಡಬೇಕಾಗುತ್ತದೆ. ಟೆಂಡರ್ ಮಾಡದೇ ಕೊಡುವ ವ್ಯವಸ್ಥೆಯೇ ಇಲ್ಲ. ಈ ವಿಚಾರದ ಬಗ್ಗೆ ಇನ್ನೂ ಹಲವಾರು ಮಂದಿ ಪ್ರಶ್ನೆಯನ್ನು ಕೇಳಬಹುದು. ಅವರು ಪ್ರಶ್ನೆಯನ್ನು ಕೇಳಲಿ. ಏಕೆಂದರೆ, ಹಿಂದಿನಿಂದ ಬಂದಂತಹ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಇವತ್ತಿನ ಮಟ್ಟದವರೆಗೂ ರಾಜ್ಯದಲ್ಲಿ 68 ಬ್ಲಾಕ್‌ಗಳು ಮಾತ್ರ ಪಿಡಬ್ಲ್ಯೂಡಿ ನಲ್ಲಿ ನಡೆಯುತ್ತಿದೆ. ಜೊತೆಗೆ ಟೆಂಡರ್ ಮೂಲಕ ಹೊಸದಾಗಿ 11 ಬ್ಲಾಕ್‌ಗಳು ಮಾತ್ರ ಪ್ರಾರಂಭವಾಗಿದ್ದು, ಇವುಗಳನ್ನು ಬಿಟ್ಟರೆ, ಇನ್ನು 15 ದಿವಸದೊಳಗೆ 222 ಬ್ಲಾಕ್‌ಗಳು ಪ್ರಾರಂಭವಾಗುತ್ತದೆ. ಆಗ ಇದು ಬಹಳ ಕಡಿಮೆಯಾಗುತ್ತದೆ. ಹೊಸ ಪದ್ಧತಿಯನ್ನು ಜಾರಿಗೆ ತಂದ ನಂತರ ತೊಂದರೆಯಾಗಿರುವುದೇನೋ ನಿಜ. ಆದರೆ, ಹದಿನೈದು, ಇಪ್ಪತ್ತು ದಿವಸದೊಳಗೆ ಬಹಳ ಸರಳೀಕರಣವಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮರಳಿನ ಬಗ್ಗೆ ಚರ್ಚೆ ಮಾಡುವುದಾದರೆ ಬೇಡ, ಈಗಾಗಲೇ ಮರಳಿನ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಬರಗಾಲದ ಬಗ್ಗೆ ಚರ್ಚೆ ಮಾಡುವುದಾದರೆ, ಬರಗಾಲದ ವಿಷಯವನ್ನು ತೆಗೆದುಕೊಂಡಾಗ ಮಾತನಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಬರಗಾಲದ ಬಗ್ಗೆ ಅಲ್ಲ. ಒಂದು ನಿಮಿಷ.

**ಸಭಾಪತಿಯವರು:-** ಬರಗಾಲದ ವಿಚಾರವು ಇನ್ನು ಮುಗಿದಿಲ್ಲ. ಮುಂದೆ ಬರಗಾಲದ ಬಗ್ಗೆ ಚರ್ಚೆಯಾಗುತ್ತದೆ. ನೀವು ಮಾತನಾಡುವುದಾದರೆ, ಆಗ ಮಾತನಾಡಿ. ಮಾನ್ಯ ಸದಸ್ಯರು GPS system ಅಳವಡಿಸಬೇಕೆಂದು ಹೇಳಿರುವುದರಿಂದ ಮಾನ್ಯ ಸಚಿವರು ಜಿಪಿಎಸ್ ಹಾಕುತ್ತಾರೆಯೋ, ಇಲ್ಲವೋ ಎಂಬುದರ ಬಗ್ಗೆ ಅಷ್ಟೇ ಹೇಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮುಂದಿನ ಚರ್ಚೆಯಲ್ಲಿಯೇ ಮಾತನಾಡುತ್ತೇನೆ. ಆದರೆ, ಸಚಿವರಿಗೆ ಉಡುಪಿ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿನಯ ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಜಿಪಿಎಸ್ ಹಾಕಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರು ಜಿಪಿಎಸ್ ಅಳವಡಿಸಬೇಕೆಂದು ಹೇಳುತ್ತಿರುವುದರಿಂದ ಜಿಪಿಎಸ್ ಅಳವಡಿಸುವ ಬಗ್ಗೆ ನಿಮ್ಮ ಅಭಿಪ್ರಾಯವೇನೆಂಬುದನ್ನು ತಿಳಿಸಲಿಲ್ಲ.

**ಶ್ರೀ ವಿನಯ ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು ಜಿಪಿಎಸ್ ಅಳವಡಿಸುವ ಬಗ್ಗೆ ಕಾರ್ಯಗತಗೊಳಿಸಿದ್ದೇವೆ. ಮೊದಲನೆಯದಾಗಿ ದಾವಣಗೆರೆ ಜಿಲ್ಲೆಯನ್ನು ಪರೀಕ್ಷಿಸುವುದಕ್ಕಾಗಿ ತೆಗೆದುಕೊಂಡಿದ್ದೇವೆ. ಈಗಾಗಲೇ ಕೆಲಸವೂ ಕೂಡ ಪ್ರಾರಂಭಗೊಂಡಿದೆ. ಇದು ಯಶಸ್ಸುಗೊಂಡ ನಂತರ ಹಾವೇರಿ, ಗದಗ, ಶಿವಮೊಗ್ಗವನ್ನು ತೆಗೆದುಕೊಳ್ಳುತ್ತೇವೆ. ಶಿವಮೊಗ್ಗದಲ್ಲಿಯೂ ನಾಲ್ಕು ಜಿಲ್ಲೆಗೆ ಮಾಹಿತಿಯನ್ನು ನೀಡಿದ್ದೇವೆ. ನಾಲ್ಕು ಜಿಲ್ಲೆಗೆ ಮಾಹಿತಿಯನ್ನು ನೀಡಿ, ಹಣವನ್ನು ಕೂಡ ಇಟ್ಟಿದ್ದೇವೆ. ಮೊಬೈಲ್ ಮುಖಾಂತರ trip sheet ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಮರಳು ವಿತರಣೆಯನ್ನು ಸಹ ಗುಲ್ಬರ್ಗಾ ಆಅ ಯವರಿಗೆ ಕೊಡುತ್ತಿಲ್ಲ..... They have handed over it to Mines and Geology Department...

(ಗೊಂದಲ)

**ಸಭಾಪತಿಯವರು:-** ಮರಳಿನ ಬಗ್ಗೆ ಚರ್ಚೆ ಪ್ರಾರಂಭಿಸಿದ ಮೇಲೆ ಮುಗಿಯುವುದೇ ಇಲ್ಲ. ಇದು ಪ್ರಶ್ನೋತ್ತರ ಅವಧಿಯಾಗಿರುವುದರಿಂದ ನಾನು ಸಚಿವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಬೇರೆ ಯಾರು ಅವಕಾಶವನ್ನು ಕೇಳಬಾರದು. ಮಾನ್ಯ ಕೆ.ಬಿ.ಶಾಣಪ್ಪನವರೆ, ವಿರೋಧ ಪಕ್ಷದ ನಾಯಕರು ಮಾತನಾಡಬೇಕಾದರೆ ನಿಮಗೆ ಅವಕಾಶ ಕೊಡುತ್ತೇನೆ. ಪ್ರಶ್ನೆಯನ್ನು ಕೇಳಿರುವಂತಹವರಿಗೆ ಮಾತನಾಡಲು ಅವಕಾಶ ಕೊಡಬೇಕೇ ಹೊರತು, ಬೇರೆ ಯಾರಿಗೂ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಗಂಭೀರವಾದ ವಿಚಾರ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಆಗುವುದಿಲ್ಲ. ಸಾಧ್ಯವಿಲ್ಲ. ಎಲ್ಲವೂ ಗಂಭೀರವಾದ ವಿಚಾರವೇ? ಯಾವುದು ಗಂಭೀರವಲ್ಲದ ವಿಚಾರವಿಲ್ಲ. 15 ಪ್ರಶ್ನೆಗಳೂ ಗಂಭೀರವಾದುದಾಗಿದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲಾಧಿಕಾರಿಗಳು, ಉಡುಪಿ ಸಹಾಯಕ ಆಯುಕ್ತರವರು ಈ ಮರಳಿನ ಅಕ್ರಮ ದಂಧೆಕೋರರನ್ನು ಹಿಡಿಯುವುದಕ್ಕೆ ಹೋದಾಗ ಗೂಂಡಾಗಳು ಅವರುಗಳನ್ನು ಕೊಲೆ ಮಾಡುವಂತಹ ಪ್ರಯತ್ನ ನಡೆದಿರುವುದು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮೊದಲನೇ ಬಾರಿ. ಜಿಲ್ಲಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರವರೇ ಪೊಲೀಸ್ ಠಾಣೆಗೆ ದೂರು ಕೊಡುವಂತಹ ಪರಿಸ್ಥಿತಿ ಪ್ರಾಮಾಣಿಕ ಅಧಿಕಾರಿಗಳ ಜೀವಕ್ಕೆ ರಕ್ಷಣೆ ಇಲ್ಲದಂತಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮಾನ್ಯ ಕಾಗೋಡು ತಿಮ್ಮಪ್ಪನವರು ಇರಲಿಲ್ಲ. ಇನ್ನೊಂದು ವಿಚಾರ ಎಲ್ಲಾ ಪಕ್ಷದವರು ಸೇರಿಕೊಂಡು ಶಿವಮೊಗ್ಗ ಜಿಲ್ಲಾ ಪಂಚಾಯಿತಿಯಲ್ಲಿ ಮೊನ್ನೆ ಒಂದು ನಿರ್ಣಯವನ್ನು ಮಾಡಿದ್ದಾರೆ. ಉಪ ಆಯುಕ್ತರು ಮತ್ತು ಪೊಲೀಸ್ ಅಧೀಕ್ಷಕರು ಮರಳಿನ ಬಗ್ಗೆ ಚರ್ಚೆ ಮಾಡಬೇಕಾದರೆ ಸಭೆಗೆ ಬಂದಿಲ್ಲ. ಮುಂದಿನ ಬಾರಿ ಉಪ ಆಯುಕ್ತರನ್ನು ಹಾಗೂ ಪೊಲೀಸ್ ಅಧೀಕ್ಷಕರನ್ನು ಕರೆಯಿಸಿ.... ಏಕೆಂದರೆ, ಮಾನ್ಯ ಭಾನುಪ್ರಕಾಶ್‌ರವರು ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಅರಣ್ಯದ ಗೇಟಿನಲ್ಲಿ ಲಾರಿ ಹೋಗುತ್ತಿರುವಂತಹ ಸಂದರ್ಭದಲ್ಲಿ ಚಾಲಕ ಮತ್ತು ನಿರ್ವಾಹಕನಿಗೆ forest ಗೇಟ್‌ನವರು ನಮಸ್ಕಾರವನ್ನು ಮಾಡುತ್ತಾರೆ. ಲಾರಿಯನ್ನು ಪರಿಶೀಲಿಸುವುದನ್ನು ಬಿಟ್ಟು ನಮಸ್ಕಾರವನ್ನು ಮಾಡುತ್ತಾರೆ. ಅನಂತರ ಮುಂದೆ ಹೋಗುತ್ತಿರುವಾಗ ಪೊಲೀಸ್‌ನವರಿಗೆ ಲಾರಿ ಚಾಲಕ ಮತ್ತು ನಿರ್ವಾಹಕ ನಮಸ್ಕಾರವನ್ನು ಮಾಡುತ್ತಾರೆ. ಅಂದರೆ, ಪ್ರಾರಂಭದಿಂದ ಜಿಲ್ಲೆ ದಾಟುವವರೆಗೂ ಮರಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವಂತಹವರಿಗೆ ಫಾರೆಸ್ಟ್ ಸಿಬ್ಬಂದಿ, ಪೊಲೀಸ್‌ನವರು ಎಲ್ಲರೂ ಕೂಡ ಅಕ್ರಮ ಮರಳು ಹೋಗುತ್ತಿರುವುದಕ್ಕೆ ನಮಸ್ಕಾರ ಮಾಡುವಂತಹ ಪರಿಸ್ಥಿತಿ ಇವತ್ತು ಇದೆಯಲ್ಲ. ಇದು ಸಚಿವರ ಗಮನಕ್ಕೆ ಬಂದಿದೆಯೇ? ನೇರವಾಗಿ ಲೂಟಿಯಾಗುತ್ತಿದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯೂ ಮಾನ್ಯ ಸಚಿವರ ಕೈಯಲ್ಲಿ ಬಂದು ಆರು ತಿಂಗಳಾಗಿದೆ. ಅದಕ್ಕೂ ಮೊದಲು ಪಿಡಬ್ಲ್ಯೂಡಿಯವರ ಕೈಯಲ್ಲಿತ್ತು. ಆದರೆ ಈ ಎರಡು ಇಲಾಖೆಯೂ ಕಾಂಗ್ರೆಸ್ ಸರ್ಕಾರದ ಅಧೀನದಲ್ಲಿಯೇ ಬರುತ್ತದೆ. ಸರ್ಕಾರ ಬಂದಾಗಿನಿಂದ 4 ವರ್ಷದಲ್ಲಿ ಮರಳು ಲೂಟಿ... ಸರ್ಕಾರದ ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲ. ಲೂಟಿ ಮಾಡುವಂತಹ ಅಧಿಕಾರಿಗಳು ಸಂಪೂರ್ಣವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಭರ್ತಿ ಮಾಡಿಕೊಂಡು ಕುಳಿತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಮರಳನ್ನು ಸಾಮಾನ್ಯ ಜನರಿಗೆ ಕೊಡಿಸುವ ದಿಕ್ಕಿನಲ್ಲಿ ಸರ್ಕಾರ ಒಂದು ತರಹ ದಿಕ್ಕಿನಲ್ಲಿ ಏನಾದರೂ ನಿಲುವು ತೆಗೆದುಕೊಳ್ಳುತ್ತದೆಯೇ? ಇಡೀ ರಾಜ್ಯದಲ್ಲಿ ಒಂದೇ ಬೆಲೆಯನ್ನು ನಿಗದಿಗೊಳಿಸಿ ಮರಳನ್ನು ಕೊಡುತ್ತೇವೆಂದು ನಿಲುವು ತೆಗೆದುಕೊಳ್ಳುತ್ತದೆಯೇ? ಕಾಂಗ್ರೆಸ್ ಸರ್ಕಾರ ಅನ್ನಭಾಗ್ಯಕ್ಕೆ ಕಡಿಮೆ ಬೆಲೆಯನ್ನು ನಿಗದಿ ಮಾಡಿ ಅಕ್ಕಿ ಕೊಡುತ್ತಾರೆ. ಸೀಮೆ ಎಣ್ಣೆ ಕೊಡುತ್ತಾರೆ. ಎಲ್ಲವನ್ನೂ ಕೊಡುತ್ತಾರೆ. ಹಾಗೆಯೇ ಮರಳಿಗೆ ಒಂದೇ ಬೆಲೆಯನ್ನು ನಿಗದಿ ಮಾಡಲಿ. ಅದರಲ್ಲಿ ಏನು ತಪ್ಪಿದೆ.  ಲೂಟಿ ಮಾಡುವುದಕ್ಕೆ ಅವಕಾಶ ಕೊಡುತ್ತಾರೆ.

**ಶ್ರೀ ವಿನಯ ಕುಲಕರ್ಣಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರೆಲ್ಲರ ಇಚ್ಛೆಯಂತೆ ಮರಳು ಭಾಗ್ಯವೆಂದು ಘೋಷಣೆ ಮಾಡೋಣ ಬಿಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮರಳು ಭಾಗ್ಯವೆಂದು ಮಾಡಲಿ, ಅದರಲ್ಲಿ ಏನು ತಪ್ಪಿದೆ.

**ಸಭಾಪತಿಯವರು:–** ಆಯ್ತು, ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ವಿನಯ ಕುಲಕರ್ಣಿ:–** ಮಾನ್ಯ ಸಭಾಪತಿಯವರೇ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಮರಳು ಭಾಗ್ಯವೆಂದು ಮಾಡಿ ಬಿಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ತಮಾಷೆ ಮಾಡುವುದು ಬೇಡ. ಒಂದೇ ಬೆಲೆಯಲ್ಲಿ ಕೊಡುತ್ತಾರೆಯೇ? ಇಡೀ ರಾಜ್ಯದಲ್ಲಿ ಮರಳು ಲೂಟಿಯಾಗುತ್ತಿದೆ. ಪ್ರಾಮಾಣಿಕ ಅಧಿಕಾರಿಗಳು ಸಾಯುತ್ತಿದ್ದಾರೆ. ಲೂಟಿ ಮಾಡುವ ಅಧಿಕಾರಿಗಳು ಬದುಕುತ್ತಿದ್ದಾರೆ.  ಲೂಟಿ ಮಾಡುವ ಅಧಿಕಾರಿಗಳು ರಾಜಕಾರಣಿಗಳಿಗೆ ಹಣ ಕೊಡಬೇಕೆಂದು ಬಾಯಿ ಬಿಟ್ಟು ಹೇಳುತ್ತಾರೆ.  ಇಂತಹ ಒಂದು ಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಮರಳಿಗೆ, ಜಲ್ಲಿಗೆ ಎಂದೂ ಬಂದಿಲ್ಲ.

**ಶ್ರೀ ವಿನಯ ಕುಲಕರ್ಣಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿದ್ದೇನಲ್ಲಾ...

**ಸಭಾಪತಿಯವರು:–** ಆಯ್ತು ಸಚಿವರೆ, ಉತ್ತರವನ್ನು ಹೇಳಿ.

**ಶ್ರೀ ವಿನಯ ಕುಲಕರ್ಣಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಉಡುಪಿ ಜಿಲ್ಲಾಧಿಕಾರಿಗಳ ಮೇಲೆ ಹಲ್ಲೆಯಾಗಿದೆ ಎನ್ನುವ ವಿಚಾರವನ್ನು ಪ್ರಸ್ತಾಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಅವರ ಮೇಲೆ ಈಗಾಗಲೇ ಪ್ರಕರಣವನ್ನು ದಾಖಲಿಸಲಾಗಿದೆ. ಅವರನ್ನು ಬಂಧಿಸಲಾಗಿದೆ. ಅವರ ವಿರುದ್ಧ ಏನು ಕ್ರಮವನ್ನು ತೆಗೆದುಕೊಳ್ಳಬೇಕು. ಅವೆಲ್ಲಾ ಕ್ರಮವನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಚಾಲಕ ಮತ್ತು ನಿರ್ವಾಹಕರಿಗೆ ಮಾಡುತ್ತಾರೆ. ಆದರೆ, ಅವರ ಹಿಂದೆ ಇರತಕ್ಕಂಥ ವ್ಯಕ್ತಿಗಳು ಯಾರು. ಮರಳು ದಂಧೆ ಮಾಡುತ್ತಿರುವವರ್‍ಯಾರು, ಅವರ ಹಿಂದೆ ಇರತಕ್ಕಂಥ ರಾಜಕಾರಣಿಗಳು ಯಾರು. ಅವರನ್ನು ಬಂಧಿಸಿದ್ದಾರೆಯೇ? ಪಾಷ್ ಲೋಡ್ ಮಾಡತಕ್ಕಂಥ ಅಮಾಯಕರನ್ನು ಬಂಧಿಸುತ್ತಾರೆ.

**ಶ್ರೀ ವಿನಯ ಕುಲಕರ್ಣಿ:–** ಮಾನ್ಯ ಸಭಾಪತಿಯವರೇ, ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ,

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಚಾಲಕ ಮತ್ತು ನಿರ್ವಾಹಕರನ್ನು ಬಂಧಿಸುತ್ತಾರೆ. ಏನು ಪ್ರಯೋಜನ? ಅವರು ಕೂಲಿಗಾಗಿ ಮಾಡುತ್ತಾರೆ. ಆದರೆ ಅವರಿಗೆ ಅನ್ಯಾಯವಾಗಿತ್ತು. ಅವರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

**ಶ್ರೀ ವಿನಯ ಕುಲಕರ್ಣಿ:–** ಮಾನ್ಯ ಸಭಾಪತಿಯವರೇ, ಅವರು ಹೋದಂತಹ ಸಂದರ್ಭದಲ್ಲಿ ಅವರ ಸ್ವಂತ ವಾಹನದಲ್ಲಿ ಹೋಗಲಿಲ್ಲ. ಬಾಡಿಗೆ ವಾಹನದಲ್ಲಿ ಹೋಗಿದ್ದಾರೆ. ಅನಂತರ ನಡೆದ ಘಟನೆಯಂತೂ ನಿಜ. ಆದರೆ, ನಡೆದಂತಹ ಘಟನೆ ಮೇಲೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ.

**ಸಭಾಪತಿಯವರು:–** ಆಯ್ತು, ಬಿಡಿ.

(ಗೊಂದಲ)

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೇ, ನನ್ನ ಇನ್ನೊಂದು ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಉಕಖ್ಖ ಧಿಣಜಟ ಅಳವಡಿಸುತ್ತೇವೆಂದು ಹೇಳಿದ್ದಾರೆ.

**ಸಭಾಪತಿಯವರು:–** ಅದು ಬೇಡ ಮುಂದೆ ಹೇಳಿ.

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೇ, ಈಗ ಜನತಾ ಮನೆ ಮಂಜೂರು ಮಾಡುವುದು ಶಾಸಕರು. ಅದು ಪಂಚಾಯಿತಿಯಲ್ಲಿ ದಾಖಲೆಯಾಗಿರುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ವಿನಯ ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಂತಹ ಸಂದರ್ಭದಲ್ಲಿ ನನಗೆ ಜ್ಞಾಪಕವಾಗಲಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಆಶ್ರಯ ಮನೆಗಳಿಗಾಗಲಿ, ಸರ್ಕಾರಿ ಕೆಲಸಗಳಿಗಾಗಲಿ, ಗ್ರಾಮ ಪಂಚಾಯಿತಿ ಕೆಲಸಗಳಿಗಾಗಲಿ, ಮೊದಲೇ ಹೇಳಿದ ಹಾಗೆ ಬ್ಲಾಕ್ ಮೀಸಲು ಇರಲಿಲ್ಲ. ಈಗ ಬರುವಂತಹ ಸರ್ಕಾರಿ ಕೆಲಸಗಳಿಗೆ ಬ್ಲಾಕ್ ಮೀಸಲು ಮಾಡಿದ್ದೇವೆ. ಬರುವಂತಹ ಪಂಚಾಯಿತಿ ವ್ಯಾಪ್ತಿಯಲ್ಲಿ ಎಷ್ಟು ಬ್ಲಾಕ್ ಆಗಿದೆ ಎಂಬುದನ್ನು ಕೇಳಿ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಒಂದು ಮಾತು. ಶಿವಮೊಗ್ಗದಲ್ಲಿ ಹಾರೋನಹಳ್ಳಿ ಎಂದು ಒಂದು ಜಾಗ ಇದೆ. ಮುಂಚೆ ಮರಳನ್ನು ಪಿಡಬ್ಲ್ಯೂಡಿ ರವರಿಗೆ ಕೊಟ್ಟಿದ್ದರು. ನಂತರ ನೀರಾವರಿ ಇಲಾಖೆಗೆ ವಹಿಸಲಾಗಿತ್ತು. ಆದರೆ, ನೀರಾವರಿ ಇಲಾಖೆಯವರು ತೆಗೆದುಕೊಳ್ಳಲಿಲ್ಲ. ಇವರು ಕೈಬಿಟ್ಟರು ಬೇರೆಯವರೆಲ್ಲರೂ ಅದನ್ನು ಲೂಟಿ ಮಾಡಿದ್ದಾರೆ. ಅಲ್ಲಿರತಕ್ಕಂಥ ಜನರಿಗೆ ಏನೂ ಸಿಗಲಿಲ್ಲ. ಸಚಿವರು ಮೀಸಲು ಮಾಡಿದ್ದೇವೆಂದು ಏನು ಹೇಳುತ್ತಿದ್ದಾರೆ. ಮೀಸಲು ಮಾಡಿದ ಮೇಲೆ ಯಾರು ಹರಾಜು ಹಾಕುತ್ತಾರೆಯೋ, ಸರ್ಕಾರ ಯಾವ ಬೆಲೆಗೆ ಕೊಡುತ್ತದೆ. ಜನತಾ ಮನೆಯವರಿಗೆಲ್ಲಾ ಒಂದು ಬೆಲೆಯನ್ನು ನಿಗದಿ ಮಾಡಬೇಕಲ್ಲವೇ? ಯಾವ ಬೆಲೆಗೆ ಕೊಡುತ್ತಾರೆ. ಆಗ transportation ಯಾರು ತೆಗೆದುಕೊಳ್ಳುತ್ತಾರೆ. ಮಾನ್ಯ ಸಚಿವರ ಹತ್ತಿರ ಪರವಾನಿಗೆ ಇರುತ್ತದೆ. ದಾಖಲೆಗಳಿರುತ್ತದೆ. ಮಾನ್ಯ ಸಚಿವರಿಗೆ ಆ ಜಿಲ್ಲೆಯಲ್ಲಿ ಎಷ್ಟು ಡಿಮ್ಯಾಂಡ್ ಇರುತ್ತದೆ. Decentralised ಮಾಡಿ ಮರಳನ್ನು ಬಡವರಿಗೆ ಒದಗಿಸಲಿ. ಬೇರೆ ಯಾರಿಗೂ ಮರಳನ್ನು ಒದಗಿಸಿ ಎಂದು ನಾನು ಹೇಳುವುದಿಲ್ಲ. ಪರವಾನಿಗೆಯನ್ನು ಯಾರು ತೆಗೆದುಕೊಳ್ಳುತ್ತಾರೆ. ಅವರಿಗೆ ಎಷ್ಟು ಮರಳು ಬೇಕೋ ಅಷ್ಟನ್ನು ಕೊಡುವುದಕ್ಕೆ ಹೇಳಿ.

**ಸಭಾಪತಿಯವರು:-** ಮಾನ್ಯ ಸದಸ್ಯರು ಬಡವರಿಗೆ ಮನೆ ಕಟ್ಟಿ ಕೊಳ್ಳುವುದಕ್ಕೆ ಎಷ್ಟು ಮರಳು ಬೇಕೋ ಅಷ್ಟನ್ನು ಕೊಡಿ ಎಂದು ಹೇಳುತ್ತಿದ್ದಾರೆ.

**(652) 09.06.2017:12-50 ಬಿಎಸ್‌ಡಿ-ಬಿಎನ್‌ಎಸ್**

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಅವರು ಹಿಂದಿನ ಪದ್ಧತಿ ಬಗ್ಗೆ ಹೇಳುತ್ತಿದ್ದು, ಹೊಸ ಕಾಯ್ದೆ ಮಾಡಿದ ನಂತರ ಎಲ್ಲವನ್ನು ಗುರುತು ಮಾಡಿ, ಅವುಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲವನ್ನು ಸರಿಪಡಿಸಿದ್ದೇವೆ. ಇದು ಮೊದಲು ಇರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಇಡೀ ರಾಜ್ಯದಲ್ಲಿ ಮರಳು ಸಾಮಾನ್ಯ ಜನರಿಗೆ ಒಂದು ದರದಲ್ಲಿ ಸಲೀಸಾಗಿ ಸಿಗುವಂತೆ ಮಾಡುತ್ತಾರೆಯೇ?

**ಶ್ರೀ ವಿನಯ್ ಕುಲಕರ್ಣಿ:–** 100% ಕೊಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಹೇಗೆ ಕೊಡುತ್ತಾರೆ? ಮರಳು ಲೂಟಿಯಾಗುತ್ತಿರುವಾಗ ಹೇಗೆ ಕೊಡುತ್ತಾರೆ? ಎಲ್ಲಿ ಕೊಡುತ್ತಿದ್ದಾರೆ? ಹುಚ್ಚುಚ್ಚಾಗಿ ರೂ.60 ಸಾವಿರದಿಂದ ರೂ.1 ಲಕ್ಷದವರೆಗೆ ಒಂದು ಲೋಡ್ ಮಾರಾಟವಾಗುತ್ತಿದೆ? ಇದು ಅವರಿಗೆ ಗೊತ್ತಿದೆಯೇ? ಎಲ್ಲಿದೆ ಅವರ ಪದ್ಧತಿ? ನನ್ನ ಜೊತೆ ಬನ್ನಿ ಒಂದು ಸಾವಿರ ಲೋಡ್ ಮರಳು ಕೊಡಿಸುತ್ತೇನೆ. ಒಂದು ಲಕ್ಷ ರೂಪಾಯಿಗಳ ರೀತಿ ಒಂದು ಸಾವಿರ ಲೋಡ್ ಸಿಗುತ್ತದೆ.

**ಶ್ರೀ ವಿನಯ್ ಕುಲಕರ್ಣಿ:–** ನನ್ನ ಮಾತನ್ನು ಕೇಳಲು ಅವರಿಗೆ ತಾಳ್ಮೆ ಇಲ್ಲ. ಒಂದು ತಿಂಗಳಲ್ಲಿ ಮಾಡುತ್ತೇನೆ ಎಂದು ಹೇಳಿದ್ದೇನೆ.

(ಗೊಂದಲ)

**ಸಭಾಪತಿಯವರು:–** ಮುಂದಿನ ಪ್ರಶ್ನೆಗೆ ಹೋಗೋಣ, ಇದು ಪ್ರಶ್ನೋತ್ತರ ಅವಧಿ.

**(ಈ ಹಂತದಲ್ಲಿ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ಕುಳಿತರು)**

**ಶ್ರೀ ವಿನಯ್ ಕುಲಕರ್ಣಿ:–** ಒಂದು ತಿಂಗಳಲ್ಲಿ ಕೊಡುತ್ತೇನೆ ಎಂದು ಹೇಳಿದ್ದೇನೆ. ನನ್ನ ಉತ್ತರ ಕೇಳಲು ಸೌಜನ್ಯ ಇಲ್ಲ ಎಂದರೆ ಏನು ಹೇಳುವುದಕ್ಕೆ ಆಗುತ್ತದೆ.

**ಡಾ: ಜಿ.ಪರಮೇಶ್ವರ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ಅವಧಿಯಾಗಿದ್ದು, ಇದನ್ನು ಬೇರೆ ರೂಪದಲ್ಲಿ ತಂದು ಚರ್ಚೆಗೆ ತಾವು ಅವಕಾಶ ಮಾಡಿಕೊಡಬಹುದು. ಪ್ರಶ್ನೋತ್ತರ ವೇಳೆಯಲ್ಲಿ ಬಾವಿಗೆ ಬರುವುದು ಅಷ್ಟು ಚೆನ್ನಾಗಿರುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ (ತಮ್ಮ ಸ್ಥಾನದಿಂದ):–** ಪ್ರಶ್ನೆ ಕೇಳಿ ಉತ್ತರ ತೆಗೆದುಕೊಂಡು ಹೋಗುವುದಲ್ಲ, ನಮಗೆ ಸಮಸ್ಯೆ ಪರಿಹಾರ ಆಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಜಿ. ಪರಮೇಶ್ವರ್:-** ಸರಳೀಕರಣ ಮಾಡುತ್ತೇವೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಎಲ್ಲವನ್ನೂ ಚರ್ಚೆ ಮಾಡಬೇಕೆಂದರೆ ಬೇರೆ ರೂಪದಲ್ಲಿ ತೆಗೆದುಕೊಳ್ಳೋಣ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸಾಮಾನ್ಯ ಜನರಿಗೆ ಒಂದೇ ದರದಲ್ಲಿ ಸಿಗುವಂತೆ ಮಾಡಿಕೊಡುತ್ತಾರೆಯೇ? ನಮಗೆ ಇದನ್ನು ಬಿಟ್ಟರೆ ಬೇರೆ ದಾರಿ ಇಲ್ಲ.

(ಗೊಂದಲ)

**ಡಾ: ಜಿ. ಪರಮೇಶ್ವರ್:-** ಈ ರೀತಿ ಮಾಡುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸರಿಹೋಗುವುದಿಲ್ಲ. ಒಂದು ತಿಂಗಳೊಳಗೆ ಎಲ್ಲರಿಗೂ ಅಂದರೆ ಆಶ್ರಯ ಮನೆಗಳನ್ನು ಕಟ್ಟುವವರಿಗೆ, ಸರ್ಕಾರದ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಅವಕಾಶ ಮಾಡಿಕೊಡುತ್ತೇವೆ ಎಂದು ನಿರ್ದಿಷ್ಟವಾಗಿ ಉತ್ತರ ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಇಡೀ ರಾಜ್ಯಕ್ಕೆ ಒಂದೇ ದರವನ್ನು ನಿಗದಿ ಮಾಡುತ್ತಾರೆಯೇ?

**ಡಾ: ಜಿ.ಪರಮೇಶ್ವರ್:-** ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಬಹುದಾಗಿದೆ. ಪ್ರಶ್ನೆ ಒಂದನ್ನು ಕೇಳಿ ಮತ್ತೊಂದಕ್ಕೆ ಉತ್ತರ ಬಯಸುವುದೆಂದರೆ ಸರಿಕಾಣುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಬೇರೆ ರೂಪದಲ್ಲಿ ತೆಗೆದುಕೊಳ್ಳುವುದು ನಂತರ ಇರಲಿ. ಅವರು ಮಾನ್ಯ ಸಭಾನಾಯಕರಿದ್ದು, ಇಡೀ ರಾಜ್ಯದ ಜನರಿಗೆ ನೆಮ್ಮದಿಯಾದ ಉತ್ತರವನ್ನು ಕೊಡಲಿ.

(ಗೊಂದಲ)

**ಡಾ: ಜಿ.ಪರಮೇಶ್ವರ್:-** ನೆಮ್ಮದಿ ಇಲ್ಲದ ಉತ್ತರವನ್ನು ಕೊಡುತ್ತಾರೆಯೇ? ಸುಮ್ಮನೆ ಕೂಗಾಡಿದರೆ ಏನು ಬರುತ್ತದೆ?

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಇಷ್ಟು ದಿನ ಲೋಕೋಪಯೋಗಿ ಅಧೀನದಲ್ಲಿ ವ್ಯವಸ್ಥೆ ಇದ್ದು, ಆ ಸಮಯದಲ್ಲಿ ಸುಮಾರು 200 ಬ್ಲಾಕ್‌ಗಳು ಚಿಣಭಿಣಊಟಿ ಆಗಿದ್ದು, ಅವುಗಳಲ್ಲಿಯೂ ಕೆಲವು ನಡೆಯಲಿಲ್ಲ. ಹಾಗಾಗಿ ಮರಳಿನ ತೊಂದರೆ ಉಂಟಾಗಿತ್ತು. ಈಗಾಗಲೇ 322 ಬ್ಲಾಕ್‌ಗಳನ್ನು ಗುರುತಿಸಿ ಟೆಂಡರ್ ಮುಖಾಂತರ ಮಾಡಿದ್ದು, ಇವುಗಳಲ್ಲಿ 222 ಬ್ಲಾಕ್‌ಗಳು ಕ್ಲಿಯರ್ ಆಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಿಟಡಿಜಚಿಜಥಿ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಂಡಿಂಣಟಿಜ 35 ಬ್ಲಾಕ್‌ಗಳು ಮಾತ್ರ Environment Clearance (ಇ.ಅ.) ಗೆ......

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಟೆಂಡರ್ ಬಗ್ಗೆ ಹೇಳುತ್ತಿದ್ದು, ನನ್ನ ಕೈಯಲ್ಲಿ ಗದಗ್ ಜಿಲ್ಲೆಯ ಟೆಂಡರ್ ಪ್ರಕ್ರಿಯೆಯ ಮಾಹಿತಿ ಇದ್ದು, ಅದರಲ್ಲಿ 'ಬಿಡ್ ಮೊತ್ತವನ್ನು ಏರಿಕೆ ಮಾಡಿದ್ದರಿಂದ ತಿರಸ್ಕರಿಸಲಾಯಿತು' ಎಂದು ಮಾಡಿದ್ದು, ಇದೇ ಹಾವೇರಿ ಜಿಲ್ಲೆಯಲ್ಲಿ ರೂ.3 ಸಾವಿರಕ್ಕೆ ಬಿಡ್ ಕೊಟ್ಟಿದ್ದಾರೆ. ಅಲ್ಲಿಯೂ ಹೆಚ್ಚು ಮಾಡಿದ್ದಾರೆ. ಆದರೆ ಗದಗ್ ಜಿಲ್ಲೆಯಲ್ಲಿ ರೂ.3 ಸಾವಿರಕ್ಕೆ ಹೆಚ್ಚು ಎಂದು ತಿರಸ್ಕಾರ ಮಾಡಿದ್ದಾರೆ. ಃಟಚಿಛಿಞ ಟಚಿ ನಲ್ಲಿ ಇರುವವರನ್ನು ಟೆಂಡರ್‌ನಲ್ಲಿ ಮಾಡಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಹೈಕೋರ್ಟ್ ತೀರ್ಪು ಇದ್ದರೂ ಅವಕಾಶ ಕೊಡುತ್ತಿಲ್ಲ........ ಕೋರ್ಟ್ ಆದೇಶ ಇದ್ದರೂ ಅವರ Earnest Money Deposit (E.M.D.) ಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಇದು ಸರ್ಕಾರದ ವ್ಯವಸ್ಥೆ. ಇದರ ಕಾಪಿ ಅವರಿಗೂ ಕೊಟ್ಟಿಲ್ಲವೇ?

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿಯಲ್ಲಿ ಬಂದಿರುವ ಪ್ರಶ್ನೆಯಾಗಿದ್ದು, ಸುಮಾರು 26 ನಿಮಿಷಗಳ ಕಾಲ ಒಂದೇ ಪ್ರಶ್ನೆ ಬಗ್ಗೆ ಚರ್ಚೆಯಾಗಿದೆ. ಪ್ರಶ್ನೋತ್ತರ ವೇಳೆಯಲ್ಲಿ ಇನ್ನು 5 ನಿಮಿಷ ಕಳೆದರೆ ಎರಡು ಗಂಟೆಗಳ ಚರ್ಚೆಯಾದಂತಾಗುತ್ತದೆ. ಇನ್ನೂ 2 ಪ್ರಶ್ನೆಗಳು ಇದ್ದು, ಆ ಸದಸ್ಯರು ಈ ಪ್ರಶ್ನೆಗೆ 26 ನಿಮಿಷಗಳನ್ನು ಕೊಟ್ಟು ನನ್ನ ಪ್ರಶ್ನೆಗೆ ಮಾತ್ರ ಐದತ್ತು ನಿಮಿಷಗಳನ್ನು ಕೊಡುತ್ತೀರಾ ಎಂದು ಕೇಳಿದರೆ ಅವರಿಗೂ ನಾನು ಇಪ್ಪತ್ತು–ಇಪ್ಪತ್ತೈದು ನಿಮಿಷಗಳ ಕಾಲ ಸಮಯ ಕೊಡಬೇಕಾಗುತ್ತದೆ. ಅಲ್ಲಿಗೆ 2–30ರವರೆಗೂ ಪ್ರಶ್ನೋತ್ತರ ಅವಧಿ ನಡೆಸಬೇಕು ಎಂದು ಸಭೆ ನಿರ್ಣಯ ಮಾಡಿದರೆ ನನ್ನ ಅಭ್ಯಂತರವೇನೂ ಇಲ್ಲ. ಒಂದು ಪ್ರಶ್ನೆ ನಾನು ಎಷ್ಟು ಸಮಯ ನಿಗದಿ ಮಾಡುವುದು? ನನ್ನ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡಲಿ. ರಾಜ್ಯದಲ್ಲಿ ಎಲ್ಲರಿಗೂ ಕೂಡ ಒಂದೇ ದರದಲ್ಲಿ ಯಾವಾಗ ಮರಳನ್ನು ಕೊಡುತ್ತಾರೆ? ಇದನ್ನು ಬಿಟ್ಟು ಬೇರೆನೂ ಕೇಳುವುದಿಲ್ಲ. ಇದನ್ನು ಸರ್ಕಾರ ಕೊಡುತ್ತದೆಯೇ ಮತ್ತು ಯಾವಾಗ ಕೊಡುತ್ತದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದನ್ನು ಬೇರೆ ರೂಪದಲ್ಲಿ ತರುವುದಕ್ಕೆ ಹೇಳಿ, ಇದನ್ನು ಅರ್ಧ ಗಂಟೆ ಚರ್ಚೆಯಲ್ಲಿ ತೆಗೆದುಕೊಳ್ಳಲಿ.

**ಶ್ರೀ ವಿನಯ್ ಕುಲಕರ್ಣಿ:-** ಆಶ್ರಯ ಮನೆ ಜೊತೆ ಸರ್ಕಾರಿ ಕೆಲಸಗಳ ಬಗ್ಗೆ ಕೇಳಿದ್ದು, ಅದಕ್ಕೆ P.W.D. ಯ Schedule of Rates ನ ಪ್ರಕಾರ ಮಾಡುತ್ತಿದ್ದು, ಈ ಮಾಹಿತಿ ಎಲ್ಲಾ ಜಿಲ್ಲಾ ಕಛೇರಿಗಳಿಗೆ ಇದೆ. P.W.D. ಯ Schedule of Rates ಪ್ರಕಾರ ಆಶ್ರಯ ಮನೆಗಳಿಗೆ ಒದಗಿಸುತ್ತಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆಶ್ರಯ ಮನೆ ಬಿಟ್ಟು ಉಳಿದೆಲ್ಲವೂ ಲೂಟಿಯಾಗಬೇಕೆ?

**ಶ್ರೀ ವಿನಯ್ ಕುಲಕರ್ಣಿ:-** ಸರ್ಕಾರಿ ಕೆಲಸಗಳಿಗೂ ಕೂಡ ಖಿಛಿಜಿಜಜಣಟಜ ಠಜಿ ಖಚಿಣಜಢ ನ ಪ್ರಕಾರ ಆಗುತ್ತಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಉಳಿದಿದ್ದೆಲ್ಲವೂ ಲೂಟಿಯಾಗಬೇಕೇ?

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ವಿಪಕ್ಷ ನಾಯಕರು ಸಹನೆಯಿಂದ ಕೇಳಬೇಕು. ನಮ್ಮ ಮಾತನ್ನು ಕೇಳುತ್ತಿಲ್ಲ. ಹೊಸ ಕಾಯ್ದೆ ಮಾಡಿದ ನಂತರ ಇದಕ್ಕೆ ಸಮಯ ತೆಗೆದುಕೊಂಡಿದ್ದು, ಟೆಂಡರ್ ಪ್ರಕ್ರಿಯೆ ಮುಗಿಯಬೇಕು. ನಾವು ಬ್ಲಾಕ್‌ಗಳನ್ನು ಗುರುತು ಮಾಡಿದ್ದೇವೆ. 322 ಬ್ಲಾಕ್‌ಗಳನ್ನು ಗುರುತು ಮಾಡಿದ್ದು, ಇನ್ನೂ 100 ಬ್ಲಾಕ್‌ಗಳಿಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ. ಅದನ್ನು ಕೂಡ ಒಂದು ತಿಂಗಳೊಳಗೆ ಮಾಡುತ್ತೇವೆ. ಹೊಸದಾಗಿ 13 ಬ್ಲಾಕ್‌ಗಳು already ಪ್ರಾರಂಭವಾಗಿವೆ. ಒಂದು ವಾರದಲ್ಲಿ ಹಾವೇರಿಯಲ್ಲಿ 6 ಬ್ಲಾಕ್‌ಗಳು ಪ್ರಾರಂಭವಾಗುತ್ತವೆ. 12 ಎಕರೆಗಿಂತ ಜಾಸ್ತಿ ಇರುವುದಕ್ಕೆ Environment Clearance ಅನ್ನು State Committee ಯವರು ಕೊಡಬೇಕು. ನಮ್ಮಲ್ಲಿ Environmental Impact Assessment Committee ಯ period ಮುಗಿದಿತ್ತು. ಹೊಸ ಸಮಿತಿಯ ರಚನೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿ ಒಂದು ವಾರ ಕಳೆದಿದೆ. ಇನ್ನು 2-3 ದಿನಗಳಲ್ಲಿ ಸಮಿತಿ ರಚನೆಯಾಗುತ್ತದೆ. ಸಮಿತಿಯಲ್ಲಿ clearance ಸಿಕ್ಕಿದರೆ 222 ಬ್ಲಾಕ್‌ಗಳಿಗೆ within 15 days work order ಅನ್ನು ಕೊಡುತ್ತೇವೆ. ಗದಗ್ ಮತ್ತು ದಾವಣಗೆರೆಯಲ್ಲಿ ಮರಳು ಬ್ಲಾಕ್‌ಗಳನ್ನು ರದ್ದುಗೊಳಿಸಿರುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದು, ಒಂದು ಟನ್‌ಗೆ ರೂ.2

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾವಿರಕ್ಕಿಂತ ಹೆಚ್ಚು ಅಂದರೆ ಒಂದು ಟ್ರಕ್‌ಗೆ ಸ್ಥಳದಲ್ಲಿ ರೂ.20 ಸಾವಿರ ಬೀಳುವ ವ್ಯವಸ್ಥೆ ಇದೆ. ದರ ಜಾಸ್ತಿಯಾಗಿದ್ದು, ಸಾಮಾನ್ಯ ಜನರು ಹೇಗೆ ಖರೀದಿ ಮಾಡುತ್ತಾರೆ ಎಂದು ಎಲ್ಲರೂ ಪ್ರಸ್ತಾಪಿಸಿದ್ದಾರೆ. ಒಂದೊಂದು ಬ್ಲಾಕ್‌ನಲ್ಲಿ ಒಂದು ಟನ್‌ಗೆ ರೂ.18 ಸಾವಿರ ಹಾಕಿದ್ದು, ಒಂದು ಟ್ರಕ್‌ಗೆ ರೂ.1.80 ಲಕ್ಷ ಬೀಳುತ್ತದೆ. ಇದನ್ನು ಟೆಂಡರ್‌ನಲ್ಲಿ ಹಾಕಿದ್ದಾರೆ. ಮಾನ್ಯ ಸದಸ್ಯರು ಗದಗ್ ವಿಚಾರ ಪ್ರಸ್ತಾಪಿಸಿದ್ದು, ಅಲ್ಲಿ ಯಾವುದೂ ಐದಾರು ಸಾವಿರಗಳಿಗೆ ಹಾಕಿಲ್ಲ. ಒಂದೊಂದು ಟ್ರಕ್‌ನವರು 15 ರಿಂದ 20 ಟನ್ ಮರಳನ್ನು ಹಾಕುತ್ತಿದ್ದು, 15 ಟನ್‌ಗಳಿಗೆ ರೂ.7,500 ಆಗುತ್ತದೆ. ಇದು viable ಆಗುವುದಿಲ್ಲ. ಆದ್ದರಿಂದ ಹೆಚ್ಚು ದರ ಹಾಕಿರುವುದನ್ನು ರದ್ದುಗೊಳಿಸಿದ್ದೇವೆ. ಒಬ್ಬೊಬ್ಬರ ಟೆಂಡರ್ ರೂ.18 ಸಾವಿರ ಇದ್ದು, ಅದನ್ನು ಹೇಗೆ ತುಂಬಲು ಸಾಧ್ಯವಾಗುತ್ತದೆ ಮತ್ತು ಇದರಿಂದ illegal ಆಗಿ ಮಾಡಲು ಅವಕಾಶ ಕೊಟ್ಟ ಪರಿಸ್ಥಿತಿ ನಿರ್ಮಾಣ ಮಾಡಿದಂತಾಗುತ್ತದೆ. ನಮ್ಮ ಟೆಂಡರ್ ಪ್ರಕ್ರಿಯೆಯಲ್ಲಿ ಅವರು ತೆಗೆದುಕೊಂಡು ನಂತರ illegal ಆಗಿ ಮಾಡುವ ವ್ಯವಸ್ಥೆ ಆಗುತ್ತದೆ. ಇದು ನಮ್ಮ ಗಮನಕ್ಕೆ ಬಂದ ಸಂದರ್ಭದಲ್ಲಿ ಕೆಲವೊಂದು ರದ್ದು ಮಾಡಿದ್ದೇವೆ. ನಿರ್ದಿಷ್ಟವಾದ ಕೇಸ್ ಇದ್ದರೆ ಅದನ್ನು ಪರಿಶೀಲನೆ ಮಾಡಿ ಸರಿಪಡಿಸುವ ಕೆಲಸವನ್ನು ಮಾಡಿಕೊಡುತ್ತೇನೆ. ಏಕೆಂದರೆ ಇದು ಹೊಸ ಪದ್ಧತಿಯಾಗಿದ್ದರಿಂದ ಸಮಯ ತೆಗೆದುಕೊಂಡಿರುವುದು ನಿಜ. ಏಕೆಂದರೆ Environment Clearance ಕೂಡ ಇದ್ದು, ಪರಿಸರವಾದಿಗಳು ಸಾಕಷ್ಟು Court ನಲ್ಲಿ cases ಹಾಕಿ stay ತೆಗೆದುಕೊಂಡು ಬರುತ್ತಾರೆ. Right to Information Act ನ ಅಡಿಯಲ್ಲಿ ಸಾಕಷ್ಟು ಮಂದಿ ಪ್ರತಿಯೊಂದಕ್ಕೂ Court ಗೆ ಹೋಗಿ cases ಹಾಕುತ್ತಾರೆ, ನಮ್ಮ ಇಲಾಖೆಗೂ ಕೋರ್ಟ್‌ಗೆ ಸಮೀಪ ಇರುವಂತೆ ಆಗಿದೆ. ನಮ್ಮ ಇಲಾಖೆಯಲ್ಲಿ ಸರಿಮಾಡುವ ಕೆಲಸದ ಬಗ್ಗೆ ಮಾತನಾಡುವುದು ಸುಲಭ ಎನಿಸಿದರೂ practically ಬಹಳ ಸಮಸ್ಯೆ ಎದುರಿಸುತ್ತಿದ್ದೇವೆ. ಒಂದೊಂದು ಊರಿನಲ್ಲಿಯೂ ಗ್ರಾಮಸ್ಥರು ಒಂದಾಗಿ ಟೆಂಡರ್ ಆಗುವುದಕ್ಕೆ ಮತ್ತು ಮರಳನ್ನು ಎತ್ತುವುದಕ್ಕೆ ಬಿಡುವುದಿಲ್ಲ. ಇಂತಹ ಅನೇಕ ಸಮಸ್ಯೆಗಳು ಇವೆ. ಏಕೆಂದರೆ ಮರಳಿಗೆ ಜಾಸ್ತಿ ದರ ಬಂದಿದ್ದರಿಂದ ಸಹಜವಾಗಿ ತೊಂದರೆಯಾಗಿತ್ತು. ಆದರೆ within one month ಎಲ್ಲಾ ಕಡೆ ಸರಳವಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(653) 09-06-2017 SK-KS (SP) 1.00**

**ಚುಕ್ಕೆ ಗುರುತಿನ ಪ್ರಶ್ನೆ 2641**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿಯ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ 2012ರ ನಂತರ ನಿವೃತ್ತಿ ಹೊಂದಿದಂತಹ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರಕ್ಕೆ ಅನುಮತಿ ಕೊಡಿ ಎಂದು ಪ್ರಶ್ನೆ ಕೇಳಿದ್ದೆನು. ಅವರು ಉತ್ತರ ಕೊಟ್ಟಿರುವುದನ್ನು ನೋಡಿ, ನನಗೆ ಬಹಳ ನಿರಾಸೆಯಾಗಿದೆ.

**ಸಭಾಪತಿಯವರು:-** ಏನು ತಪ್ಪಾಗಿದೆ? ನೀವು ಅದನ್ನು ಓದಬೇಡಿ. What is it you want? ಅವರು ಏನು ಮಾಡಿಲ್ಲ ಮತ್ತು ಅವರು ಏನು ಮಾಡಬೇಕು ಅದನ್ನು ಹೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಸನ್ಮಾನ್ಯ ಸಭಾಪತಿಯವರೇ, ನೀವು ಪ್ರಶ್ನೆ ಕೇಳುವುದಕ್ಕೆ ನನಗೆ allow ಮಾಡುವುದಿಲ್ಲವಲ್ಲ.

**ಸಭಾಪತಿಯವರು:-** ನೀವು ಅದನ್ನು ಓದಬೇಡಿ, ಪ್ರಶ್ನೆಯನ್ನು ಕೇಳಿ. Do not give the details.

**ಶ್ರೀ ಎಸ್.ವ್ಹಿ. ಸಂಕನೂರ:-** ಸನ್ಮಾನ್ಯ ಸಭಾಪತಿಯವರೇ, ಕಳೆದ ಫೆಬ್ರವರಿ ತಿಂಗಳಿನ ಅಧಿವೇಶನದಲ್ಲಿ ಇದೇ ಪ್ರಶ್ನೆ ಕೇಳಿದ್ದೆನು. ಅವರು ಆಗ ಏನು ಉತ್ತರ ಕೊಟ್ಟಿದ್ದರೋ, ಈಗ ಅದೇ ಉತ್ತರವನ್ನು ಕೊಟ್ಟಿದ್ದಾರೆ. ಹುದ್ದೆಗಳನ್ನು ತುಂಬುವುದಕ್ಕೆ ಇಲಾಖೆಯ ಪರಿಶೀಲನೆಯಲ್ಲಿದೆ. ಇವತ್ತು ಅದಕ್ಕೆ addition ಮಾಡಿದ್ದಾರೆ. ಆರ್ಥಿಕ ಇಲಾಖೆಗೆ ಅನುಮತಿಗಾಗಿ ಕಳುಹಿಸಿದ್ದಾರೆಂದು ತಿಳಿದುಕೊಂಡು ನನ್ನ ಪ್ರಶ್ನೆ ಏನೆಂದರೆ, ಈ ಏನು ಹುದ್ದೆಗಳಿವೆಯಲ್ಲಾ, ಈಗಾಗಲೇ ಒಂದು ಬಾರಿ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಂಡ ಹುದ್ದೆಗಳು. ಈ ಅನುಮೋದನೆ ಪಡೆದಂತಹ ಹುದ್ದೆಗಳು ನಿವೃತ್ತಿಯಾದ ನಂತರ ಪುನರ್ ತುಂಬುವುದಕ್ಕೆ ನಾನು ಕೇಳುತ್ತಿದ್ದೇನೆ. ಆರ್ಥಿಕ ಇಲಾಖೆಗೆ ಎರಡನೇ ಬಾರಿ ಅನುಮೋದನೆ ಕೇಳುವ ಅವಶ್ಯಕತೆಯಿಲ್ಲ ಎನ್ನುವುದು ನನ್ನ ಭಾವನೆ. ಒಂದು ಸಲ ಆರ್ಥಿಕ ಇಲಾಖೆಯಿಂದ sanctioned post ತುಂಬಿಕೊಂಡ ನಂತರ ನಿವೃತ್ತಿಯಾಗುತ್ತಾರೆ. ಆ ಹುದ್ದೆಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತುಂಬುವುದಕ್ಕೆ ಎರಡನೇ ಬಾರಿ ಆರ್ಥಿಕ ಇಲಾಖೆಗೆ ಏಕೆ ಕಳುಹಿಸಬೇಕು? ಈ ರೀತಿ ಹಿಂದೆ ಇರಲಿಲ್ಲ. ಒಂದು ಸಲ sanctioned post ನಲ್ಲಿದ್ದವರು ನಿವೃತ್ತಿಯಾದರು ಎಂದರೆ management ನವರು ನಿವೃತ್ತಿಯಾದ ತಕ್ಷಣ ಆ ಹುದ್ದೆಗಳನ್ನು ತುಂಬಿಕೊಳ್ಳುತ್ತಿದ್ದರು. ಆರ್ಥಿಕ ಇಲಾಖೆಯಿಂದ ಎರಡನೇ ಬಾರಿ ಅನುಮೋದನೆ ಪಡೆದುಕೊಳ್ಳುವ ವ್ಯವಸ್ಥೆ ಈ ರೀತಿ ಏಕೆ ಬಂತು? ದಯವಿಟ್ಟು ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

**ಸಭಾಪತಿಯವರು:–** ಉತ್ತರ ಹೇಳಿ.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರಿಸುವುದಾದರೆ, ಬಹಳ ಹಿಂದಿನಿಂದಲೂ ಈ ಪ್ರಕ್ರಿಯೆ ನಡೆದುಕೊಂಡು ಬಂದಿದೆ. ಈ ಹಿಂದೆ 01-01-2007 ರಿಂದ 31-02-2008ರವರೆಗೂ ನಿವೃತ್ತಿ ಅಥವಾ ಮರಣ ಮತ್ತು ರಾಜೀನಾಮೆಯಿಂದಾಗಿ ತೆರವು ಆದಂತಹ ಹುದ್ದೆಗಳನ್ನು ತುಂಬಿಕೊಳ್ಳುವಂತಹ ಅವಕಾಶವನ್ನು ಮಾಡಿಕೊಡುತ್ತೇವೆ. ಈಗ ನಾವು 31-12-2012 ರವರಿಗೂ ಅವಕಾಶ ಮಾಡಿಕೊಟ್ಟಿದ್ದೇವೆ. ಸುಮಾರು 2751 ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಆರ್ಥಿಕ ಇಲಾಖೆಯವರಿಗೆ ಕಳುಹಿಸಿರುವಂತಹದ್ದು, ಏಕೆಂದರೆ ಆಗ ನೇಮಕವಾಗಿದ್ದ ವೇತನ ಶೈಲಿ ಮತ್ತು ಇವತ್ತು ನಾವು ಅನುದಾನಕ್ಕೆ ಒಳಪಡಿಸಿಕೊಳ್ಳಬೇಕಾದರೆ, ಆ ವೇತನ ಶೈಲಿ ಏನಿದೆ? ಅದನ್ನು ಅನುಮೋದನೆ ಪಡೆಯುವುದು ಆರ್ಥಿಕ ಇಲಾಖೆಯವರಿಂದ ಅನಿವಾರ್ಯವಾಗಿರುತ್ತದೆ. ಆದ್ದರಿಂದ, ಈಗಾಗಲೇ 2014 ರವರಿಗೂ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೇ 2015 ರವರೆಗೆ ಮಾಡಬೇಕು ಎಂದು ಹೇಳಿದ್ದಾರೆ. ಅವುಗಳನ್ನು ಈಗಾಗಲೇ ಎಷ್ಟು ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ನಾವು ಕಳೆದ ಬಾರಿ ಕೊಟ್ಟಿರುತ್ತೇವೆ. ಸುಮಾರು 1334 ಹುದ್ದೆಗಳಲ್ಲಿ 1159 ಖಾಲಿ ಹುದ್ದೆಗಳನ್ನು ತುಂಬಿಕೊಂಡು, ಇನ್ನು 175 ಹುದ್ದೆಗಳು ಆ ಮಾನದಂಡಗಳನ್ನು ಇನ್ನು ಪೂರೈಸುವುದಕ್ಕೆ ಸಾಧ್ಯವಾಗದೇ ಇರುವುದರಿಂದ ನಾವು ಆ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಆಗಿಲ್ಲ. ಆ ಕಾರಣದಿಂದ ಈಗ ನಾವು 2751 ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ದಿನಾಂಕ 31-12-2014 ರವರಗೂ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಅದನ್ನು ಪಡೆದು ನಾನು ಆದೇಶವನ್ನು ಮಾಡುವುದಕ್ಕೆ ಮುಂದಾಗುತ್ತೇನೆ.

**ಶ್ರೀ ಎಸ್.ವಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಕಳೆದ ಐದು ವರ್ಷಗಳಿಂದ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೊಟ್ಟಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಇದು ಏನು ಸಾರ್? ನೋಡಿ ಪ್ರತಿ ಸಲ ಇದು ಪರಿಶೀಲನೆಯಲ್ಲಿದೆ.

**ಸಭಾಪತಿಯವರು:–** ಏನು ಮಾಡಬೇಕೆಂದು ಹೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಅವರು ಯಾವಾಗ ಮಾಡುತ್ತಾರೆ ಎಂದು ಹೇಳಲಿ.

**ಸಭಾಪತಿಯವರು:–**ಅವರು ಹೇಳುತ್ತಾರೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಇದು ಐದು ವರ್ಷಗಳಾಗಿದೆ.

**ಸಭಾಪತಿಯವರು:–** ನಿಮಗೆ ಏನು ಬೇಕು ಎಂದು ಹೇಳುವುದಿಲ್ಲ. What is it you want? ಅದನ್ನು ಹೇಳಿ. ಯಾವಾಗಾ ತುಂಬುತ್ತೀರಾ? ಐದು ವರ್ಷಗಳಾದರೂ ಆ ಹುದ್ದೆಗಳನ್ನು ತುಂಬಲಿಲ್ಲ ಎಂದು ಅವರು ಕೇಳುತ್ತಿದ್ದಾರೆ.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ಹೌದು.

**ಸಭಾಪತಿಯವರು:–** ನನಗೆ ಬಹಳ ನೋವಾಗಿದೆ. ಯಾವಾಗ ಹುದ್ದೆಗಳನ್ನು ಭರ್ತಿ ಮಾಡುತ್ತೀರಾ? ಅದನ್ನು ಹೇಳಿ.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ಪದವಿ ಪೂರ್ವ ಇಲಾಖೆಯಲ್ಲಿ ಕೂಡ 2012ರವರೆಗೂ ನಾವು ಸೀಮಿತಗೊಳಿಸಿದ್ದೇವೆ. ನಾನು ಬಂದ ಮೇಲೆ ಇದೇ ಸದನದಲ್ಲಿ ಅವರ ಪ್ರಶ್ನೆಗೆ ಉತ್ತರಕೊಟ್ಟು, 31–12–2015 ರವರೆಗೆ ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಈಗಾಗಲೇ ಆದೇಶವನ್ನು ಹೊರಡಿಸಿದ್ದೇನೆ. ಪ್ರೌಢ ಶಾಲಾ ವಿಭಾಗದಲ್ಲಿ ಹುದ್ದೆಗಳು ಹೆಚ್ಚಾಗಿರುವುದರಿಂದ 31–12–2014ರವರೆಗೂ ನಾವು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ನಾನು ಖಂಡಿತವಾಗಿಯೂ, ಇನ್ನು ಹದಿನೈದು ದಿವಸದೊಳಗಾಗಿ ಆದೇಶವನ್ನು ಹೊರಡಿಸುತ್ತೇನೆ.

**ಸಭಾಪತಿಯವರು:–** ಎರಡೂ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ 3000 ಹುದ್ದೆಗಳು ಖಾಲಿ ಇವೆ. ಸರ್ಕಾರದ ಗುರಿ ಮತ್ತು ಉದ್ದೇಶವೇನೆಂದರೆ ಗುಣಮಟ್ಟದ ಶಿಕ್ಷಣ ಕೊಡಬೇಕು. ಖಾಸಗಿ ಅನುದಾನಿತ ಶಾಲೆಗಳೊಳಗೆ ಇಷ್ಟು ಹುದ್ದೆಗಳನ್ನು ಖಾಲಿಯಿಟ್ಟುಕೊಂಡು, 2014ರ ಪ್ರಕಾರ ಇವರೇ ಲೆಕ್ಕ ಮಾಡಿದ ಪ್ರಕಾರ 2751 ಖಾಲಿ ಹುದ್ದೆಗಳು ಇವತ್ತು ಇವರಿಗೆ ಜಾಸ್ತಿಯಾಗಿದೆ. ಇಷ್ಟು ಖಾಲಿ ಹುದ್ದೆಗಳಿದ್ದು, ಇನ್ನು ಗುಣಮಟ್ಟದ ಶಿಕ್ಷಣ ಕೊಡುವುದಕ್ಕೆ ಸಾಧ್ಯತೆವಿದೆಯೇ ಸಾರ್? ಇವರು ಏಕೆ ವಿಳಂಬ ಮಾಡುತ್ತಿದ್ದಾರೆ. ಉಪನ್ಯಾಸಕರ ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೊಟ್ಟಿದ್ದಾರೆ ನಾವು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ. PUC ಗೆ permission ಕೊಟ್ಟಿದ್ದಾರೆ ಮತ್ತು ಆದರಂತೆ ಹೈಸ್ಕೂಲ್‌ಗಳಿಗೆ ಏಕೆ ಕೊಡುವುದಿಲ್ಲ?

**ಸಭಾಪತಿಯವರು:–** ಅವರು ಹೈಸ್ಕೂಲ್‌ಗಳಿಗೆ ಏಕೆ ಕೊಡುವುದಿಲ್ಲ ಎಂದು ಕೇಳುತ್ತಿದ್ದಾರೆ.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ಇದು ಹೈಸ್ಕೂಲ್‌ನ ಪ್ರಶ್ನೆ. ನಾವು ಕೊಡುತ್ತೇವೆಂದು ಹೇಳುತ್ತಿದ್ದೇವೆ.

**ಸಭಾಪತಿಯವರು:–** ಅವರು ಕೊಡುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಅವರು ಯಾವಾಗ ಕೊಡುತ್ತೇವೆಂದು ಹೇಳುತ್ತಿದ್ದಾರೆ.

**ಸಭಾಪತಿಯವರು:–**ಅವರು ಖಾಲಿಯಾಗಿರುವ date ಅನ್ನು ಹೇಳಿದ್ದಾರೆ.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ 31–12–2014 ರ ವರೆಗೂ ನಾವು ಈಗಾಗಲೇ ಏನು ಲೆಕ್ಕ ಹಾಕಿದ್ದೇವೆ. ಅದರ ಪ್ರಕಾರ ಪ್ರಸ್ತಾವನೆಯ ಮಂಜೂರು ಪಡೆದು, ನಾವು ಆದೇಶವನ್ನು ಹೊರಡಿಸುವುದಕ್ಕೆ ಮುಂದಾಗುತ್ತೇವೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಇನ್ನು ಯಾವಾಗ ಮಾಡುತ್ತೀರಾ ಎಂದು ಹೇಳಿಬಿಡಿ.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ಇನ್ನು ಹದಿನೈದು ದಿವಸದೊಳಗಾಗಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಇನ್ನು ಹದಿನೈದು ದಿವಸದೊಳಗಾಗಿ ಮಾಡುತ್ತಾರೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಸನ್ಮಾನ್ಯ ಸಭಾಪತಿಯವರೇ, ಇನ್ನು ಒಂದು ಪ್ರಶ್ನೆಯಿದೆ.

**ಸಭಾಪತಿಯವರು:-** ಬೇಗ ಕೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಸನ್ಮಾನ್ಯ ಸಭಾಪತಿಯವರೇ, ಈಗ 2012ರೊಳಗೆ ಸರ್ಕಾರ 1334 ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೊಟ್ಟಿತ್ತು. ಸುಮಾರು 1334ರ ಹುದ್ದೆಗಳೊಳಗೆ ಆಡಳಿತ ಮಂಡಳಿಯವರು ಇನ್ನು ಕೂಡ 175 ಹುದ್ದೆಗಳನ್ನು ತುಂಬಿಲ್ಲ. ನನ್ನ ವಿನಂತಿ ಏನೆಂದರೆ, ಈ 175 ಹುದ್ದೆಗಳಿಗೆ ಆರ್ಥಿಕ ಇಲಾಖೆಯವರು ಒಪ್ಪಿಗೆ ಕೊಟ್ಟಿದ್ದಾರಲ್ಲ ಅವುಗಳನ್ನಾದರೂ ತುಂಬುವುದಕ್ಕೆ ಅನುಮತಿ ಕೊಡಿ.

**ಸಭಾಪತಿಯವರು:-** ಹೇಳುತ್ತಾರೆ.

**ಶ್ರೀ ತನ್ವೀರ್ ಸೇಠ್:-** ಸನ್ಮಾನ್ಯ ಸಭಾಪತಿಯವರೇ, ನಮ್ಮ Grant-in-Aid Policy ಅಡಿಯಲ್ಲಿ ಹುದ್ದೆಗಳು ಖಾಲಿಯಾಗಿರುವುದು ನಿಜ. ಅದನ್ನು ತುಂಬಿಕೊಳ್ಳುವುದಕ್ಕೆ ಸರ್ಕಾರ ಪ್ರತಿ ಸಂದರ್ಭದಲ್ಲಿಯೂ ವಿಸ್ತರಣೆ ಮಾಡಿ, ಆ ಅವಧಿಯಲ್ಲಿ ಬರುವಂತಹ ಹುದ್ದೆಗಳನ್ನು ತುಂಬಿಕೊಂಡು ಬರುತ್ತೇವೆ. ಈಗ ಅಲ್ಲಿ ಮಕ್ಕಳ ಸಂಖ್ಯೆಗಳಾಗಿರಬಹುದು, ಫಲಿತಾಂಶಗಳಾಗಿರಬಹುದು, ಈ management ಗಳು ಬದಲಾವಣೆಯಾಗಿರುವಂತಹದ್ದು ಮತ್ತು ಅನೇಕ ತೊಂದರೆಗಳಿರುತ್ತವೆ. ಅವುಗಳನ್ನು ಸರಿಪಡಿಸಿಕೊಳ್ಳುವಂತಹದ್ದನ್ನು ನನ್ನ ವ್ಯಾಪ್ತಿಗೆ ಬಂದಿರುವುದನ್ನು, ಯಾವತ್ತು ಇವತ್ತಿನವರೆಗೂ ನಾವು ತಡ ಮಾಡಿಲ್ಲ. ಹೀಗಾಗಿ ಯಾವ ಯಾವ ನ್ಯೂನತೆಗಳಿವೆ? ನಮ್ಮ ಆಡಳಿತ ಮಂಡಳಿಯವರು ಕೊಡಬೇಕಾಗಿರುವ ಪೂರ್ಣ ಮಾಹಿತಿಯನ್ನು ಕೊಟ್ಟಾಗ, ಸರ್ಕಾರ ಅದರ ಮೇಲೆ ಕ್ರಮ ತೆಗೆದುಕೊಂಡು ಮಂಜೂರು ಮಾಡುತ್ತದೆ.

**ಸಭಾಪತಿಯವರು:-** ಆ 175 ಹುದ್ದೆಗಳನ್ನು ಏನು ಮಾಡುತ್ತೀರಿ ಎಂದು ಕೇಳುತ್ತಾರೆ.

**ಶ್ರೀ ತನ್ವೀರ್ ಸೇಠ್:-** ಸನ್ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಪ್ರಸ್ತಾವನೆ ಬಂದಾಗ ಮಾಡುತ್ತೇವೆ.

**ಸಭಾಪತಿಯವರು:-** ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಸಾರ್.

**ಸಭಾಪತಿಯವರು:–** ಆ 175 ಹುದ್ದೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಈಗ sanctioned ಆದ 1334 ಹುದ್ದೆಗಳಲ್ಲಿ 174 ಉಳಿದಿವೆ. ಅವುಗಳನ್ನು ಕೊಟ್ಟುಬಿಡಿ. ಎಲ್ಲಿ ಸಂಖ್ಯೆ ಇದೆ? ಎಲ್ಲಿ work load ಇದೆ? ಅವರಿಗೆ ಕೊಡಿ ಸಾರ್.

**ಸಭಾಪತಿಯವರು:–** ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ ಮತ್ತೆ ಆರ್ಥಿಕ ಇಲಾಖೆಯವರು permission ಅವಶ್ಯಕತೆ ಇಲ್ಲ.

**(ಗೊಂದಲ)**

**ಕ್ಯಾಪ್ಟನ್ ಗಣೇಶ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಏನಾದರೂ ಸಮಸ್ಯೆಯಿದ್ದರೆ, ಅದು ಬೇರೆ ಅಲ್ಲ. . . .

**ಸಭಾಪತಿಯವರು:–** ಅವರು ಕೊಡುತ್ತೇವೆಂದು ಹೇಳಿದರು. ನೀವು ಕೇಳಿಸಿಕೊಳ್ಳಲಿಲ್ಲ. ಅದನ್ನಾದರೂ clear ಮಾಡುತ್ತೇವೆಂದು ಹೇಳಿದರು.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ನಾವು 1334 ಹುದ್ದೆಗಳನ್ನು ತುಂಬಲು ಅನುಮತಿ ಕೊಟ್ಟಿದ್ದೇವೆ. ನಮ್ಮ ಇಲಾಖೆಯಿಂದ ಈಗಾಗಲೇ ಬಂದಂತಹ 1559 ಹುದ್ದೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಈಗಾಗಲೇ ಅವರೆಲ್ಲಾ ಕಾರ್ಯ ನಿರ್ವಹಿಸುತ್ತಿದ್ದಾರೆ. 175 ಹುದ್ದೆಗಳು ಆಡಳಿತ ಮಂಡಳಿಗಳು ನಮಗೆ ಕೊಡಬೇಕಾಗಿರುವಂತಹ ಪೂರ್ಣ ಮಾಹಿತಿಗಳು ಸರಿಯಾಗಿ ಕೊಡದೇ ಇರುವುದರಿಂದ. . .

**ಸಭಾಪತಿಯವರು:–** ಕೊಟ್ಟ ತಕ್ಷಣ ಕೊಡುತ್ತೀರಾ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೇ, ಬಂದಂತಹ ಸಂದರ್ಭದಲ್ಲಿ, ಈಗಾಗಲೇ ನಾವು ಮಂಜೂರಾತಿ ಕೊಟ್ಟಿದ್ದೇವೆ.

**ಶ್ರೀ ಅರುಣ ಶಹಾಪೂರ:–**ಸನ್ಮಾನ್ಯ ಸಭಾಪತಿಯವರೇ ನನ್ನದು ಒಂದು ವಿವರಣೆಯನ್ನು ಕೊಡುತ್ತೇನೆ. ಮಾನ್ಯ ಸಚಿವರು ಒಂದು ವಿಷಯವನ್ನು ಕೇಳಿ. ನೀವು ರಾಜ್ಯ ಮಟ್ಟದಲ್ಲಿ ಕೊಟ್ಟಿರುವುದ್ದರ ಬಗ್ಗೆ ಲೆಕ್ಕ ಹಾಕಿ ಹೇಳುತ್ತಿದ್ದೀರಿ. ಧಾರವಾಢ ವಿಭಾಗದಲ್ಲಿ ಏನು ಸಮಸ್ಯೆಯಾಗಿದೆ ಎಂದರೆ ತಾವು 811 ಹುದ್ದೆಗಳನ್ನು ಕೊಟ್ಟಿದ್ದೀರಿ. ಅದರಲ್ಲಿ 427 ಹುದ್ದೆಗಳು ಮೊದಲನೇಯ ಕಂತಿನಲ್ಲಿ ಅವರಿಗೆ ತುಂಬಿಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಇನ್ನು 374 ಹುದ್ದೆಗಳು ನೀವು ಕೊಡದೇ ಇರುವ ಕಾರಣಕ್ಕಾಗಿ, ಅಲ್ಲಿ ಪ್ರಸ್ತಾವನೆ ಬಂದರೂ ಕೂಡ ಸರ್ಕಾರದಿಂದ ಅನುಮತಿಯಿಲ್ಲ ಎಂದು pending ಬಿದ್ದಿದೆ.

**ಸಭಾಪತಿಯವರು:–** ಅದು ಏನು ನೋಡಿ.

**ಶ್ರೀ ಅರುಣ ಶಹಾಪೂರ:–**ಸನ್ಮಾನ್ಯ ಸಭಾಪತಿಯವರೇ, ಇದು ಒಂದು. ನೀವು ಎರಡನೇ ಸಂಗತಿಯಲ್ಲಿ ಏನು ಹೇಳಿದ್ದೀರಾ ಎಂದರೆ ನನಗೆ ಆತಂಕದ ವಿಷಯವಿದೆ ಸಾರ್. ಇಲ್ಲಿ clarify ಮಾಡಬೇಕು. ಹದಿನೈದು ದಿವಸದೊಳಗ್ಗಾಗಿ ಕೊಡುತ್ತೇವೆಂದು ಒಂದು ಕಡೆ ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅವರ ಉತ್ತರದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳ ಶಿಕ್ಷಕರ ಕಾರ್ಯಭಾರವನ್ನು ಪುನರಾವಲೋಕಿಸಬೇಕಾಗಿರುವುದರಿಂದ ಅಂದರೆ work load re-define ಮಾಡುತ್ತೇವೆಂದು ಹೇಳಿದ್ದಾರೆ.

**ಸಭಾಪತಿಯವರು:–** ಅದು ಬೇರೆಯದು.

**ಶ್ರೀ ಅರುಣ ಶಹಾಪೂರ:–**ಸನ್ಮಾನ್ಯ ಸಭಾಪತಿಯವರೇ, ಇದೇ ಉತ್ತರದಲ್ಲಿ ಹಾಗಾದರೆ re-define ಮಾಡುತ್ತೇವೆಂದು . . .

**ಸಭಾಪತಿಯವರು:–** ಅದು ಬೇರೆಯದು ಈ 175 ಅಲ್ಲ.

**ಶ್ರೀ ಅರುಣ ಶಹಾಪೂರ:–**ಸನ್ಮಾನ್ಯ ಸಭಾಪತಿಯವರೇ, ಎರಡಕ್ಕೂ ಉತ್ತರ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್:-** ಸನ್ಮಾನ್ಯ ಸಭಾಪತಿಯವರೇ, ನಾವು Grant-in-Aid Policy ಏನು ಮಾಡಿಕೊಂಡಿದ್ದೇವೆ it is related to the Work load. ನಾವು ಸರ್ಕಾರದ ಸಿಬ್ಬಂದಿಗಳಾಗಿರಬಹುದು, Grant-in-Aid Policy ಸಿಬ್ಬಂದಿಗಳಾಗಿರಬಹುದು...

**(654) 9.06.17, 1.10, TCH/KS(SP)**

**ಶ್ರೀ ತನ್ವೀರ್ ಸೇಠ್ (ಮುಂದು):-** ಮಾನ್ಯ ಸಭಾಪತಿಯವರೆ, ಇದನ್ನು workload ಆಧಾರದ ಮೇಲೆ ಮಾಡುವಂಥದ್ದಾಗಿರುತ್ತದೆ. ಈ ಹಿಂದೆ ನಮ್ಮಲ್ಲಿ ಏನಾಗಿತ್ತು ಎಂದರೆ workload ಇಲ್ಲವೆಂದರೆ, ಆ ಹುದ್ದೆಯನ್ನೇ ನಾವು ತೆಗೆಸಿಬಿಡುತ್ತಿದ್ದೆವು. ಆದರೆ ಈಗ ನಾವು ಏನು ಮಾಡಿದ್ದೇವೆಂದರೆ, ಅದರ ಜೊತೆಗೆ ಇರುವಂತಹ workload divide ಮಾಡುವಂತಹ ಪದ್ಧತಿಗೂ ನಮ್ಮ ಸದಸ್ಯರ ಜೊತೆಗೆ ಚರ್ಚೆ ಮಾಡಿದ್ದೇವೆ. ಅದನ್ನು ಅನೇಕ ಕಡೆ ಮಾಡಿಕೊಂಡು ಬರುತ್ತಿದ್ದೇವೆ. ಕೆಲವು ಕಡೆ ಆ Grant-in-Aid ಸಂಸ್ಥೆ ಮತ್ತು ಸರ್ಕಾರಿ ಸಂಸ್ಥೆಯಲ್ಲೂ ಬೋಧನೆ ಮಾಡುವಂತಹ ವಿಧಾನವನ್ನು ಮಾಡಿಕೊಟ್ಟಿದ್ದೇವೆ. Re-define ಮಾಡುವುದು ಅಗತ್ಯವಿದೆ. ಎರಡನೆಯದಾಗಿ, ನಮಗೆ ಪ್ರೌಢಶಾಲಾ ವಿಭಾಗದಲ್ಲಿ ಆದಂತಹ ಸಮಸ್ಯೆ ಏನೆಂದರೆ, 2003ರಲ್ಲಿ ನಮ್ಮ ವೃಂದ ಮತ್ತು ನೇಮಕಾತಿಯ ಏನು ಒಂದು ನಿಯಮ ಇತ್ತು. ಧಾರವಾಡ ಉಚ್ಚ ನ್ಯಾಯಾಲಯ ಸಂಪೂರ್ಣವಾಗಿ ಅದನ್ನು quash ಮಾಡಿತ್ತು. ಆ ಕಾರಣದಿಂದ ನಾವು ಸೆಪ್ಟೆಂಬರ್ 2016ರಲ್ಲಿ ಹೊಸ C&R (Cadre and Recruitment) Rules ಏನನ್ನು ಮಾಡಿದ್ದೇವೆ ಅದರ ಅಡಿಯಲ್ಲಿ ನಾವೇನು ಮಾಡಬೇಕಾಗಿದೆ ಆ ಕಾರಣದಿಂದ ಸ್ವಲ್ಪ ವಿಳಂಬವಾಗಿರುವಂಥದ್ದು ನಿಜ. ಹಾಗಾಗಿ, ನಾವು ಏನು ಈ ಹುದ್ದೆಗಳನ್ನು ತುಂಬಿಕೊಳ್ಳುವಂತಹ ಬದ್ಧತೆ ಇದೆ ಅದನ್ನು ನಾವು ಮಾಡುತ್ತೇವೆ ಎಂಬುದನ್ನು ಈಗಾಗಲೇ ಪ್ರಕಟ ಮಾಡಿದ್ದೇವೆ. ಅದು ವಿಳಂಬ ಆಗದೇ ಇರುವ ರೀತಿಯಲ್ಲಿ ನಾವೇನು 2014ರವರೆಗೆ 2751 ಹುದ್ದೆಗಳನ್ನು ತುಂಬಿಕೊಳ್ಳಲು ಮುಂದಾಗುತ್ತಿದ್ದೇವೆ ಅದನ್ನು ನಾವು ಯಾವುದೇ ವಿಳಂಬ ಮಾಡದೇ ತುಂಬುವುದಕ್ಕೆ ಮುಂದಾಗುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರ.ಸಂ. 2467**
**(ಉತ್ತರ ಲಗತ್ತಿಸಿದೆ)**

**ಶ್ರೀ ಬಸವನಗೌಡ ರಾ. ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು, ನಾನು ಕೇಳಿದ್ದ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಏನು ನಾನು ಬರಗಾಲದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಅದರ ಬಗ್ಗೆಯೇ ಇವತ್ತಿನ ದಿವಸ ಚರ್ಚೆ ಮಾಡಲಿದ್ದೇವೆ. ಮಾನ್ಯ ಸಚಿವರು ಈಗಾಗಲೇ 2016–17ರಲ್ಲಿ ಏನು ಸುಮಾರು 23.38 ಕೋಟಿ ರೂಪಾಯಿಗಳು ಇವತ್ತಿನ ದಿವಸ ಬಾಕಿ ಇದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಇದೂವರೆಗೂ ಸಹ ಕಳೆದ ಒಂದು ವರ್ಷದಿಂದ ಕೊಟ್ಟಿಲ್ಲ. ಇವತ್ತಿನ ದಿವಸ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕು ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಕುಡಿಯುವ ನೀರಿನ ಸಮಸ್ಯೆ ಇರುವಂತಹ ಒಂದು ತಾಲ್ಲೂಕು ಆಗಿರುತ್ತದೆ. ಆದರೆ ಇಲ್ಲಿಯವರೆಗೂ ಸಹ ಅವರು ಕೊಟ್ಟಿರುವಂತಹ ಉತ್ತರದಲ್ಲಿ ಇನ್ನೂ ಪ್ರಸ್ತಾವನೆ ಬಂದಿದೆ ಎಂದು ಹೇಳಿದ್ದಾರೆ. ಇವರು ಕಳೆದ ವರ್ಷದ ಬಾಕಿಯನ್ನೇ ಕೊಟ್ಟಿಲ್ಲ. ಅದರ ಜೊತೆಗೆ ಇನ್ನೂ ಪ್ರಕ್ರಿಯೆಯಲ್ಲಿದೆ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೆ, ಈ ರೀತಿಯಾದರೆ, ಅಲ್ಲಿ ಬಡ ರೈತರ ಕುಡಿಯುವ ನೀರಿನ tankerಗಳು ಇರುತ್ತವೆ. ಅವರ್‍ಯಾರು ಶ್ರೀಮಂತರಾಗಿರುವುದಿಲ್ಲ. ಅವರಿಗೆ ಬಾಕಿ ಹಣ ಕೊಡುವುದಕ್ಕೆ ವರ್ಷಾನುಗಟ್ಟಲೆ ಇವತ್ತಿನ ದಿವಸ ಅಲೆದಾಡಿಸುತ್ತಿದ್ದಾರೆ. ಸರಿಯಾಗಿ bill ಮಾಡುವಂತಹ ಪ್ರಕ್ರಿಯೆ ಆಗುತ್ತಿಲ್ಲ. ಆದರೆ ಏನಾಗಿದೆ ಎಂದರೆ, ಈಗ ಬರಗಾಲದ ಕಾಮಗಾರಿಗಳ ಬಗ್ಗೆ ಸಭೆಗಳು ನಡೆಯುತ್ತವೆ. ಮಾನ್ಯ ಮುಖ್ಯಮಂತ್ರಿಗಳು ಸಭೆ ನಡೆಸುತ್ತಾರೆ. ಜಿಲ್ಲಾ ಉಸ್ತುವಾರಿ ಸಚಿವರು ಸಭೆ ನಡೆಸುತ್ತಾರೆ. ನಮ್ಮದೇನು Cabinet Sub-Committee ಇದೆ ಅವರು ಬಂದು ಸಭೆ ನಡೆಸುತ್ತಾರೆ ಹಾಗೂ ಆ ಭಾಗದ ಶಾಸಕರು ಸಭೆ ನಡೆಸುತ್ತಾರೆ ಮತ್ತೆ ಜಿಲ್ಲೆಗೆ ಒಬ್ಬೊಬ್ಬರು ಉಸ್ತುವಾರಿ ಕಾರ್ಯದರ್ಶಿಗಳು ಇದ್ದಾರೆ. ಅವರದ್ದೂ ಒಂದು ಸಭೆ ಆಗುತ್ತದೆ. ಕಂದಾಯ ಸಚಿವರು ಅವರೂ ಒಂದು ಸಭೆ ನಡೆಸುತ್ತಾರೆ. ಇಷ್ಟೆಲ್ಲಾ ಸಭೆಗಳಾದರೂ ಸಹಿತ ವರ್ಷಾನುಗಟ್ಟಲೆ ಸರ್ಕಾರ ಹೇಳುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲಾ ಸಚಿವರು ಹಣದ ಕೊರತೆ ಇಲ್ಲವೆಂದು ಹೇಳುತ್ತಾರೆ. ಯಾವುದೇ ಎಷ್ಟೇ ಹಣ ಖರ್ಚಾಗಲಿ ಬರಗಾಲವನ್ನು ನಾವು ಬಹಳ ಯಶಸ್ವಿಯಾಗಿ ಎದುರಿಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಎಲ್ಲಾ ಪತ್ರಿಕಾ ಹೇಳಿಕೆ ಬಿಟ್ಟರೆ, ಇವತ್ತಿನ ದಿವಸ ವರ್ಷಾನುಗಟ್ಟಲೇ ಕುಡಿಯುವ ನೀರಿನ bill ಅನ್ನು ಕೊಟ್ಟಿಲ್ಲವೆಂದರೆ, ಸರ್ಕಾರ ಯಾವ ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮಾಡುತ್ತಿದೆ ಎನ್ನುವಂಥದ್ದನ್ನು ನಾನು ಹೇಳಬೇಕಾಗುತ್ತದೆ. ನಾನು ಕಳೆದ ವರ್ಷದ 2016-17ನೇ ಸಾಲಿನ ಬಗ್ಗೆ ಹೇಳುತ್ತಿದ್ದೇನೆ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಬಸವನಗೌಡ ರಾ.ಪಾಟೀಲ್(ಯತ್ನಾಳ್)ರವರು ಮಹತ್ವದ ವಿಷಯವನ್ನು ಈ ಸಂದರ್ಭದಲ್ಲಿ ಎತ್ತಿದ್ದಾರೆ. ತಾವು ಹೇಳಿದ್ದೀರಿ, ಸುಮಾರು 23.38 ಕೋಟಿ ರೂಪಾಯಿಗಳ ಬಾಕಿ ಹಣ ಬಿಡುಗಡೆಗೆ ಜಿಲ್ಲಾಧಿಕಾರಿಗಳು ಸಲ್ಲಿಕೆ ಮಾಡಿದ್ದರು. ಆದರೆ ನಮ್ಮಲ್ಲಿ ಇರತಕ್ಕಂಥ ವರದಿ, ನಮ್ಮ ಹಿರಿಯ ಅಧಿಕಾರಿಗಳ ಒಟ್ಟು ಅಂದಾಜಿನಿಂದ ಈ bill ಗಳ ಬಗ್ಗೆ ನಮ್ಮಲ್ಲಿ ಉಂಟಾಗಿರುವ ಸಂಶಯದ ಕಾರಣ, ನಾವು C.E.O., Executive Engineer ಮತ್ತು E.O ರವರನ್ನು ಸೇರಿಸಿಕೊಂಡು, ಆ bill ಗಳು ಬಂದಿರುವಂತಹವುಗಳನ್ನು verify ಮಾಡುವಂತೆ ಮತ್ತು spot ಗೆ ಹೋಗಿ verify ಮಾಡಲು ಅವರಿಗೆ ಆದೇಶವನ್ನು ಕೊಟ್ಟೆವು. ಆದರೆ ಸುಮಾರು 23.38 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಲು ಬಾಕಿ ಇರುವಂಥದ್ದು, 13 ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಲು ಬಾಕಿ ಇರುತ್ತದೆಂದು ಆ ವರದಿಯನ್ನು ಅವರು ಕೊಟ್ಟರು. ಆ ವರದಿ ಬಂದ ತಕ್ಷಣವೇ ನಾವು ಆ ಸುಮಾರು 13.33 ಕೋಟಿ ರೂಪಾಯಿಯನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಈ ಬಿಡುಗಡೆ ಮಾಡಿದ ಹಣ ಯಾವುದೇ Action Plan ನಲ್ಲಿ ಇರಲಿಲ್ಲ. ಅದಕ್ಕೆ ಅವರಿಗೆ ಸೂಕ್ತ ಸೂಚನೆಯನ್ನು ಕೊಟ್ಟಿದ್ದೇವೆ. ಇದು regular action plan ನೊಳಗೆ ಬರಬೇಕು. ಈ ವರ್ಷದ Action Plan ನಲ್ಲಿ ಇದನ್ನು ಸೇರಿಸಿಕೊಳ್ಳಿ ಎಂದು ಹೇಳಿ, ಅವರಿಗೆ ಏನು 13.33 ಕೋಟಿ ರೂಪಾಯಿಗಳ ಬಾಕಿ ಕೊಡಬೇಕಿತ್ತು ಆ genuine ಬಾಕಿಯನ್ನು ನಾವು ಪೂರ್ಣವಾಗಿ ಬಿಡುಗಡೆ ಮಾಡಿದ್ದೇವೆ. ಅದು ಅಲ್ಲದೇ ತಾವು ಪ್ರಶ್ನೆಗಳನ್ನು ಕೇಳಿದ್ದೀರಿ. ತಾವು ಬಹುಶಃ ಬರದ ಸಂದರ್ಭದಲ್ಲಿ ಮಾತನಾಡುತ್ತೀರಿ. ಆ ಸಂದರ್ಭದಲ್ಲಿ ನಾನು ವಿವರಗಳನ್ನು ಕೊಡುತ್ತೇನೆ.

**ಶ್ರೀ ಬಸವನಗೌಡ ರಾ. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ವಿಜಯಪುರ ಜಿಲ್ಲೆ ಹಾಗೂ ಕೆಲವೊಂದು ಜಿಲ್ಲೆಗಳಲ್ಲಿ ಸಾವಿರ ಅಡಿಗಳಿಗಿಂತ ಕೆಳಕ್ಕೆ ಹೋದರೆನೇ ನೀರು ಸಿಗುವಂಥದ್ದಾಗಿರುತ್ತದೆ ಮತ್ತು ಅಲ್ಲಿ ನೀರು ಸಿಗುವಂತಹ guarantee ಇರುವುದಿಲ್ಲ. ಇವತ್ತಿನ ದಿವಸ 'ಬಹು ಗ್ರಾಮ ಕುಡಿಯುವ ನೀರಿನ ಯೋಜನೆ'ಯನ್ನು ಸರ್ಕಾರ ಜಾರಿಗೆ ತಂದಿದೆ. ನಮ್ಮ ವಿಜಯಪುರ ಜಿಲ್ಲೆಯಲ್ಲಿ ಸುಮಾರು 39 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿವೆ. ಇವತ್ತಿನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿವಸ ಏನಾಗುತ್ತಿದೆ ಎಂದರೆ, ಸರ್ಕಾರ ಆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ಹಣ ಕೊಡದೇ ಎಲ್ಲಿಯವರೆಗೆ ಶಾಶ್ವತವಾದಂತಹ ಪರಿಹಾರ ಮಾಡುವುದಿಲ್ಲ. ಈ ರೀತಿ ಪ್ರತಿ ವರ್ಷ ಕುಡಿಯುವ ನೀರಿನ ಸಮಸ್ಯೆ ಬರುತ್ತದೆ. ದಯವಿಟ್ಟು ಮಾನ್ಯ ಸಚಿವರೇ, ಈ ಎಲ್ಲಾ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ಇನ್ನೂ 500 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮಾನ್ಯ ಸಚಿವರೇ ಇನ್ನೊಂದು ಏನಾಗಿದೆ ಎಂದರೆ, ನಾನು ಗ್ರಾಮೀಣ ಪ್ರದೇಶಕ್ಕೆ ಹೋದಾಗ, ಈ ಹಿಂದೆ ಅದನ್ನು ಏನು estimate ಮಾಡಿದ್ದಾರೆ, ಅದನ್ನು technical ಆಗಿ ಏನು ಮಾಡಿದ್ದಾರೆ ಅದು complete ಆಗಿ fail ಆಗಿದೆ. ಇವತ್ತಿನ ದಿವಸ ಏನು ನಾಲ್ಕು-ಐದು ಹಳ್ಳಿಗಳನ್ನು ಸೇರಿಸಿ ಒಂದೊಂದು ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆ ಇದೆ. ಕೊನೆಯ ಹಳ್ಳಿಗಳಿಗೆ ನೀರು ಹೋಗುತ್ತಿಲ್ಲ. ಇವತ್ತಿನ ದಿವಸ ಅಲ್ಲಿನ ಜನರು ಆ ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆ ಸಂಪೂರ್ಣವಾಗಿ ವಿಫಲವಾಗುತ್ತಿದೆ. ಅನೇಕ ಕಡೆಗಳಲ್ಲಿ ಅದಕ್ಕೆ ಹೊಸ pipelineಗಳನ್ನು ಹಾಕುವುದು ನಡೆಯುತ್ತಿದೆ. ಈ ರೀತಿ ನಡೆಯುತ್ತಿರುವುದರಿಂದ technically ಇವತ್ತಿನ ದಿವಸ ನೀವು ಇನ್ನೊಮ್ಮೆ ಅದನ್ನು ರೀಎಗ್ಸಾಮಿನ್ ಮಾಡಿಸಿ...

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀ ಬಸವನಗೌಡ ರಾ. ಪಾಟೀಲ್ (ಯತ್ನಾಳ್) ರವರು ಬಹಳ general ಆಗಿ ಹೇಳುತ್ತಿದ್ದಾರೆ. ಅದಕ್ಕೆ ತಾವು ಯಾವ ಊರು, ಯಾವ schemeನಲ್ಲಿ ಈ ಊರಿಗೆ ನೀರು ಹೋಗುತ್ತಿಲ್ಲವೆಂದು ನಿರ್ದಿಷ್ಟವಾಗಿ ಲಿಖಿತವಾಗಿ ಬರೆದು ಕಳುಹಿಸಿದರೆ, ನಾವು ಆ scheme ಅನ್ನು modify ಮಾಡಬೇಕಾಗುತ್ತದೆ. ಇಲ್ಲವೆಂದರೆ, ಆ ಯಾವುದೋ ಎರಡು-ಮೂರು ಹಳ್ಳಿಗಳು ಆ ಯೋಜನೆಯಿಂದ ಹೊರಗುಳಿದಿದ್ದರೆ, ಅದಕ್ಕೆ ಬೇರೆ ಯೋಜನೆ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ತಾವು specific ಆಗಿ ಬರೆದು ಕಳುಹಿಸಿದರೆ, ಅದರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವನಗೌಡ ರಾ. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಏನನ್ನು ಹೇಳಿದ್ದಾರೆ, ಯಾವುವು ಈ ರೀತಿಯಾದ ಸಮಸ್ಯೆಗಳು ಇವೆ ಅದನ್ನು ನಾನು ಕೊಟ್ಟು ಕಳುಹಿಸಿಕೊಡುತ್ತೇನೆ. ನನ್ನ ವಿನಂತಿ ಏನೆಂದರೆ, ಇದಕ್ಕೆ ಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಿ ಅದರ ಬಗ್ಗೆಯೇ ಯೋಜನೆಗಳನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಈ genuine ಬಾಕಿ ಏನಿದೆ ಅದನ್ನು ಈಗಾಗಲೇ ನಮ್ಮ ಇಲಾಖೆಯ ಅಧಿಕಾರಿಗಳು verify ಮಾಡಿ ಏನು ವರದಿಯನ್ನು ಕೊಟ್ಟಿದ್ದಾರೆ, ಅದರಂತೆ ನಾವು 13.33 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

**ಸಭಾಪತಿಯವರು:–** ಧನ್ಯವಾದಗಳು. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ. . .

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಇಲ್ಲಿ ತಪ್ಪಾಗಿದೆ. ಅವರು ಪ್ರಶ್ನೆಯನ್ನು ಕೇಳಿರುವುದು ಈ ಹಿಂದೆ ಗ್ರಾಮಗಳಿಗೆ ಪೂರೈಸಿದ ಕುಡಿಯುವ ನೀರಿನ bill ಗಳೇ ಇನ್ನೂವರೆಗೂ ಪಾವತಿಯಾಗಿಲ್ಲ. ಆದರೆ ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು, ಯೋಜನೆಯಲ್ಲಿ ಇದರ ಕುಡಿಯುವ ನೀರಿನ ಕಾಮಗಾರಿಗಳ bill ಗಳ ಬಗ್ಗೆ ಹೇಳಿದ್ದೀರಾ. ಕುಡಿಯುವ ನೀರಿನ bill ಗೆ ಹೇಳಿಲ್ಲ. ನೀವು ಕುಡಿಯುವ ನೀರಿನ ಕಾಮಗಾರಿಗಳ bill ನೀವು 23.... ಅವರ ಪ್ರಶ್ನೆಯಲ್ಲಿ ಕಾಮಗಾರಿಗಳು ಎಂತಲೂ ಇಲ್ಲ ಮತ್ತು ಯೋಜನೆಗಳು ಎಂತಲೂ ಇಲ್ಲ.

**ಶ್ರೀ ಎಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರು ಪ್ರಶ್ನೆ ಕೇಳಿರುವುದು ನೀರಿನ ಬಗ್ಗೆ ಅಲ್ಲ. ಆ ನೀರಿನ ಯೋಜನೆಗಳು ಅಥವಾ ನೀರಿನ ಕಾಮಗಾರಿಗಳ billಗಳ ಬಗ್ಗೆ.

**ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೆ, ದಿನಾಂಕ: 09ನೇ ಜೂನ್ 2017, ಸಮೂಹ–5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 180 ಪ್ರಶ್ನೆಗಳ ಪೈಕಿ, 94 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2.ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ಹೊಸ ಮರಳು ಹರಾಜು ನಿಯಮಗಳ ಅನ್ವಯ ಕ್ರಮ ಕೈಗೊಳ್ಳದಿರುವ ಬಗ್ಗೆ.

****

**ಶ್ರೀ ಪ್ರದೀಪ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಹೊಸ ಮರಳು ಹರಾಜು ನಿಯಮಗಳ ಅನ್ವಯ 2016-17ನೇ ಸಾಲಿನಲ್ಲಿ ಗದಗ, ಹಾವೇರಿ, ದಾವಣಗೆರೆ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಮರಳು ಹರಾಜು tender ಕರೆಯಲಾಗಿರುತ್ತದೆ. ಆದರೆ, ಈ ಕುರಿತು ಯಾವುದೇ ಕ್ರಮ ಕೈಗೊಳ್ಳಲಾಗಿರುವುದಿಲ್ಲ. ಇದರಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ನಿರ್ಮಾಣ ಕಾರ್ಯಗಳಿಗೆ ತುಂಬಾ ತೊಂದರೆಯಾಗುತ್ತಿದೆ.

ಆದುದರಿಂದ, ಈ ಭಾಗದ ಜನರಿಗೆ ತುಂಬಾ ತೊಂದರೆಯಾಗಿದ್ದು, ಈ ವಿಷಯವಾಗಿ ಸರ್ಕಾರವು ಟೆಂಡರ್‌ದಾರರಿಗೆ ಕಾಮಗಾರಿ ಒಪ್ಪಿಗೆ ನೀಡಿ, ಸಾರ್ವಜನಿಕರಿಗೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗುವ ಕುರಿತು ಸರ್ಕಾರವು ಸೂಕ್ತ ಕ್ರಮಕೈಗೊಳ್ಳುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಬಗ್ಗೆ ವಿವರಗಳು ಬೇಕಾದರೆ ಮಾನ್ಯ ಗಣಿ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(655)/9-06-2017/1-20/ಪಿಕೆ(ಆರ್‌ಸಿ)-ಜಿಆರ್** 1

**ಆ) ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಬಿ.ಸಿಎಂ. ಮಹಿಳಾ ಹಾಸ್ಟೆಲ್‌ಗಳಲ್ಲಿ ಪುರುಷ ವಾರ್ಡನ್‌ಗಳಿರುವ ಬಗ್ಗೆ.**

– – –

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ವಂದಿಸುತ್ತಾ, ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಬಿಸಿಎಂ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ 54 ಲೇಡಿಸ್ ಹಾಸ್ಟೆಲ್‌ಗಳ ಪೈಕಿ 26 ಲೇಡಿಸ್ ಹಾಸ್ಟೆಲ್‌ಗಳಲ್ಲಿ ಪುರುಷರೇ ವಾರ್ಡನ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಾರ್ಚ್ ಕೊನೆಯ ವಾರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಡಾ|| ಬಿ.ಕೆ.ನಾಗರಾಜ್ ಎಂಬುವವರು ಅಶೋಕ ನಗರದಲ್ಲಿರುವ ವಿದ್ಯಾರ್ಥಿ ನಿಲಯದಲ್ಲಿರುವಂತಹ ವಿದ್ಯಾರ್ಥಿಯೋರ್ವಳ ಮೇಲೆ ಅತ್ಯಾಚಾರವೆಸಗಿದ್ದು, ಮೇಲ್ನೋಟಕ್ಕೆ ವೈದ್ಯಕೀಯ ದಾಖಲೆಯನುಸಾರ ನಿಲಯಾರ್ಥಿಯ ಹೇಳಿಕೆ ಧೃಡಗೊಂಡಿದೆ. ಪ್ರಸ್ತುತ ಪ್ರಕರಣ ಕೋರ್ಟಿನಲ್ಲಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವಂತಹ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಮಹಿಳಾ ವಾರ್ಡನ್‌ಗಳು ಕರ್ತವ್ಯ ನಿರ್ವಹಿಸಬೇಕೆಂದು ಆದೇಶ ನೀಡಿದ್ದರು. ಈ ಎರಡೂ ಜಿಲ್ಲೆಗಳಲ್ಲಿ ಮಹಿಳಾ ವಾರ್ಡನ್‌ಗಳಿದ್ದರೂ ಅವರನ್ನು ಕಛೇರಿ ಕರ್ತವ್ಯಗಳಿಗೆ ನಿಯೋಜಿಸಿ ಲಾಭದ ಉದ್ದೇಶದಿಂದ ಬಿಸಿಎಂ ವಿಸ್ತರಣಾಧಿಕಾರಿಗಳು ಮಹಿಳಾ ವಾರ್ಡನ್‌ಗಳಿಗೆ ಒಂದು ಹಾಸ್ಟಲ್‌ನ ನಿರ್ವಹಣೆ ಹೊಣೆ ನೀಡಿ, ಪುರುಷ ವಾರ್ಡನ್‌ಗಳಿಗೆ ಎರಡಕ್ಕಿಂತಲೂ ಅಧಿಕ ಮಹಿಳಾ ಹಾಸ್ಟೆಲ್‌ನ ನಿರ್ವಹಣೆ ಹೊಣೆ ನೀಡಿರುತ್ತಾರೆ. ಈ ರೀತಿಯಾಗಿ ಮಹಿಳಾ ಹಾಸ್ಟೆಲ್‌ಗೆ ಪುರುಷ ವಾರ್ಡನ್‌ಗಳನ್ನು ನೇಮಿಸಿರುವುದರಿಂದ ವಿದ್ಯಾರ್ಥಿನಿಯರ ಶೋಷಣೆ ಆಗುತ್ತಿರುವ ಸಂಗತಿ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಬಿಸಿಎಂ ಹಾಸ್ಟೆಲ್‌ನಲ್ಲಿ ಬಡ ಹಿಂದುಳಿದ ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಹಾಗು ಇತರ ಕೆಲಸಗಳಿಗಾಗಿ ವಾಸವಿದ್ದು ಪುರುಷ ವಾರ್ಡನ್‌ಗಳು ಇವರನ್ನು ಶೋಷಣೆ ಮಾಡುತ್ತಿದ್ದು ಈ ಸಮಸ್ಯೆಯ ಕುರಿತು ಸರಕಾರ ಗಂಭೀರವಾಗಿ ಗಮನ ಹರಿಸಿ ಮಾನ್ಯ ಸಚಿವರ ಆದೇಶದಂತೆ ಮಹಿಳಾ ಬಿಸಿಎಂ ಹಾಸ್ಟೆಲ್‌ಗಳಿಗೆ ಮಹಿಳಾ ವಾರ್ಡನ್‌ಗಳನ್ನು ನೇಮಕ ಮಾಡಿ ಬಿಸಿಎಂ ಹಾಸ್ಟೆಲ್‌ಗಳಲ್ಲಿ ವಾಸಿಸುತ್ತಿರುವ ಹಿಂದುಳಿದ ಬಡ ಮಹಿಳಾ ನಿಲಯಾರ್ಥಿಗಳ ರಕ್ಷಣೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆರ್.ವಿ.ದೇಶ್‌ಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–** ಸನ್ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಗಮನಕ್ಕೆ ತಂದು ಆದಷ್ಟು ಬೇಗ ಉತ್ತರವನ್ನು ನೀಡಲಾಗುವುದು.

**ಇ) ಎಂಡೋಸಲ್ಫಾನ್ ಕ್ರಿಮಿ ನಾಶಕ ಔಷಧಿಯಿಂದ ಉಂಟಾದ ದುಷ್ಪರಿಣಾಮದ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**ಸನ್ಮಾನ್ಯ ಸಭಾಪತಿಯವರೆ, ಸರಕಾರವೇ ಪೂರ್ವಾಪರ ಯೋಚಿಸದೆ ಮಾಡಿದ ಸ್ವಯಂಕೃತ ಅಪರಾಧದ ತಪ್ಪಿಗೆ ಇಂದಿನ ಜನಾಂಗ, ಮುಂದಿನ ಹಲವು ತಲೇಮಾರಿನವರೆಗೆ ಅಂಗವಿಕಲತೆಯ ಶಾಪದೊಂದಿಗೆ ಬದುಕಬೇಕಾದ ಧಾರುಣ ಘಟನೆ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಎಂಡೋ ಸಲ್ಫಾನ್ ಪೀಡಿತರ ಮೂಲಕ ಅನಾವರಣಗೊಂಡಿದೆ.

ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಂಡೋಸಲ್ಫಾನ್ ಎಂಬ ವಿಷಯುಕ್ತ ಕೀಟನಾಶಕದಿಂದ ಪೀಡಿತರಾದ, ಸುಮಾರು 6500 ಮಂದಿ ಸಂತ್ರಸ್ಥರ ಗೋಳು ಅರಣ್ಯ ರೋದನವಾಗಿದೆ. ಕಳೆದ ವಾರ ಬೆಳ್ತಂಗಡಿ ತಾಲ್ಲೂಕಿನ, ಕೊಕ್ಕಡ ಬಸ್ ನಿಲ್ದಾಣದ ಬಳಿ ಎಂಡೋ ಸಲ್ಫಾನ್ ಪೀಡಿತ, ದೃಷ್ಟಿ ಹೀನರು, ಕೈ ಕಾಲುಗಳ ಸ್ವಾಧೀನತೆಯೇ ಇಲ್ಲದವರು, ಪಾರ್ಶ್ವವಾಯು ಪೀಡಿತರಂತೆ ಮಲಗಿದ್ದಲ್ಲಿಯೇ ಬದುಕು ಸವೆಸುವವರು, ತಮಗಾದ ದುರಂತಕ್ಕೆ ಪರಿಹಾರ ಮೊತ್ತ ಹೆಚ್ಚಿಸುವಂತೆ ಮತ್ತು ಶಾಶ್ವತ ಚಿಕಿತ್ಸಾ ಪರಿಹಾರ ಕೇಂದ್ರ ತೆರೆಯುವಂತೆ ಒತ್ತಾಯಿಸಿ ಬೀದಿ ಬದಿ ಮಲಗಿ, ಪ್ರತಿಭಟನೆ ಮೂಲಕ ನ್ಯಾಯ ಕೋರಿದ್ದರು.

1980ರ ದಿನಗಳಲ್ಲಿ ಮತ್ತು ನಂತರದ ಕೆಲವು ವರ್ಷಗಳಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಗೇರು ತೋಟಗಳಿಗೆ ವೈಮಾನಿಕ ಕ್ರಿಮಿನಾಶಕಗಳ ಸಿಂಪರಣೆ ಮಾಡಿದ್ದು, ಈ ಅನಾಹುತಕ್ಕೆ ಕಾರಣ.

ಎಂಡೋಸಲ್ಫಾನ್ ದುರಂತದಿಂದ ಬುದ್ಧಿಮಾಂಧ್ಯತೆ, ಅಂಗವಿಕಲತೆ, ಮಾತ್ರವಲ್ಲದೆ ದೈಹಿಕ ವರ್ಣಮಂಡಲ ಸಮಸ್ಯೆ ಅಸ್ತಮಾ ಹಾಗೂ ವಿವಿಧ ರೀತಿಯ ಭೀಕರ ಕ್ಯಾನ್ಸರ್, ಗುಣವಾಗದಷ್ಟು ವಿಪರೀತ ಚರ್ಮರೋಗಗಳು, ನಪುಂಸಕತ್ವ ಮತ್ತು ಎಂಡೋಪೀಡಿತರ ವಂಶವಾಹಿನಿಯಲ್ಲೂ ಈ ವಿಷ ವರ್ಗಾವಣೆಗೊಂಡು ಮುಂದಿನ 5 ತಲೆಮಾರು ಮೀರಿ ದೈಹಿಕ–ಮಾನಸಿಕ ಅಂಗವೈಕಲ್ಯದ ಮಕ್ಕಳು ಹುಟ್ಟಲಿದ್ದಾರೆಂದು ವೈಜ್ಞಾನಿಕ ವರದಿ ಹೇಳುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯ ಗೇರು ಅಭಿವೃದ್ಧಿ ನಿಗಮ ಈ ಹಿಂದೆ ನಿಷೇಧಿಸಲ್ಪಟ್ಟ ಕೀಟನಾಶಕ ಸಿಂಪರಣೆ ಮಾಡುವ ಮೂಲಕ ತಿಳಿದು ತಿಳಿದು ಪ್ರಜೆಗಳಿಗೆ ವಿಷವುಣಿಸಿದೆ, ಪ್ರಾಯಕ್ಕೆ ಬಂದ ಅಂಗವೈಕಲ್ಯ, ಬುದ್ಧಿಮಾಂಧ್ಯ ಮಕ್ಕಳ ದಾರುಣ ಸ್ಥಿತಿ, ಅವರ ಹೆತ್ತವರ ಕರುಣಾಜನಕ ಬಡತನದ ಗತಿ ಹೃದಯ ವಿದ್ರಾವಕವಾಗಿದೆ. ಘನತೆವೆತ್ತ ನ್ಯಾಯಾಲಯದ ಆದೇಶವೂ ಸೇರಿದಂತೆ ಸಂತ್ರಸ್ತರ ಒತ್ತಾಯಕ್ಕೆ ರಾಜ್ಯ ಸರಕಾರ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಿದ್ದರೂ ಅದು ತಾತ್ಕಾಲಿಕವಾದ್ದರಿಂದ ಎಂಡೋ ಪೀಡಿತರಿಗೆ ಪೂರ್ಣ ಸಹಾಯವಾಗುತ್ತಿಲ್ಲ. ನ್ಯಾಯಾಲಯ ಕೊಟ್ಟ ಹಲವು ಆದೇಶಗಳನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ಅನುಷ್ಠಾನ ಮಾಡಿದರೆ ನೊಂದ ಬಡವರಿಗೆ ಸಹಾಯವಾಗುತ್ತದೆ ಎಂದು ಬೀದಿಯಲ್ಲಿ ಕುಳಿತ ನತದೃಷ್ಟರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ.

ಈ ಮಧ್ಯೆ ವೈದ್ಯ ವಿಜ್ಞಾನಿಗಳ ತಂಡವೊಂದು ಅಧ್ಯಯನ ಮಾಡಿ, ಎಂಡೋಸಲ್ಫಾನ್ ಸಿಂಪರಣೆಯಿಂದ ಭಾದಕವಾದ ಪ್ರದೇಶಕ್ಕೆ 142ಕ್ಕೂ ಹೆಚ್ಚು ರೀತಿಯ ಕಾಯಿಲೆ ಬರುತ್ತದೆ ಮತ್ತು 5 ತಲೆಮಾರು ತನಕ ಅಂದರೆ ಸರಿಸುಮಾರು 300 ವರ್ಷಗಳ ಕಾಲ ಈ ವಿಷದ್ರಾವಣ ಜನರ ಬದುಕನ್ನು ಕಾಡುತ್ತದೆ ಎಂದು ತನ್ನ ವರದಿಯಲ್ಲಿ ತಿಳಿಸಿದೆ.

ಒಟ್ಟಾರೆ, ಸರಕಾರ ಈಗ ನೀಡುತ್ತಿರುವ ಸವಲತ್ತು ಮತ್ತು ಪರಿಹಾರ, ವಿಕಲಚೇತನರಿಗೆ ಕೊಡುವ ಮಾಶಾಸನದಂತೆಯೇ ಹೊರತು, ನರಳುವವರಿಗೆ ನ್ಯಾಯ ಸಿಕ್ಕಿದಂತಾಗಿಲ್ಲ.

**ಶ್ರೀ ಐವನ್ ಡಿ'ಸೋಜ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗದುಕೊಳ್ಳಿ. ಮಾನ್ಯ ಸದಸ್ಯರು ಓದುವುದನ್ನು ನೋಡಿದರೆ ಈ ವಿಷಯ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. It is not a matter pertaining to Zero Hour. ಇದು ಯಾವತ್ತೋ ನಡೆದಂತಹ ಘಟನೆ. ಎರಡನೆಯದಾಗಿ, ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಿ. ಆಗ ಚರ್ಚೆ ಮಾಡೋಣ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ನಿಯಮ 330ರ ಅಡಿಯಲ್ಲಿ ಪ್ರಸ್ತಾಪ ಮಾಡಲು ಕೊಟ್ಟಿದ್ದೇವೆ. ದಯವಿಟ್ಟು ಆ ವಿಷಯವನ್ನು ತೆಗೆದುಕೊಳ್ಳಿ, ಚರ್ಚೆ ಮಾಡೋಣ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನಗೆ ಒಂದು ವಿಷಯ ಅರ್ಥವಾಗುತ್ತಿಲ್ಲ. ಇದು ಶೂನ್ಯ ವೇಳೆಯೇ ಅಥವಾ ಪ್ರಶ್ನೋತ್ತರ ವೇಳೆಯೇ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೆ, ಸರ್ಕಾರಕ್ಕೆ ಏನಾಗಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇಂತಹ ಗಂಭೀರ ಪ್ರಕರಣವನ್ನು ಪ್ರಸ್ತಾಪ ಮಾಡಲು ಬಿಡುತ್ತಿಲ್ಲವಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೆ, ಶೂನ್ಯ ವೇಳೆಯಲ್ಲಿ ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಾದರೆ ಅದಕ್ಕೊಂದು ನಿಯಮವಿದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಓದುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹಾಗಾಗಿ ಅವರು ಓದಿ ಮುಗಿಸಿ ಬಿಡಲಿ.

**ಸಭಾಪತಿಯವರು:–** ನೀವು ಓದಿ ಮುಗಿಸಿ. ಮಧ್ಯದಲ್ಲಿ ಯಾರೂ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೆ, ಒಂದು ಪುಟ ಸಹ ಮೀರಿಲ್ಲ ಆದರೂ ಏಕೆ ಈ ರೀತಿ ಮಾತನಾಡುತ್ತಿದ್ದಾರೆ?

**ಸಭಾಪತಿಯವರು:–** ನಾನು ಹೇಳುತ್ತಿದ್ದೇನಲ್ಲ, ತಾವು ಓದಿ ಮುಗಿಸಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಮ್ಮ ಮನಸ್ಸಿಗೆ ಬಂದಂತೆ ಮಾತನಾಡುತ್ತೀರಾ? ಇದು ಗಂಭೀರವಾದಂತಹ ಸಮಸ್ಯೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:–** ಆಯಿತು ನೀವು ಓದಿ ಮುಗಿಸಿ. ಮುಂದಕ್ಕೆ ಓದಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆದ್ದರಿಂದ ರಾಜ್ಯ ಸರಕಾರ ಕೇರಳ ಸರಕಾರ ನೀಡುವ ಮಾದರಿಯಲ್ಲಿಯೇ ಮಾಸಿಕ 5,000/– ರೂಪಾಯಿಗಳ ಪರಿಹಾರ ಹಾಗೂ ತಿಂಗಳಿಗೆ 30 ಕೆ.ಜಿ. ಪೌಷ್ಠಿಕ ಆಹಾರ ಮಾದರಿಯಲ್ಲೆ ಎಂಡೋ ಪೀಡಿತರಿಗೆ ಸಹಾಯ ಮಾಡಬೇಕೆಂದು ಕೋರುತ್ತೇನೆ ಮಾತ್ರವಲ್ಲ ಈ ಹಿಂದೆ ಕೇರಳ ಸರಕಾರದ ವತಿಯಿಂದ ಎಂಡೋ ಸಿಂಪರಣೆ ಮಾಡುವ ಸಂದರ್ಭದಲ್ಲಿ ಮುಡ್ನೂರು ಗ್ರಾಮದ ಬಾವಿಯೊಂದರಲ್ಲಿ 10 ಟನ್‌ಗಳಷ್ಟು ಎಂಡೋಸಲ್ಫಾನ್ ಸುರಿದು ದುರಂತವನ್ನೇ ಸೃಷ್ಠಿಸಿತು. ಇದರಿಂದಾಗಿ ಗ್ರಾಮದ ಬಹುತೇಕ ಭಾಗಗಳಲ್ಲಿನ 400 ಅಡಿ ಕೊಳವೆ ಬಾವಿಯಲ್ಲಿ ಎಂಡೋ ವಿಷದ ತೆಳು ದ್ರವದ ಅಂಶ ಕಂಡುಬರುತ್ತಿದ್ದು, ಆ ಪರಿಸರದಲ್ಲಿ ಮುಂದಿನ ಬದುಕು ಭೀಕರವಾಗಲಿದೆ.

ರಾಜ್ಯ ಆರೋಗ್ಯ ಮಂತ್ರಿಗಳು ತಕ್ಷಣ ನೊಂದ ವಿಕಲಚೇತನ ಎಂಡೋ ಪೀಡಿತರ ಶಿಬಿರಗಳಿಗ ಭೇಟಿ ಕೊಟ್ಟು, ಸಂತ್ರಸ್ತರ ನೋವನ್ನು ಖುದ್ದು ಆಲಿಸಿ ತುರ್ತು ಪರಿಹಾರ, ಶಾಶ್ವತ ಪಾಲನಾ ಶಿಬಿರ ರಚನೆ ಮಾಡಿ, ಈ ಸಮಸ್ಯೆ ಬಗ್ಗೆ ಅಧ್ಯಯನ ಮಾಡಿ ತಯಾರಿಸಿದ ವೆಂಕಟೇಶ್ ನಾಯಕ್‌ರವರ ವರದಿಯಲ್ಲಿರುವ ವಿಷಯಗಳನ್ನು ಅರ್ಥಮಾಡಿಕೊಂಡು ನ್ಯಾಯ ಒದಗಿಸಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವರನ್ನು ಈ ಮೂಲಕ ಆಗ್ರಹಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟಂತಹ ಸಚಿವರ ಗಮನಕ್ಕೆ ಈ ವಿಷಯವನ್ನು ತಂದು ಆದಷ್ಟು ಬೇಗನೆ ಸರ್ಕಾರದಿಂದ ಉತ್ತರವನ್ನು ಕೊಡಿಸಲಾಗುವುದು.

**ಸಭಾಪತಿಯವರು:–** ಧನ್ಯವಾದಗಳು.

**ಉ) ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಟೌನ್‌ನಲ್ಲಿ ಬಾಲಕರ ಜೂನಿಯರ್ ಕಾಲೇಜ್ ಕಟ್ಟಡವು ಶಿಥಿಲಗೊಂಡಿರುವ ಬಗ್ಗೆ.**

– – –

**ಶ್ರೀಮತಿ ಮೋಟಮ್ಮ(ವಿಧಾನ ಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಟೌನ್‌ನಲ್ಲಿರುವ ಸರ್ಕಾರಿ ಬಾಲಕರ ಜೂನಿಯರ್ ಕಾಲೇಜು ಕಟ್ಟಡವು ಸುಮಾರು 70 ವರ್ಷ ಹಳೆಯದಾಗಿದ್ದು, ಮೇಲ್ಛಾವಣಿಗಳು ಕಿತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿ ಅತ್ಯಂತ ಶಿಥಿಲಗೊಂಡಿರುತ್ತದೆ. ಇದರಿಂದಾಗಿ ಈ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಪ್ರತಿ ದಿನ ಜೀವವನ್ನು ಕೈಯಲ್ಲಿಡಿದುಕೊಂಡು ಅಭ್ಯಾಸ ಮಾಡುವ ಪರಿಸ್ಥಿತಿ ಇರುತ್ತದೆ. ಆದುದರಿಂದ ಮುಂದಾಗಬಹುದಾದಂತಹ ಅನಾಹುತಗಳಿಗೆ ಅವಕಾಶ ನೀಡದಂತೆ ಈ ಬಗ್ಗೆ ಸಂಬಂಧಪಟ್ಟಂತಹ ಶಿಕ್ಷಣ ಸಚಿವರು ತುರ್ತು ದುರಸ್ಥಿ ಮಾಡಲು ಕ್ರಮ ಕೈಗೊಳ್ಳಲು ಗಮನ ಹರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಈ ವಿಷಯದ ಬಗ್ಗೆ ಈಗಾಗಲೇ ಹೇಳಿದ್ದಾರೆ. ಉತ್ತರ ಸಿದ್ದವಿದ್ದರೆ ಕೊಡಿ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಸ್ಪಷ್ಟವಾದಂತಹ ಉತ್ತರವನ್ನು ಒದಗಿಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ಶೂನ್ಯವೇಳೆಗೆ ಸಂಬಂಧಪಟ್ಟಂತೆ ಕೆಲವು ಉತ್ತರಗಳು ಇವೆ ಎಂದು ಹೇಳಿದರು. ಅದನ್ನು ಮಂಡಿಸಿ.

**ಶ್ರೀ ಆರ್.ವಿ.ದೇಶಪಾಂಡೆ, (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-**ಸನ್ಮಾನ್ಯ ಸಭಾಪತಿಯವರೆ, ಶ್ರೀ ಬಸವನಗೌಡ ಆರ್ ಪಾಟೀಲ್(ಯತ್ನಾಳ್) ಮತ್ತು ಶ್ರೀ ಶ್ರೀನಿವಾಸ ಮಾನೆ ಅವರು ದಿನಾಂಕ:7-6-2017ರಂದು ಹಾಗೂ ಶ್ರೀ ಅಮರ್‌ನಾಥ್ ಪಾಟೀಲ್ ಹಾಗು ಶ್ರೀ ಕೆ.ಟಿ.ಶ್ರೀಕಂಠೇಗೌಡ ಇವರು ದಿನಾಂಕ: 8-7-2017ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಹಾಗೂ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು ನೀಡಿರುವಂತಹ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

**ಅ) ವಿಜಯಪುರ ಜಿಲ್ಲೆಯಲ್ಲಿ ಅಕ್ರಮವಾಗಿ ಮರಗಳನ್ನು ಕಡಿದು ಸಾಗಿಸುತ್ತಿರುವ ಬಗ್ಗೆ**

\- - -

**ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)( ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೆ, ದಿನಾಂಕ:7-6-2017ರಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವನಗೌಡ ಆರ್ ಪಾಟೀಲ್(ಯತ್ನಾಳ್) ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ನೀಡಿರುವಂತಹ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಆ) ರಾಜ್ಯದ ಹಲವಾರು ನಗರ ಪ್ರದೇಶಗಳಲ್ಲಿ ಬಡ್ಡಿ ಆಮಿಷಕ್ಕೆ ಒಳಗಾಗಿ ಹಣ ಕಳೆದುಕೊಂಡ ಪ್ರಕರಣಗಳ ಕುರಿತು.**

– – –

**ಶ್ರೀ ಆರ್.ವಿ.ದೇಶಪಾಂಡೆ, (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)( ಗೃಹ ಸಚಿವರ ಪರವಾಗಿ):–** ಸನ್ಮಾನ್ಯ ಸಭಾಪತಿಯವರೆ, ದಿನಾಂಕ: 7–6–2017ರಂದು ಶ್ರೀ ಶ್ರೀನಿವಾಸ ಮಾನೆ ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ನೀಡಿರುವಂತಹ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಇ) ರಮೇಶ್ ಮರಾಠ, ಭಾಷಾ ಉಪನ್ಯಾಸಕರು, ಜನತಾ ಪದವಿ ಪೂರ್ವ ಕಾಲೇಜು, ಬೀದರ್ ಇವರ ವೇತನ ತಡೆಹಿಡಿದಿರುವ ಬಗ್ಗೆ.**

= – –

**ಶ್ರೀ ಆರ್.ವಿ.ದೇಶಪಾಂಡೆ, (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):–**ಸನ್ಮಾನ್ಯ ಸಭಾಪತಿಯವರೆ, ದಿನಾಂಕ: 8–6–2017ರಂದು ಶ್ರೀ ಕೆ.ಟಿ.ಶ್ರೀಕಂಠೇಗೌಡ ಮತ್ತು ಶ್ರೀ ಅಮರನಾಥ ಪಾಟೀಲ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ನೀಡಿರುವಂತಹ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಧನ್ಯವಾದಗಳು. ಈಗ ಮೊದಲು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮೊದಲು ಶ್ರೀ ರಾಮಚಂದ್ರಗೌಡರು ತಮ್ಮ ಗಮನ ಸೆಳೆಯುವ ಸೂಚನೆಯ ಬಗ್ಗೆ ಗಮನವನ್ನು ಸೆಳೆಯಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮೊನ್ನೆ ದಿವಸ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಂಡಾಗ ಆಗಬಹುದು ಎಂದು ಹೇಳಿದ್ದರು.

**ಸಭಾಪತಿಯವರು:–** ನೀವು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಸಂಬಂಧಪಟ್ಟ ಸಚಿವರು ಬರಬೇಕು.

**<u>(656)09-06-2017 MM-GR 01-30</u>**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಬರದ ಬಗ್ಗೆ ಚರ್ಚೆ ಮಾಡಬೇಕಾಗಿದೆ.

**ಸಭಾಪತಿಯವರು:–** ನೋಡೋಣ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇಂದು ಸಂಜೆಯವರೆಗೂ ಚರ್ಚೆ ಮಾಡಬಹುದು. ಇದೊಂದು ಗಂಭೀರವಾದ ವಿಷಯವಾಗಿದೆ.

**ಸಭಾಪತಿಯವರು:–** ಇಂದು ಶುಕ್ರವಾರವಾಗಿದೆ. B.A.C., ನಲ್ಲಿ ಶುಕ್ರವಾರ ಭೋಜನಕ್ಕೆ ಬಿಡುವಾಗ ಮುಕ್ತಾಯಗೊಳಿಸಬೇಕೆಂದು ತೀರ್ಮಾನವಾಗಿದೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ವೇಳೆಗೆ ಮೂರು ಗಂಟೆಗಳ ಸಮಯವಾಯಿತು.

**4. <u>ಗಮನ ಸೆಳೆಯುವ ಸೂಚನೆಗಳು</u>**

**ವಿಷಯ:–** ರಾಜ್ಯದಲ್ಲಿ ಹೆಚ್ಚುತ್ತಿರುವ ಮಧುಮೇಹ ರೋಗಿಗಳ ಪ್ರಮಾಣದಿಂದಾಗಿ "ಕರ್ನಾಟಕ ರಾಜ್ಯ ಮಧುಮೇಹ ಸಂಸ್ಥೆ"ಗೆ ಸೂಕ್ತ ಜಾಗದ ವ್ಯವಸ್ಥೆ, ಸಿಬ್ಬಂದಿ ಹಾಗೂ ವೈದ್ಯರ ಕೊರತೆ ನೀಗಿಸಿ ಸದರಿ ಸಂಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ

– – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಹೆಚ್ಚುತ್ತಿರುವ ಮಧುಮೇಹ ರೋಗಿಗಳ ಪ್ರಮಾಣದಿಂದಾಗಿ "ಕರ್ನಾಟಕ ರಾಜ್ಯ ಮಧುಮೇಹ ಸಂಸ್ಥೆ"ಗೆ ಸೂಕ್ತ ಜಾಗದ ವ್ಯವಸ್ಥೆ, ಸಿಬ್ಬಂದಿ ಹಾಗೂ ವೈದ್ಯರ ಕೊರತೆ ನೀಗಿಸಿ ಸದರಿ ಸಂಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಡಾ: ಶರಣಪ್ರಕಾಶ ಆರ್. ಪಾಟೀಲ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿರವರೆ,

**(ಹೇಳಿಕೆಯ ಪ್ರತಿಯನ್ನು ಲಗತ್ತಿಸಿದೆ)**

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಮಧುಮೇಹಿಗಳ ಸಂಖ್ಯೆ ಹೆಚ್ಚಾದ ಕಾರಣ ಉತ್ತಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಬೆಂಗಳೂರಿನ ಇಂದಿರಾನಗರದಲ್ಲಿ 06 ಎಕರೆ ಜಮೀನನ್ನು ಕೊಟ್ಟಿದ್ದರು, ಆಗ ನಾನು ಮಂತ್ರಿಯಾಗಿದ್ದೆ. ಅಲ್ಲದೆ, ಅವತ್ತಿನ ದಿವಸ ಕರ್ನಾಟಕ ರಾಜ್ಯ ಮಧುಮೇಹ ಸಂಸ್ಥೆಯನ್ನು ಸ್ಥಾಪಿಸುವ ಸಲುವಾಗಿ ಜಯದೇವ ಆಸ್ಪತ್ರೆಯ ನಿರ್ದೇಶಕರನ್ನು ಕೇಳಿಕೊಂಡಿದ್ದರಿಂದ ಅವರು ತಮ್ಮ ಆಸ್ಪತ್ರೆಯಲ್ಲಿನ 50X60 ಅಡಿ ಜಾಗವನ್ನು ಇವರಿಗೆ ಬಿಟ್ಟುಕೊಟ್ಟರು. ಅದಕ್ಕಾಗಿ ನಾನು ಡಾ: ಮಂಜುನಾಥ್‌ರವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸದರಿ ಜಾಗದಲ್ಲಿ 2007ರಲ್ಲಿ ಸಂಸ್ಥೆಯನ್ನು ಸ್ಥಾಪನೆ ಮಾಡಲಾಯಿತು. ಮಧುಮೇಹ ಆಸ್ಪತ್ರೆಗೆ ಆ ಕಾಲದಲ್ಲಿ 06 ಎಕರೆ ಜಾಗವನ್ನು ಕೊಡಲಾಗಿತ್ತು. ಕನಿಷ್ಟ ಮತ್ತೊಂದು 06 ಎಕರೆ ಜಾಗವನ್ನು ಅವರಿಗೆ ಕೊಟ್ಟರೆ ಅದೂ ಸೇರಿ 12 ಎಕರೆಯಾದರೆ ಮಧುಮೇಹದ ಕಾಯಿಲೆ ವಿಪರೀತವಾಗಿ ಜಾಸ್ತಿಯಾಗುತ್ತಿರುವುದರಿಂದ ಮುಂದೆ ಮತ್ತೊಂದು ಮೆಡಿಕಲ್ ಕಾಲೇಜ್ ಮಾಡುವುದಕ್ಕೂ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಈ ಕೆಲಸವನ್ನು ಮಾಡಿದರೆ ಅನುಕೂಲವಾಗುತ್ತದೆ. ಒಂದು ಸುಸಜ್ಜಿತವಾದ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮತ್ತು ಸಂಶೋಧನಾ ಕೇಂದ್ರವನ್ನು ತೆರೆಯಲು ಕನಿಷ್ಟ 250 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಸಂಪೂರ್ಣ ಆಸ್ಪತ್ರೆಯ ಯೋಜನೆಯನ್ನು ರೂ. 40 ಕೋಟಿಗೆ ತಯಾರಿಸಲಾಗಿದೆ. ಪ್ರಸ್ತುತ ಅಲ್ಲಿ ಸುತ್ತಲೂ 30 ಎಕರೆಯಷ್ಟು ಜಾಗ ಖಾಲಿ ಇದೆ. ಅದನ್ನು ಯಾರಾದರೂ ಅಪಹರಿಸುವ ಮುಂಚೆಯೇ ಈಗಲೇ 12 ಎಕರೆಯಷ್ಟು ಜಾಗವನ್ನು ಕಾಲೇಜಿಗೆ ಮಂಜೂರು ಮಾಡಿಕೊಟ್ಟರೆ ಮುಂದೆ ಇಷ್ಟೊಂದು ಅದ್ದೂರಿಯಾಗಿ ಬೆಳೆಯುತ್ತಿರುವ ಬೆಂಗಳೂರು ನಗರದ ದೃಷ್ಟಿಯಿಂದ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಪ್ರತಿದಿನ 300 ರೋಗಿಗಳು ಬರುತ್ತಿದ್ದಾರೆ. ಒಬ್ಬ ರೋಗಿಯು ಅಲ್ಲಿ ಉಳಿದುಕೊಳ್ಳುವುದಕ್ಕೆ ಜಾಗವಿಲ್ಲ, ಹಾಸಿಗೆಗಳಿಲ್ಲ. ರೋಗಿಗಳು ಬಂದು ಪರೀಕ್ಷೆ ಮಾಡಿಸಿಕೊಂಡು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುತ್ತಾರೆ. ತಮಗೆ ಗೊತ್ತಿರುವ ಹಾಗೆ ಮಧುಮೇಹ ರೋಗಿಗಳನ್ನು Diabetalogy ಮಾಡಬೇಕಾದರೆ ಒಳರೋಗಿಯಾಗಿ ದಾಖಲಿಸಿಕೊಂಡು 3-4 ದಿವಸ ಪದೇ ಪದೇ ರಕ್ತಪರೀಕ್ಷೆ ಮಾಡಿ ಅವರಿಗೆ ಔಷಧಿಗಳನ್ನು ಕೊಡಬೇಕಾಗುತ್ತದೆ. ನಾನು ಮತ್ತು ಮಾನ್ಯ ಯಡಿಯೂರಪ್ಪರವರು ಕೂಡ ತಮಿಳುನಾಡಿಗೆ ಹೋಗಿ ಆಸ್ಪತ್ರೆಯಲ್ಲಿ 3-4 ದಿವಸಗಳ ಕಾಲ ಅಡ್ಮಿಟ್ ಆಗಿ ಚಿಕಿತ್ಸೆಯನ್ನು ಪಡೆದುಕೊಂಡು ಬರುತ್ತಿದ್ದೆವು. ಕರ್ನಾಟಕದಲ್ಲಿ ಎಲ್ಲಿಯೂ ಈ ಪದ್ಧತಿ ಇರಲಿಲ್ಲ, ಈಗಲೂ ಇಲ್ಲ. ರಾಜಾಜಿನಗರದಲ್ಲಿ ಒಂದೇ ಒಂದು ಖಾಸಗಿ ಆಸ್ಪತ್ರೆ ಇದೆ. ಅದು ಬಿಟ್ಟರೆ ಅದಕ್ಕೋಸ್ಕರವೇ ವಿಶೇಷವಾದ ಆಸ್ಪತ್ರೆ ಯಾವುದು ಇಲ್ಲ. ಹೀಗಾಗಿ ಅಲ್ಲಿ ವೈದ್ಯರುಗಳ ಸಂಖ್ಯೆಯು ಕಡಿಮೆ ಇದೆ. Obesity Specialist, Lipidologist, Child Diabetalogist, Diabetalogy in Pregnancy Specialist ಗಳು ಬೇಕಾಗಿರುತ್ತಾರೆ. ಇವರೆಲ್ಲಾ ಇದ್ದರೆ ಮಾತ್ರ ಕೆಲಸ ಮಾಡುವುದಕ್ಕೆ ಆಗುತ್ತದೆ. ಮುಂದೆ ಮೆಡಿಕಲ್ ಕಾಲೇಜು ಸ್ಥಾಪನೆಯಾದರೆ ಮೆಡಿಕಲ್ ಸೀಟುಗಳನ್ನು ಕೂಡ ಹೆಚ್ಚಿಸಿಕೊಳ್ಳಬಹುದು. ಈ ಬಗ್ಗೆ ಈಗಲೇ ಗಮನಹರಿಸಿದರೆ ಒಳ್ಳೆಯದು. ಈಗಾಗಲೇ ಜಯದೇವ ಇನ್‌ಸ್ಟಿಟ್ಯೂಟ್ ನವರು ನಮಗೆ ಜಾಗ ಬೇಕಾಗಿದೆ, ತಮ್ಮ ಆಸ್ಪತ್ರೆಯನ್ನು ವಿಸ್ತಾರ ಮಾಡುತ್ತಿರುವುದರಿಂದ ಜಾಗವನ್ನು ಖಾಲಿ ಮಾಡಬೇಕೆಂದು ಹೇಳುತ್ತಿದ್ದಾರೆ. ದಯವಿಟ್ಟು ಖಾಲಿ ಮಾಡಿ ಎಂದು ಹೇಳುವುದಕ್ಕೆ ಮುಂಚೆಯೇ ತಾವು ಈಗಾಗಲೇ ಕೊಟ್ಟಿರುವ 06 ಎಕರೆ 11 ಗುಂಟೆ ಜಾಗದಲ್ಲಿ ಆಸ್ಪತ್ರೆಯನ್ನು ಕಟ್ಟಿ, ಉಳಿದಂತಹ 12 ಎಕರೆಗೆ ಎಷ್ಟು ಜಾಗ ಬೇಕೋ ಅಷ್ಟು ಜಾಗವನ್ನು ತೆಗೆದುಕೊಂಡು ಕೆಲಸ ಮಾಡುವುದಕ್ಕೆ ಪ್ರಾರಂಭಿಸಿದರೆ ಒಳ್ಳೆಯದಾಗುವುದು ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಡಾ. ಶರಣಪ್ರಕಾಶ್ ಆರ್. ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಹಿರಿಯ ಸದಸ್ಯರು ಈಗಾಗಲೇ ಹೇಳಿದ್ದಾರೆ.

**ಶ್ರೀ ಕೆ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರವರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ರಾಜ್ಯದ ಮಧುಮೇಹ ರೋಗಿಗಳ ಆಸ್ಪತ್ರೆಯಲ್ಲಿ ನಾನು ಕೂಡ ಚಿಕಿತ್ಸೆಯನ್ನು ತೆಗೆದುಕೊಂಡಿದ್ದೇನೆ. ಅಲ್ಲಿ ಡಾ. ನರಸಿಂಹಶೆಟ್ಟಿ ಎಂಬುವವರು ನಿರ್ದೇಶಕರಾಗಿದ್ದರು. ಅವರು ಇತ್ತೀಚೆಗೆ ನಿವೃತ್ತರಾದರು. ಬಹುಶಃ ನಾನು ಕಂಡಂತೆ ಬೆಂಗಳೂರಿನಲ್ಲಿ ಬಹಳ ಬದ್ಧತೆಯಿರುವ ಒಂದು ಉತ್ತಮ ಸಂಸ್ಥೆ ಸ್ಥಾಪನೆಯಾಗುವುದಕ್ಕೆ ಡಾ. ನರಸಿಂಹಶೆಟ್ಟಿರವರು ಕಾರಣರು ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅಲ್ಲಿ ಏನಾದರೂ ನಡೆದಿರಲಿ. ಆದರೆ ಆ ಸಂಸ್ಥೆಗೆ ಒಳ್ಳೆಯ ಹೆಸರು ಬರುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣ ಡಾ. ನರಸಿಂಹಶೆಟ್ಟಿರವರು ಎನ್ನುವುದನ್ನು ಮರೆಯಬಾರದು. ಮಾನ್ಯ ಮಂತ್ರಿಯವರು ಗೊಣಗುಟ್ಟುತ್ತಿರುವುದು ನನಗೆ ಕೇಳಿಸುತ್ತಿದೆ. ಅವರ term extend ಆಗುವಂತಹ ಸಂದರ್ಭದಲ್ಲಿ ಇದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಬಹುಶಃ ಆ ಸಂಸ್ಥೆಯು ಇಷ್ಟೊಂದು ಹೆಸರು ಮಾಡುವುದಕ್ಕೆ ಕಾರಣ ಡಾ. ನರಸಿಂಹಶೆಟ್ಟಿರವರು ಎಂದು ಹೇಳುತ್ತೇನೆ. ಅಲ್ಲಿ ಪ್ರತಿನಿತ್ಯ 150 ಜನರಿಗೆ 'first come, first served' ಆಧಾರದಲ್ಲಿ 750 ರೂಪಾಯಿಗಳನ್ನು ಕಟ್ಟಿದರೆ ಕಣ್ಣು, ಕಿಡ್ನಿ, ಲಿವರ್, ಮಧುಮೇಹ ಎಲ್ಲವನ್ನು ಕೂಡ ಒಂದೇ ದಿವಸದಲ್ಲಿ ಅವರಿಗೆ ಪರೀಕ್ಷೆ ಮಾಡಿ ಅವರಲ್ಲಿರುವ ನ್ಯೂನತೆಗಳಿಗೆ ಔಷಧಿಯನ್ನು ಕೊಡುತ್ತಾರೆ.  ಈಗ ಆ ವೈದ್ಯರು ನಿವೃತ್ತರಾಗಿದ್ದು, ಹೊಸ ವೈದ್ಯರು ಬಂದಿದ್ದಾರೆ. ಆ standard ಅನ್ನು ಅದೇ ಮಟ್ಟದಲ್ಲಿ ಉಳಿಸುವುದಕ್ಕೆ ಅಲ್ಲಿರುವಂತಹ ಮೆಜಾರಿಟಿ ವೈದ್ಯರು, ಶುಶ್ರೂಷಕರು ಇನ್ನಿತರರು ಇದ್ದಾರೆ ಇವರೆಲ್ಲರೂ ಕೂಡ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.  ನನಗೆ ಅನಿಸುವುದೇನೆಂದರೆ, ರಾಜ್ಯದ ಬಹುತೇಕ ಜನರು ಮಧುಮೇಹ ರೋಗದಿಂದ ನರಳುತ್ತಿದ್ದಾರೆ.  ಡಾ. ಕಾಶೀನಾಥ್ ಎಂಬ ವೈದ್ಯರೊಬ್ಬರು ಇಂಗ್ಲೆಂಡ್‌ನಿಂದ ಆಗಾಗ ಬಂದು ಹೋಗುತ್ತಾರೆ. ಅವರು ಸಹ ಅತ್ಯಂತ ಪರಿಣಿತರಾದ ವೈದ್ಯರಾಗಿದ್ದಾರೆ. ಡಾ. ನರಸಿಂಹಶೆಟ್ಟಿರವರು ಮತ್ತು ಡಾ. ಕಾಶೀನಾಥ್‌ರವರು ಇನ್ನಿತರರು ಸೇರಿ ಬಹಳಷ್ಟು ಜನರಿಗೆ 20– 30 ಪೈಸೆಯಲ್ಲಿ ಮಧುಮೇಹವನ್ನು ಪರೀಕ್ಷೆ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ಇತ್ತೀಚೆಗೆ ನಡೆದ ಚರ್ಚೆಯಲ್ಲಿ ತಿಳಿಸಿದ್ದಾರೆ. ನಾನು ಹೇಳಬಯಸುವುದೇನೆಂದರೆ, ಸಾಮಾನ್ಯ ಜನರಿಗೆ ಇದು ಲಭ್ಯವಾಗುವ ದೃಷ್ಟಿಯಿಂದ ತಕ್ಷಣವೇ ಒಂದು ಆಸ್ಪತ್ರೆಯನ್ನು ಎಲ್ಲಾ ರೀತಿಯಲ್ಲೂ ಸ್ಥಾಪನೆಯಾಗುವುದಕ್ಕೆ ಇಂದಿರಾನಗರದಲ್ಲಿ ಒಂದು ಜಮೀನನ್ನು ಹಂಚಿಕೆ ಮಾಡಿದ್ದಾರೆ. ಹಂಚಿಕೆಯಾಗಿರುವ ಜಮೀನಿನಲ್ಲಿ ಯಾವುದೇ ಆಸ್ಪತ್ರೆಗಳಿಲ್ಲ. ಇಂದಿರಾನಗರದಲ್ಲಿರುವ ಜಾಗದಲ್ಲಿ time bound ಆಗಿ ಒಂದು ಕಟ್ಟಡವನ್ನು ಕಟ್ಟಿ ಇದನ್ನು ಅಲ್ಲಿಗೆ ಶಿಫ್ಟ್ ಮಾಡಬಹುದು ಎಂದು ಹೇಳುತ್ತೇನೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ I.N.U., (Institute of Nephro Urology) ಇದೆ. Nephrology and Urology ಮಧುಮೇಹಕ್ಕೆ ಸಂಬಂಧಿಸಿದ ವಿಚಾರವಾಗಿದೆ.  ಇವೆರಡನ್ನೂ ಒಂದೇ ಕಡೆ ಇಡುವುದರಿಂದ ಒಂದು ಕಡೆ ಖಾಯಂ ಸಿಬ್ಬಂದಿಯನ್ನು ನೇಮಕ ಮಾಡುವುದು, ಎರಡನೆಯದಾಗಿ ಮೂಲಭೂತಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಕಟ್ಟಡವನ್ನು ನಿರ್ಮಾಣ ಮಾಡುವುದು ಅದಕ್ಕೆ ಬೇಕಾದಂತಹ ಯಂತ್ರೋಪಕರಣಗಳನ್ನು ಕೊಟ್ಟು ಇಡೀ ರಾಜ್ಯದಲ್ಲಿ ಕೇವಲ ಬೆಂಗಳೂರು ನಗರಕ್ಕೆ ಸೀಮಿತವಾಗದೆ ನಾಲ್ಕು ವಿಭಾಗಗಳಲ್ಲಿ ಗುಲ್ಬರ್ಗಾ, ಬೆಳಗಾವಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಸೂರು ಇರಬಹುದು ಐಎನ್‌ಯು ಮತ್ತು ಮಧುಮೇಹದ ಆಸ್ಪತ್ರೆಯನ್ನು ನಾಲ್ಕು ವಿಭಾಗಗಳಲ್ಲಿ ಮಾಡುವುದಕ್ಕೆ ಸರ್ಕಾರ ಮುಂದಾಗಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಬಯಸುತ್ತೇನೆ.

**ಶ್ರೀ ರಮೇಶ್‌ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರವರು ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರಿನಲ್ಲಿ ಮಧುಮೇಹ ಸಂಸ್ಥೆ ನಡೆಯುತ್ತಿದೆ ಇಲ್ಲಿರುವ ಜನಸಂಖ್ಯೆಗೆ ಹೋಲಿಸಿದರೆ ಇದೊಂದು ಸಣ್ಣ ಆಸ್ಪತ್ರೆಯಾಗಿದೆ. ಅಲ್ಲಿಗೆ ಮಾನ್ಯ ರಾಮಚಂದ್ರಗೌಡರು, ಮಾನ್ಯ ಉಗ್ರಪ್ಪರವರು ಹೋಗಿರಬಹುದು ನಾನು ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. Latest equipments ಇದೆ. ಮಧುಮೇಹಿಗಳಿಗೆ ಒಳ್ಳೆಯ ಚಿಕಿತ್ಸೆ ದೊರೆಯುತ್ತದೆ. ಪ್ರಶ್ನೆಯೇನೆಂದರೆ, ಅಲ್ಲಿರುವಂತಹ ವೈದ್ಯರುಗಳು ಯಾರೂ ಖಾಯಂ ವೈದ್ಯರಲ್ಲ ಎಲ್ಲರೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವಂತಹವರಾಗಿದ್ದಾರೆ.

**(657) 9-6-2017/1.40/ಡಿಎಸ್-ಎಂಡಿ**

**ಶ್ರೀ ರಮೇಶ್‌ಬಾಬು(ಮುಂದು):-**

ಇನ್ನು ಅರೆ ವೈದ್ಯಾಧಿಕಾರಿಗಳು ಯಾರಿದ್ದಾರೆ ಅವರೆಲ್ಲಾ ಹೊರಗುತ್ತಿಗೆ ಆಧಾರದ ಮೇಲೆ ಇರತಕ್ಕಂಥವರು, Lab Assistant ಗಳಿರಬಹುದು, ಅಲ್ಲಿರುವಂತಹ ಬೇರೆ ಸಿಬ್ಬಂದಿ ಇರಬಹುದು, ಇವರೆಲ್ಲಾ ಅರೆ ಗುತ್ತಿಗೆಯಲ್ಲಿರತಕ್ಕಂಥವರು. ಆ ರೀತಿಯ ಆಸ್ಪತ್ರೆಗಳನ್ನು ರಾಜ್ಯದಲ್ಲಿ ತೆರೆಯಬೇಕು ಎಂದು ಮಾನ್ಯ ಉಗ್ರಪ್ಪನವರು ಹೇಳುತ್ತಿದ್ದಾರೆ. ಬೆಂಗಳೂರಿಗೆ ಇಂತಹ 7-8 ಆಸ್ಪತ್ರೆಗಳು ಬೇಕಾಗಿವೆ. ಈಗ ಏನಾಗಿದೆ ಎಂದರೆ ಬೆಂಗಳೂರಿನ ಪಶ್ಚಿಮ, ಪೂರ್ವ ಅಥವಾ ಉತ್ತರ ಭಾಗದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಬೇಕೆಂದರೆ ಪ್ರಯಾಣ ಬಹಳ ಕಷ್ಟಕರವಾಗಿದೆ. ಹಾಗಾಗಿ ಇಂದಿರಾ ನಗರಕ್ಕೆ shift ಮಾಡಿದರೂ ಕೂಡ ಜಯದೇವ ಆಸ್ಪತ್ರೆಯಲ್ಲೂ ಅದರ ಒಂದು wing ನ್ನು ಕಂಟಿನ್ಯೂ ಮಾಡಬೇಕು. ಬೆಂಗಳೂರಿನಲ್ಲಿ ಈ ತರಹದ ಕನಿಷ್ಠ 7 ರಿಂದ 8 ಯೂನಿಟ್‌ಗಳನ್ನು ಮಾಡಿದರೆ ಇಲ್ಲಿರುವಂತಹ ಮಧುಮೇಹಿ ರೋಗಿಗಳಿಗೆ ಅನುಕೂಲವಾಗುತ್ತದೆ. ಈಗೇನು proportionate ಆಗಿ ಸಕ್ಕರೆ ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ, ಅವರಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಏಕೆಂದರೆ, ಇಲ್ಲಿ ಬಹಳ ಕಡಿಮೆ ಖರ್ಚಿನಲ್ಲಿ ಚಿಕಿತ್ಸೆ ಸಿಗುತ್ತಿದೆ. ಸರ್ಕಾರದ ಒಳ್ಳೆಯ ಯೋಜನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಪ್ರಶ್ನೆ ಇರತಕ್ಕಂಥದ್ದು ಅಲ್ಲಿ ಖಾಯಂ ವೈದ್ಯರುಗಳು ಬೇಕಾಗುತ್ತದೆ. ಹೀಗಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಬ್ಬಂದಿಯನ್ನು ಖಾಯಂ ಮಾಡಬೇಕಾಗುತ್ತದೆ. ಅಲ್ಲಿಗೆ ಭೇಟಿ ನೀಡುವ ರೋಗಿಗಳಿಗೆ ಒಳಗಡೆ ಕುಳಿತುಕೊಳ್ಳುವುದಕ್ಕೆ ಜಾಗವಿಲ್ಲ. ಒಳಗಡೆ ಕನಿಷ್ಟ 30 ಜನರಷ್ಟೇ ಕುಳಿತುಕೊಳ್ಳಬಹುದಾದಷ್ಟು ಜಾಗವಷ್ಟೇ ಇರುವುದರಿಂದ ಉಳಿದವರೆಲ್ಲರೂ ಹೊರಗಡೆ ಬಂದು ನಿಂತುಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ದಯಮಾಡಿ ಅದನ್ನು ವಿಶಾಲವಾದ ಜಾಗದಲ್ಲಿ ಮಾಡಿ. ಅಲ್ಲಿ ನಿರ್ದೇಶಕರಾಗಿರುವಂತಹ ಶ್ರೀಯುತ ನರಸಿಂಹ ಶೆಟ್ಟಿಯವರು ನಿವೃತ್ತಿಯಾದ ಮೇಲೆ ಅವರ ಸ್ಥಾನಕ್ಕೆ ಯಾರನ್ನು ನೇಮಕಾತಿ ಮಾಡುತ್ತೀರೋ ಮಾಡಿ. Nephrology ವಿಭಾಗದಲ್ಲಿ ಕೇಶವ ಮೂರ್ತಿ ಎನ್ನುವ ಒಳ್ಳೆಯ ನಿರ್ದೇಶಕರನ್ನು ಬೇರೆ ಯಾವ ಕಾರಣಕ್ಕಾಗಿ ತೆಗೆದಿದ್ದಾರೆಯೋ ಗೊತ್ತಿಲ್ಲ, ಬದಲಾವಣೆಯಾಗಿದೆ. ಇಂತಹ ಒಳ್ಳೆಯ ಸಂಸ್ಥೆಗಳಲ್ಲಿ ನಿರ್ದೇಶಕರುಗಳನ್ನು ಖಾಯಂ ಮಾಡಿ ಕೆಲಸ ಮಾಡಬೇಕಾಗುತ್ತದೆ. ಯಾರಿಗೆ ಸೀನಿಯಾರಿಟಿ ಇರುತ್ತದೆ, ಯಾರಿಗೆ service motive ಇರುತ್ತದೆ ಅಂತಹ ವೈದ್ಯರುಗಳನ್ನು ಸರ್ಕಾರ ಮುಂದುವರಿಸಬೇಕಾಗುತ್ತದೆ. ದಯಮಾಡಿ ಸರ್ಕಾರ ಇದನ್ನು ಪರಿಗಣಿಸಬೇಕೆಂದು ಕೋರುತ್ತೇನೆ.

**ಶ್ರೀ ಶರಣಪ್ರಕಾಶ್ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಎಲ್ಲಾ ಹಿರಿಯ ಸದಸ್ಯರು ಈ ವಿಚಾರದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಈಗೇನು ನಾವು ಸವಲತ್ತುಗಳನ್ನು ಒದಗಿಸುತ್ತಿದ್ದೇವೆ ಅದು ಬರೀ OPD services ಇದೆ. ಅಲ್ಲಿ inpatient services ಇಲ್ಲ. ಇಂದಿರಾ ನಗರದಲ್ಲಿ 6 ಎಕರೆ 11 ಗುಂಟೆ ಜಮೀನು ಇದೆ, ಅಲ್ಲಿ ಒಂದು ಕಟ್ಟಡ ಕಟ್ಟಬೇಕೆಂದು ಈಗಾಗಲೇ ಎಸ್ಟಿಮೇಟ್ ತಯಾರಾಗಿದೆ. ಈಗ ಅದಕ್ಕೆ cabinet approval ಆಗಬೇಕಾಗಿದೆ ಅಷ್ಟೆ. ನಮ್ಮ ಇಲಾಖೆಯಿಂದ ಏನು ಮಾಡಬೇಕು ಅದನ್ನು ಮಾಡಿ ಕಳುಹಿಸಿದ್ದೇವೆ. ಅತೀ ಶೀಘ್ರದಲ್ಲಿಯೇ ಟೆಂಡರ್ ಕರೆದು ಅಲ್ಲಿ ಒಂದು ಸುಸಜ್ಜಿತವಾಗಿರುವಂತಹ Diabetology Institute ಕಟ್ಟುವುದಕ್ಕೆ ಎಲ್ಲಾ ತಯಾರಿಯನ್ನು ಮಾಡಿಕೊಂಡಿದ್ದೇವೆ. ಈ ವರ್ಷ ಆರ್ಥಿಕ ಇಲಾಖೆಯಿಂದ cabinet approval ಆದ ತಕ್ಷಣ ಟೆಂಡರ್ ಕರೆದು ಅಲ್ಲಿ ಸ್ಥಾಪನೆ ಮಾಡುವುದಕ್ಕೆ ಎಲ್ಲಾ ರೀತಿಯ ತಯಾರಿ ಮಾಡಿಕೊಂಡಿದ್ದೇವೆ. ಈಗ ಸದ್ಯಕ್ಕೆ ನಮ್ಮ ಸದಸ್ಯರುಗಳೆಲ್ಲರೂ ಹೇಳಿದ ಹಾಗೆ ಅಲ್ಲೆಲ್ಲಾ ತಾತ್ಕಾಲಿಕ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ. ಒಂದು ಸಲ building establish ಆದ ಮೇಲೆ permanent staff ಒದಗಿಸಲು ಏನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆಯೋ ಅದನ್ನೆಲ್ಲಾ ತೆಗೆದುಕೊಳ್ಳುತ್ತೇವೆ. ಅಲ್ಲಿ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡುವುದಕ್ಕೆ ನಾವು ಪ್ರಯತ್ನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆ. ಅದರ ಜೊತೆಗೆ ಈ Institute ಬೇರೆ ಬೇರೆ ಕಡೆಯಲ್ಲೂ ಕೂಡ ಮಧುಮೇಹಿ ರೋಗಿಗಳಿಗೆ ಏನೇನು ಸವಲತ್ತುಗಳನ್ನು ಕೊಡಬೇಕೋ, ಅದನ್ನು ವಿಸ್ತರಿಸುವುದಕ್ಕೆ ಪ್ರಯತ್ನ ಮಾಡುತ್ತದೆ.

**ಸಭಾಪತಿಯವರು:-** ಇಲ್ಲಿಗೆ ಈ ಚರ್ಚೆ ಮುಗಿದಿದೆ. ಈಗ ಸದನವನ್ನು ದಿನಾಂಕ 12-6-2017 ಸೋಮವಾರ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 12ನೇ ಜೂನ್ ಮಾಹೆ 2017ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~